ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 13 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 324 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕೆ.ಜಿ.ಕೊಪ್ಪಲಲ್ಲಿ ಒಳಚರಂಡಿ ಕಾಮಗಾರಿಗೆ ಶಾಸಕ ಹರೀಶ್‌ಗೌಡರಿಂದ ಚಾಲನೆ



ಮೈಸೂರು, ಮಾ. 12– ಮೈಸೂರಿನ ಕೆ.ಜಿ.ಕೊಪ್ಪಲು 42ನೇ ವಾರ್ಡಿನ ಅಂದಾಜು 45 ಲಕ್ಷ ರೂ. ವೆಚ್ಚದ ಒಳಚರಂಡಿ ಕಾಮಗಾರಿಗೆ ಶಾಸಕ ಕೆ. ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುವೆ. ಸ್ಪಷ್ಟ ಬಹುಮತವಿರುವ ಕಾಂಗ್ರೆಸ್ ಸರ್ಕಾರ ಇರುವುದರಿಂದ ಶಕ್ತಿಮೀರಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗುವುದು. ಅಭಿವೃದ್ಧಿ ಮೂಲಕ ಕ್ಷೇತ್ರವನ್ನು ರಾಜ್ಯದಲ್ಲಿ ಮಾದರಿಯಾಗಿ ಮಾಡುವ ಸಂಕಲ್ಪ ಹೊಂದಿದ್ದೇನೆ. ಇದನ್ನು ಪ್ರಾಮಾಣಿಕವಾಗಿ ಈಡೇರಿಸುತ್ತೇನೆ ಎಂಬ ದೃಢವಾದ ನಂಬಿಕೆಯಿದೆ ಎಂದರು.

ನನ್ನ ಶಾಸಕತ್ವದ ಅವಧಿಯಲ್ಲಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂಬ ಚಿಂತನೆ ಇಟ್ಟುಕೊಂಡಿದ್ದೇನೆ. ಆದ್ದರಿಂದ ಶಾಲು, ಸನ್ಮಾನಕ್ಕಿಂತ ಮೊದಲಾಗಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳತ್ತ ಯೋಚಿಸುವುದು ಮುಖ್ಯವಾಗಿದೆ. ಕಾಂಗ್ರೆಸ್ ಪಕ್ಷವು ಪ್ರಣಾಳಿಕೆಯಲ್ಲಿ ನೀಡಿರುವ ಎಲ್ಲಾ ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ಬಳಿಕ ಈಡೇರಿಸಿದೆ. ಇದನ್ನು ಪಕ್ಷಭೇದವಿಲ್ಲದೆ ಎಲ್ಲರ ಮನೆ–ಮನೆಗೆ ಮುಟ್ಟಿಸುವ ಕೆಲಸ ಕಾಂಗ್ರೆಸ್ ಕಾರ್ಯಕರ್ತರಿಂದಾಗಬೇಕು. ಜನರಿಗೆ ಸಹಾಯ ಮಾಡುವ ಮೂಲಕ ಜನರ ಪ್ರೀತಿಗಳಿಸಿ ಪಕ್ಷವನ್ನು ಭದ್ರವಾಗಿ ಕಟ್ಟೋಣ. ನಿಮ್ಮೊಂದಿಗೆ ನಾನು ಶಕ್ತಿಯಾಗಿರುತ್ತೇನೆ ಎಂದರು.

ನಗರಪಾಲಿಕೆ ಮಾಜಿ ಸದಸ್ಯ ಶಿವಕುಮಾರ್, ಮುಖಂಡರಾದ ಮಾದಪ್ಪ, ರಾಜ್‌ಕುಮಾರ್, ಬೋರಪ್ಪ, ಮಂಜುನಾಥ್ ಅಧಿಕಾರಿಗಳಾದ ಮುಸ್ತಫಾ, ನಂದೀಶ್ ನಟೇಶ್ ಮತ್ತಿತರರು ಹಾಜರಿದ್ದರು.

ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ ಉದ್ಘಾಟನೆ

ಒತ್ತಡಗಳನ್ನು ತಡೆಯಲು ಕ್ರೀಡೆಯಿಂದ ಸಾಧ್ಯ: ಡಿಸಿ ಡಾ.ಕೆ.ವಿ.ರಾಜೇಂದ್ರ ಅಭಿಮತ



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸರ್ಕಾರಿ ನೌಕರರ ಸಂಘದ ವತಿಯಿಂದ ಆಯೋಜಿದ್ದ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಗೋವಿಂದರಾಜು ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.12(ಜಿಎ)–ಅಧಿಕಾರಿಗಳು ವರ್ಷದ 365 ದಿನಗಳೂ ಕೆಲಸ ಮಾಡುತ್ತಾರೆ. ಈ ರೀತಿಯ ಕ್ರೀಡಾಕೂಟವನ್ನು ನಡೆಸುವುದರಿಂದ ಅವರು ಒತ್ತಡಗಳಿಂದ ಹೊರಬಂದು ಉತ್ತಮ ಮನಸ್ಥಿತಿ ಹೊಂದಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದೊಂದಿಗೆ ಚಾಮುಂಡಿ ವಿಹಾರ ಕ್ರೀಡಾಂಗಣಗಳಲ್ಲಿ ಆಯೋಜಿಸಿದ್ದ ಎರಡು ದಿನಗಳ ಜಿಲ್ಲಾ ಮಟ್ಟದ ನೌಕರರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಧಿಕಾರಿಗಳು ತಮ್ಮ ಪ್ರತಿಭೆಗಳನ್ನು ತೋರಿಸಲು ಈ ಕ್ರೀಡಾಕೂಟ ಒಳ್ಳೆಯ ಸಂದರ್ಭವಾಗಿದ್ದು, ಕ್ರೀಡಾ ಸ್ಫೂರ್ತಿ ಎನ್ನುವುದು ನಮ್ಮ ಕೆಲಸದ ವೈಖರಿಯನ್ನು ತಿಳಿಸುತ್ತದೆ. ಚುನಾವಣೆಯ ಸಂದರ್ಭವಾದ್ದರಿಂದ ಬಹಳ ಕಡಿಮೆ ಸಮಯದಲ್ಲಿ ಕ್ರೀಡಾಕೂಟವನ್ನು ಆಯೋಜಿಸಲಾಗಿದ್ದು, ಇದರಿಂದ ಚುನಾವಣಾ ಕೆಲಸದಲ್ಲಿ ಅಧಿಕಾರಿಗಳು ಇನ್ನೂ ಹೆಚ್ಚಿನ ಹುಮ್ಮಸಿನಿಂದ ಪಾಲ್ಗೊಳ್ಳಲು ಕ್ರೀಡಾಕೂಟ ಸಹಕಾರಿಯಾಗಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಅನಾರೋಗ್ಯ ಸಮಸ್ಯೆ ಹೆಚ್ಚಾಗುತ್ತಿದ್ದು, ಎಲ್ಲಾ ಅಧಿಕಾರಿಗಳು ಕೆಲಸದ ಜೊತೆಗೆ ತಮ್ಮ ವೈಯಕ್ತಿಕ ಆರೋಗ್ಯದ ಕಡೆ ಗಮನ ಕೊಡುವುದು ಬಹಳ ಮುಖ್ಯ. ನಾವೆಲ್ಲರೂ ಒಂದು ತಂಡವಾಗಿ ಯಾವುದೇ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಕ್ರೀಡಾಕೂಟ ಸ್ಫೂರ್ತಿಯಾಗಿದೆ ಎಂದರು. ಪ್ರಸ್ತುತ ಜಿಮ್‌ಗೆ ಹೋಗುವವರೇ ಹೆಚ್ಚಾಗಿ ಸಾವನ್ನಪ್ಪಿದ್ದಾರೆ ಎಂಬ ಮಾಹಿತಿ ಎಲ್ಲೆಡೆ ಹರಡುತ್ತಿದ್ದು, ಆ ಯೋಚನೆಯನ್ನು ಮನಸ್ಸಿನಿಂದ ತೆಗೆದುಹಾಕಿ ದೇಹವನ್ನು ಸದೃಢವಾಗಿ ಇಟ್ಟುಕೊಳ್ಳಬೇಕು ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಒಬ್ಬ ನೌಕರನಿಗೆ ಎರಡು, ಮೂರು ಹುದ್ದೆಗಳ ಜವಬ್ದಾರಿ ಕೊಟ್ಟಿರುವುದರಿಂದ ಒತ್ತಡ ಹೆಚ್ಚಾಗುತ್ತಿದೆ. ಅದಕ್ಕೆ ವಿಧಾನಪರಿಷತ್‌ನಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿ ಎಂದು ಒತ್ತಾಯಿಸಿದರು.

ಮನುಷ್ಯ ಆರೋಗ್ಯವಾಗಿರಲು ಯೋಗ, ವಾಕಿಂಗ್ ಜೊತೆಗೆ ಯಾವುದಾದರೊಂದು ಕ್ರೀಡೆಯಲ್ಲಿ ಭಾಗವಹಿಸಬೇಕು. ಕ್ರೀಡೆಗೆ ಯಾವುದೇ ಜಾತಿ, ಭೇದವಿಲ್ಲ. ಈ ಕ್ರೀಡೆ ಆಡಲು ಐಎಎಸ್, ಕೆಎಎಸ್, ಅಧಿಕಾರಿಗಳ ಮಕ್ಕಳು ಬರುವುದಿಲ್ಲ. ಎಲ್ಲರೂ ಗ್ರಾಮೀಣ ಭಾಗದಿಂದ ಬಂದವರೆ ಹೆಚ್ಚಾಗಿದ್ದೀರಿ. ಅಂತರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ಇಲ್ಲಿ ಇದ್ದಿರಿ. ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಗೋವಿಂದರಾಜು, ಸಂಘದ ಉಪಾಧ್ಯಕ್ಷರು, ಕಾರ್ಯದರ್ಶಿಗಳು ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೃಗಾಲಯದಲ್ಲಿ ಬೇಸಿಗೆ ಶಿಬಿರಕ್ಕೆ ಅರ್ಜಿ ಆಹ್ವಾನ



ಮೈಸೂರು,ಮಾ.12–ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯವು 12ರಿಂದ 18 ವರ್ಷದ ವಯೋಮಿತಿಯ ವಿದ್ಯಾರ್ಥಿಗಳಿಗಾಗಿ ಬೇಸಿಗೆ ಶಿಬಿರವನ್ನು ಏ.15ರಿಂದ 24ರವರೆಗೆ ಮೊದಲ ಬ್ಯಾಚ್ ಮತ್ತು ಮೇ 6ರಿಂದ 15ರವರೆಗೆ ಎರಡನೇ ಬ್ಯಾಚ್‌ನ್ನು ಆಯೋಜಿಸಿದೆ.

ಮೃಗಾಲಯದಲ್ಲಿ ಪ್ರಾಣಿಗಳ ನಿರ್ವಹಣೆ, ಪ್ರಾಣಿಗಳ ನಡವಳಿಕೆಯ ಅಧ್ಯಯನ, ಕಾಡು ಪ್ರಾಣಿಗಳ ಸಂರಕ್ಷಣೆ, ಈ ವಿಷಯಗಳ ಬಗ್ಗೆ ಮಕ್ಕಳಿಗೆ ತಿಳಿಸುವುದು ಈ ಬೇಸಿಗೆ ಶಿಬಿರದ ಮೂಲ ಉದ್ದೇಶವಾಗಿದ್ದು, ಮೃಗಾಲಯದ ಅಧಿಕಾರಿಗಳು ಮತ್ತು ಇತರೆ ವಿಷಯ ತಜ್ಞರು ಭಾಗವಹಿಸಿ ಸಂವಾದ ನಡೆಸಲಿದ್ದಾರೆ. ಆಸಕ್ತರು ಮಾ.11ರಿಂದ 16ರವರೆಗೆ ಮೃಗಾಲಯದ ಕಚೇರಿಯಿಂದ ಅರ್ಜಿ ಪಡೆದು, ಮಾ.18 ರೊಳಗೆ ಭರ್ತಿ ಮಾಡಿದ ಅರ್ಜಿ ಸಲ್ಲಿಸಬೇಕು. ಮೊದಲು ಬಂದವರಿಗೆ ಆದ್ಯತೆ ಮೇಲೆ 60 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಶಿಬಿರದ ಶುಲ್ಕ ರೂ. 1500 ಅರ್ಜಿಯೊಂದಿಗೆ ಪಾವತಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9686668099 ಹಾಗೂ edumysore99@gmail.com.

ಚಾಮುಂಡಿಬೆಟ್ಟದ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಮಂಡಲ ಪೂಜೆ, ಹೋಮ, ಹವನ



ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳ ನೌಕರರ ಸಂಘದ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.12–ಚಾಮುಂಡಿ ಬೆಟ್ಟದಲ್ಲಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಶಾಸಕರ ಅನುದಾನದಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ (ಮಾ.12) ಕುಂಬಾಭಿಷೇಕ ಸಂಪನ್ನಗೊಂಡು ಇಂದಿಗೆ 48ನೇ ದಿನದ ಪ್ರಯುಕ್ತ ಬೆಳಿಗ್ಗೆ ವಿಶೇಷ ಮಂಡಲ ಪೂಜೆ, ಹೋಮ, ಹವನಾದಿಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ನೌಕರರ ಸಂಘದ ಅಧ್ಯಕ್ಷರಾಗಿ 17ನೇ ಬಾರಿ ಆಯ್ಕೆಯಾದ ಶ್ರೀಧರ ದೀಕ್ಷಿತ್, ಉಪಾಧ್ಯಕ್ಷರಾದ ಎನ್.ಡಿ.ಸೋಮಶೇಖರ್, ಶ್ರೀಹರಿ, ಪದಾಧಿಕಾರಿ ಎಂ.ಡಿ.ಸೋಮಣ್ಣ, ನಿರ್ದೇಶಕರಾದ ಮಣೆಗಾರ್ ಪ್ರಸಾದ್, ಎಂ.ಆನಂದ್, ಆನಂದ್ ಹಾಗೂ ಶಿವಮಲ್ಲು ಅವರಿಗೆ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯಿಂದ ಗೌರವ ಸಮರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ನಾಯಕರ ಜನಾಂಗದ ಮುಖಂಡ ಮಂಜುನಾಯಕ್, ನಾಗೇಂದ್ರ, ವೆಂಕಟೇಶ್, ಪ್ರಕಾಶ್, ಸಿದ್ದರಾಜು, ಸುಬ್ರಹ್ಮಣ್ಯ, ಶಂಕರ್, ಆನಂದ ಸ್ವಾಮಿ, ಲಕ್ಷ್ಮಣ ನಾಯಕ, ಸ್ವಾಮಿ, ಜಯರಾಂ ಹಾಗೂ ಸಮಿತಿ ಪದಾಧಿಕಾರಿಗಳು, ಚಾಮುಂಡಿಬೆಟ್ಟದ ಗ್ರಾಮಸ್ಥರು ಇದ್ದರು.

ತೂಗುದೀಪ ದರ್ಶನ್ ಅಭಿಮಾನಿ ಬಳಗದಿಂದ ಪಕ್ಷಿ–ಪ್ರಾಣಿಗಳ ಸಂರಕ್ಷಿಸುವ ಜಾಗೃತಿ



ಮೈಸೂರು,ಮಾ.12–ಮೈಸೂರಿನ ನ್ಯಾಯಾಲಯದ ಎದುರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿನ ಮರಗಳಲ್ಲಿ ಪಕ್ಷಿ–ಪ್ರಾಣಿಗಳಿಗೆ ಆಹಾರ, ನೀರು ಇರಿಸಲಾಯಿತು.

ಕಾರ್ಯಕ್ರಮಕ್ಕೆ ಪರಿಸರ ಪ್ರೇಮಿ ಬನ್ನೂರು ಮಹೇಂದ್ರ ಸಿಂಗ್ ಕಾಳಪ್ಪ ಡಬ್ಬಿಗಳಿಗೆ ಆಹಾರ–ಧಾನ್ಯ ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿ, ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಮನೆಯ ಮೇಲೆ ಅಥವಾ ಮನೆಯ ಮುಂದೆ ಪಕ್ಷಿ–ಪ್ರಾಣಿಗಳಿಗೆ ನೀರಿನ ಬಟ್ಟಲು ಇಡಿ ಎಂದು ದರ್ಶನ್ ಅವರು ಅಭಿಮಾನಿಗಳಿಗೆ ಸಂದೇಶ ನೀಡಿದ್ದು, ಅದರ ಹಿನ್ನೆಲೆಯಲ್ಲಿ ಅಭಿಮಾನಿಗಳಾದ ನಾವು ನೀರು ಮತ್ತು ಆಹಾರ ಕಲ್ಪಿಸುವ ಕಾರ್ಯ ಮಾಡುತ್ತಿದ್ದೇವೆ. ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಸಕಲ ಜೀವರಾಶಿಗಳಲ್ಲಿ ದೇವರನ್ನು ಕಾಣು ಎಂದು ನಮ್ಮ ಪೂರ್ವಜರು ತಿಳಿಸಿದ್ದಾರೆ. ಪಕ್ಷಿಗಳಿಗೆ ನವಣೆ, ಕಡಲೆ ಹೊಟ್ಟು, ಅಕ್ಕಿ ನುಚ್ಚು ಹಾಗೂ ಆಹಾರದ ಬಗ್ಗೆ ಮಾಹಿತಿ ನೀಡಿದರು ಮತ್ತು ಮರಗಳಿಗೆ ಮೊಳೆ ಹೊಡೆಯದಿರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ನೋಡಲ್ ಅಧಿಕಾರಿ ಹಾಗೂ ಸದಸ್ಯರಾದ ಎಸ್.ಕೆ.ಮಿತ್ತಲ್, ವಕೀಲರ ಅಸೋಸಿಯೇಷನ್ ಉಪಾಧ್ಯಕ್ಷ ಉಮೇಶ್, ದರ್ಶನ್ ಅಭಿಮಾನಿ ಬಳಗದ ಸಂಚಾಲಕ ಬೈರತಿ ಲಿಂಗರಾಜು, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪ್ರಕಾಶ್, ಪ್ರಿಯದರ್ಶನ್, ಜಿ.ರಾಘವೇಂದ್ರ, ಕಡಕೊಳ ಜಗದೀಶ್, ಎಸ್.ಎನ್.ರಾಜೇಶ್, ರಾಕೇಶ್, ಸುಚಿಂದ್ರ, ವಿಜಯ್ ನಾಯಕ್, ಭಾಸ್ಕರ್, ಸಿದ್ದರಾಜು ಇನ್ನಿತರರಿದ್ದರು.

ನಿಧನ

ಕೆ.ರಾಮ್‌ದೇವ್




ಮೈಸೂರು,ಮಾ.12–ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ (ಪಿಎಸ್‌ಎಸ್‌ಕೆ) ನಿವೃತ್ತ ನೌಕರ ಮತ್ತು ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಕೆ. ರಾಮ್‌ದೇವ್ (81) ವಯೋಸಹಜ ಕಾಯಿಲೆಯಿಂದ ಸೋಮವಾರ ಮಧ್ಯರಾತ್ರಿ ನಿಧನರಾದರು.

ವಾರ್ತಾ ಮತ್ತು ಪ್ರಸಾರ ಇಲಾಖೆ ನಿವೃತ್ತ ಜಂಟಿ ನಿರ್ದೇಶಕರಾದ ಕೆ. ವಿಜಯಕುಮಾರ್ ಅವರ ಕಿರಿಯ ಸಹೋದರರಾದ ಇವರು ಪತ್ನಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ರಾಮ್‌ದೇವ್ ಅವರು ಗೌಡರ ಗದ್ದಲ ಸೇರಿದಂತೆ ಹಲವಾರು ನಾಟಕಗಳಲ್ಲಿ ನಟಿಸಿದ್ದಾರೆ. ಅಲ್ಲದೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ ಮತ್ತು ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಪ್ರೊ.ಭಾಷ್ಯಂ ಸ್ವಾಮೀಜಿಯವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ. ಎಸ್. ಶಿವಕುಮಾರ್



ಮೈಸೂರು: ಮಹಾರಾಣಿ ಪದವಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ಹಾಗೂ ಯೂನಿವರ್ಸಿಟಿ ಬಡಾವಣೆ ನಿವಾಸಿ ಪ್ರೊ. ಎಸ್.ಶಿವಕುಮಾರ್ (76) ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಮತ್ತು ಅಳಿಯಂದಿರು, ಸಹೋದರ ಜೆಎಸ್‌ಎಸ್ ಮುಕ್ತ ವಿದ್ಯಾಲಯದ ನಿರ್ದೇಶಕ ಸಿ.ಎಸ್.ಶಿವಸ್ವಾಮಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಲಲಿತಾದ್ರಿಪುರ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಪ್ರತಾಪ್‌ಸಿಂಹರಿಗೆ ಬಿಜೆಪಿ ಟಿಕೆಟ್ ನೀಡಿ

ವೀರ ಮಡಿವಾಳರ ಜಾಗೃತಿ ಯುವ ಬಳಗ ಆಗ್ರಹ



ಮೈಸೂರು, ಮಾ.12(ಜಿಎ)– ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ತಮ್ಮ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ಅವರಿಗೆ ಈ ಬಾರಿಯ ಲೋಕಸಭಾ ಚುನಾವಣೆಗೆ ಬಿಜೆಪಿ ಟಿಕೆಟ್ ನೀಡಿ ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಮೈಸೂರು ಜಿಲ್ಲಾ ವೀರ ಮಡಿವಾಳರ ಜಾಗೃತಿ ಯುವ ಬಳಗದ ಅಧ್ಯಕ್ಷ ಮಾದುರಾಜ್ ಮಡಿವಾಳ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಲ್ಲಿ ಪ್ರತಾಪ್‌ಸಿಂಹ ಅವರಿಗಿಂತ ಉತ್ತಮ ಅಭ್ಯರ್ಥಿ ಇಲ್ಲ. ಒಂದು ವೇಳೆ ಅವರಿಗೆ ಟಿಕೆಟ್ ತಪ್ಪಿದರೆ ಅದರ ಲಾಭ ಕಾಂಗ್ರೆಸ್ ಪಡೆಯುತ್ತದೆ. ಮೈಸೂರು ರಾಜವಂಶಸ್ಥರು ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಆದರೆ ಇದೇ ಕಾರಣದಿಂದಾಗಿ ಯದುವೀರ್ ಅವರನ್ನು ಈ ಕ್ಷೇತ್ರದಲ್ಲಿ ಕಣಕ್ಕಿಳಿಸುವುದು ಸರಿಯಲ್ಲ. ಇವರು ಕೇವಲ ಈ ಭಾಗದ ಮೇಲೆ ಪ್ರಭಾವ ಬೀರಬಲ್ಲವರಾಗಿದ್ದಾರೆ ಎಂದು ಹೇಳಿದರು.

ಪ್ರತಾಪ್‌ಸಿಂಹ ಅವರಿಗೆ ಯಾವ ಕಾರಣಕ್ಕೆ ಟಿಕೆಟ್ ತಪ್ಪಿಸಲು ಹುನ್ನಾರ ನಡೆಯುತ್ತಿದೆ ಎಂಬುದು ತಿಳಿಯುತ್ತಿಲ್ಲ. ಸ್ವಾರ್ಥ ರಾಜಕಾರಣಕ್ಕೆ ಮೈಸೂರು–ಕೊಡಗು ಕ್ಷೇತ್ರದ ಜನತೆಗೆ ಪ್ರತಾಪ್ ಸಿಂಹರಂತಹ ನಾಯಕನನ್ನು ಬಲಿಕೊಡಬಾರದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಬಿ.ರವಿ, ಬಳಗದ ಸಂಚಾಲಕರಾದ ಮಣಿಕಂಠ, ಸಿದ್ದಪ್ಪಾಜಿ ಉಪಸ್ಥಿತರಿದ್ದರು.

ಲಲಿತಾದ್ರಿಪುರ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ಆಯ್ಕೆ



ಮೈಸೂರು,ಮಾ.12–ಮೈಸೂರು ತಾಲೂಕು ಲಲಿತಾದ್ರಿಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿ ಶಿವರಾಜು, ಎಸ್.ಕುಮಾರ್, ಶಂಕರ, ನಾಗಣ್ಣ, ರಾಜಪ್ಪ, ಪಿ.ನಾಗರಾಜು, ಲಕ್ಷ್ಮಣ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದಿಂದ ರಾಮಾಚಾರಿ, ಕಾಳಪ್ಪ, ಚಿಕ್ಕಸ್ವಾಮಿ, ತಾಯಮ್ಮ, ಲಕ್ಷ್ಮಮ್ಮ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಅಧ್ಯಕ್ಷ ಕಾಳಪ್ಪ, ವೀರಶೈವ ಮಹಾಸಭಾಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ತಮ್ಮಯ್ಯಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜು, ಮುಖಂಡ ಗಂಗಾಧರ, ಗ್ರಾಮ ಪಂಚಾಯಿತಿ ಅಧ್ಯಕ್ಷ ಟಿ.ಎನ್. ನಂದೀಶ್, ರಾಜು, ಲಲಿತಾದ್ರಿಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರು ಹಾಜರಿದ್ದರು.

ಮಹಿಳೆ ಧೈರ್ಯಶಾಲಿಯಾಗಿ ಮುಂದೆ ಸಾಗಿದರೆ ಯಶಸ್ಸು

ಮೈಸೂರು ಜಿಪಂ ಉಪಕಾರ್ಯದರ್ಶಿ ಬಿ.ಎಂ.ಸವಿತಾ ಅಭಿಮತ



ಮೈಸೂರು, ಮಾ.12–ಮಹಿಳೆಯರು ಎಲ್ಲಾ ರಂಗಗಳಲ್ಲಿಯೂ ಮುಂಚೂಣಿಯಲ್ಲಿದ್ದು, ಧೈರ್ಯವಾಗಿ ಮುಂದೆ ಸಾಗಿದರೆ ಯಶಸ್ಸು ಖಂಡಿತಾ ದೊರೆಯುತ್ತದೆ ಎಂದು ಮೈಸೂರು ಜಿಪಂ ಉಪ ಕಾರ್ಯದರ್ಶಿ ಬಿ.ಎಂ.ಸವಿತಾ ತಿಳಿಸಿದರು.

ಮೈಸೂರಿನಲ್ಲಿರುವ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಪರಿಶಿಷ್ಟ ಪಂಗಡಗಳ ಇಲಾಖೆ ಸಹಯೋಗದೊಂದಿಗೆ ನಡೆದ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ, ಮಾತನಾಡಿದರು.


ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಯೋಜನಾ ಸಮನ್ವಯಾಧಿಕಾರಿ ಎಂ.ಕೆ ಮಲ್ಲೇಶ್ ಮಾತನಾಡಿ ಗಂಡಸರಿಗೆ ಪ್ರತಿ ಹಂತದಲ್ಲಿಯೂ ಮಹಿಳೆಯರ ರಕ್ಷಣೆ ಬೇಕು. ಬಾಲ್ಯದಲ್ಲಿ ತಾಯಿ, ಯೌವ್ವನದಲ್ಲಿ ಮಡದಿ, ವೃದ್ಧಾಪ್ಯದಲ್ಲಿ ನಮ್ಮನ್ನು ನಮ್ಮ ಹೆಣ್ಣು ಮಕ್ಕಳೆ ಜೋಪಾನವಾಗಿ ನೋಡಿಕೊಳ್ಳುತ್ತಾರೆ. ಆದ್ದರಿಂದ ಮಹಿಳೆಯರಿಲ್ಲದೆ ಪುರುಷರು ಸಾಧನೆ ಮಾಡಲು ಸಾಧ್ಯವಿಲ್ಲ ಎಂದರು.

ಯೂನಿಯನ್ ಬ್ಯಾಂಕಿನ ರೀಜಿನಲ್ ಮುಖ್ಯಸ್ಥ ಸುನಿಲ್ ವಿ.ಪಾಟೀಲ್ ಮಾತನಾಡಿ, ಯೂನಿಯನ್ ಬ್ಯಾಂಕಿನಿಂದ ಮಹಿಳೆಯರಿಗೆ ಇರುವ ಯೋಜನೆಗಳ ಬಗ್ಗೆ ವಿವರಿಸಿದರು. ಸಮಾರಂಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಹೆಚ್.ಎಸ್.ಬಿಂದ್ಯಾ, ಯೂನಿಯನ್ ಬ್ಯಾಂಕಿನ ಸಿನಿಬಾ ಕುಮಾರಿ, ವಾರ್ಡನ್ ಸರಸ್ವತಿ, ಬ್ಯಾಂಕಿನ ಮಹಿಳಾ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಮಾ.29ರಿಂದ ಈಜು ತರಬೇತಿ ಶಿಬಿರ

ಮೈಸೂರು,ಮಾ.12–ಮೈಸೂರಿನ ದಿ ಕಾಸ್ಮೋಪಾಲಿಟನ್ ಕ್ಲಬ್ ವತಿಯಿಂದ ಬೇಸಿಗೆ ಈಜು ತರಬೇತಿ ಹಮ್ಮಿಕೊಳ್ಳಲಾಗಿದೆ. ತರಬೇತಿಯು ಮಾ.29ರಿಂದ 21 (ಬೆ. 9–10, ಸಂಜೆ 4–5); ಏ.25ರಿಂದ ಮೇ 18 (ಬೆ. 9–10, ಸಂಜೆ 4–5)ವರೆಗೆ ನಡೆಯಲಿದೆ. ಮಾಹಿತಿಗೆ ಮೊ.9845974888, ದೂ.0821–2423881, 2422355 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.3.2024 ಬುಧವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ,
ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ– ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ– ಮೂಕನಹಳ್ಳಿ ರಂಗಸ್ವಾಮಿ, 6.40 ಪದ ಸಂಸ್ಕೃತಿ–ಡಾ. ಕೆ.ಎಲ್. ಪ್ರಸನ್ನಾಕ್ಷಿ, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, 9.00 ವೃತ್ತಿ ಮಾರ್ಗದರ್ಶನ–ಪಶುವೈದ್ಯ ವಿಜ್ಞಾನ ಮತ್ತು ಪಶುಸಂಗೋಪನೆ ಕುರಿತು ಡಾ.ಶಿವಕುಮಾರ್ ಅವರೊಂದಿಗೆ ಮಾತುಕತೆ, 10.00 ಅಜಯ್ ಪೋಹಂಕರ್ – ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ವಿದ್ಯಾ ಭೂಷಣ, ಪಿ. ರಮಾ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಅಮೃತಾ ನಿತಿನ್, 3.00 ನಂದಿತಾ–ಹಾಡುಗಾರಿಕೆ, 4.00 ಮಹಿಳಾರಂಗ–'ಸ್ತ್ರೀ ಚೇತನ'. ಭಾಗವಹಿಸುವವರು ಗಾಯಕಿ ಹಾಗೂ ದಂತ ವೈದ್ಯೆ ಡಾ. ಸ್ನೇಹಶ್ರೀ ನಿರ್ಮಲ ಕುಮಾರ್, 4.45 ಹಿಂದಿ ಪಾಠ, ಪ್ರಸ್ತುತಿ– ಎಸ್. ಈಶ್ವರ್ ಭಟ್, 6.50 ಕೃಷಿರಂಗ–ಸಾವಯವ ಕೃಷಿಗೆ ಸೂಕ್ತವಾದ ತಳಿ ಹಾಗೂ ಬಿತ್ತನೆ ಬೀಜ ಪೂರೈಕೆ ಕುರಿತು ನೇರ್ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಜಿ. ಕೃಷ್ಣಪ್ರಸಾದ್, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಸಮೀರ್ ಎಲ್. ರಾವ್–ಬಾನ್ಸುರಿ ವಾದನ, 10.00 ಹಳ್ಳೀಹಾಡು, 10.30 ಸವಿನೆನಪು.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಎಸ್ಪಿ ಶ್ರೀಮತಿ ಸೀಮಾ ಲಾಟ್ಕರ್, ಅಧ್ಯಕ್ಷತೆ : ಶ್ರೀ ಛಾಯಾದೇವಿ ವಿದ್ಯಾನಿಕೇತನ ಟ್ರಸ್ಟ್ ಅಧ್ಯಕ್ಷ ಡಾ. ಬಿ. ಬಾನುಪ್ರಕಾಶ್, ಉಪಸ್ಥಿತರು : ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಡಾ. ಅಂತೋಣಿ ಪಾಲ್ ರಾಜ್ ಸಿ., ಸ್ಥಳ: ಮಹಾವಿದ್ಯಾಲಯ ಸಭಾಂಗಣ, ರಾಜೇಂದ್ರನಗರ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಮಹಿಳಾ ವಸತಿ ನಿಲಯದ ವೇದಿಕೆ ಉದ್ಘಾಟನೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಅಪರ ಪೊಲೀಸ್ ಅಧೀಕ್ಷಕರಾದ ಡಾ. ಬಿ.ಎನ್. ನಂದಿನಿ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಉಪಸ್ಥಿತರು : ಪದವಿ ಕಾಲೇಜು ಪ್ರಾಂಶುಪಾಲರಾದ ಡಾ. ಎಸ್. ಪ್ರತಿಭಾ, ಎಸ್. ಸೋಮಶೇಖರ, ನಿಲಯ ಪಾಲಕರಾದ ಕೆ.ಜಿ. ಅನಿತಾ, ಸ್ಥಳ: ಸುವರ್ಣ ಮಹೋತ್ಸವ ಭವನ, ಮ. 3.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಮಾಜಿ ಶಾಸಕ ದಿವಂಗತ ವಾಸು ಶ್ರದ್ಧಾಂಜಲಿ ಕಾರ್ಯಕ್ರಮ, ಉಪಸ್ಥಿತರು : ಮಡ್ಡೀಕೆರೆ ಗೋಪಾಲ್, ಡಾ. ಪದ್ಮಾಶೇಖರ್, ಡಾ. ಲತಾರಾಜಶೇಖರ್, ಡಾ. ಹೆಚ್.ಬಿ. ರಾಜಶೇಖರ್, ಡಾ. ಕೆ. ಲೀಲಾಪ್ರಕಾಶ್, ಪ್ರೊ. ರಾಮೇಗೌಡ, ಡಾ.ಪುಷ್ಪಾ ಅಯ್ಯಂಗಾರ್, ಗಿರೀಗೌಡ, ಮಾನಸ, ಚಂದ್ರಶೇಖರ್, ಡಾ. ವೈ.ಡಿ. ರಾಜಣ್ಣ, ಮ.ನ. ಲತಾಮೋಹನ್, ರಾಜಶೇಖರ ಕದಂಬ, ಜೈನಹಳ್ಳಿ ಸತ್ಯನಾರಾಯಣಗೌಡ, ಶ್ರೀಮತಿ ಮಂಜುಳ ಮಾನಸ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ, ಸಂಜೆ 4.30ಕ್ಕೆ.

■ **ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ:** ರಜತ ಮಹೋತ್ಸವದ ಸ್ಮರಣ ಸಂಚಿಕೆ (ಸಹಕಾರ ಮಿತ್ರ) ಲೋಕಾರ್ಪಣೆ ಹಾಗೂ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಸಂಚಿಕೆ ಲೋಕಾರ್ಪಣೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಆಶಯ ನುಡಿ: ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ದಿವಾಕರ ಜಿ.ಹೆಗಡೆ, ಮುಖ್ಯ ಅತಿಥಿಗಳು: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಸ್ಥಳ: ಪೈವಿಸ್ತಾ ಹೋಟೆಲ್ ಸಭಾಂಗಣ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 6.30 ರಿಂದ ಶ್ರೀ ಮದನಗೋಪಾಲಕೃಷ್ಣ ಮಹಾಯಾಗ ಹಾಗೂ ನವಗ್ರಹ ಪುರಸ್ಸರ ಧನ್ವಂತರೀ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಜಯಲಕ್ಷ್ಮಿಪುರಂ.

■ **ಶ್ರೀ ದಂಡಿನ ಮಾರಮ್ಮನವರ ಪೂಜಾ ಮಹೋತ್ಸವ ಸಮಿತಿ :** ಶ್ರೀ ಮನೆಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವದ ಅಂಗವಾಗಿ ಶ್ರೀ ರೇಣುಕಾದೇವಿ ಅಮ್ಮನವರ 38ನೇ ವರ್ಷದ ವಾರ್ಷಿಕೋತ್ಸವ, ಜೀರ್ಣೋದ್ಧಾರ ಮಹಾ ಕುಂಬಾಭಿಷೇಕ ಮಹೋತ್ಸವ, ಬೆಳಿಗ್ಗೆ ಅಮ್ಮನವರ ವರ್ಧಂತಿ ಪ್ರಯುಕ್ತ ಪುಣ್ಯಾಹ ಮೂಲಮಂತ್ರ ಹೋಮ ಕಲಾ ಹೋಮ, ತತ್ತ್ವ ಹೋಮ, ಪ್ರಾಣ ಪ್ರತಿಷ್ಠೆ, ನಾಡಿ ಸಂಧಾನ, ಪೂರ್ಣಾಹುತಿ, ಮಹಾ ಕುಂಬಾಭಿಷೇಕ ಅಲಾಂಕರ ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 7 ಗಂಟೆಗೆ ಶ್ರೀ ರೇಣುಕಾದೇವಿ ಅಮ್ಮನವರ ಉತ್ಸವ ಮೂರ್ತಿ ಮೆರವಣಿಗೆ, 108 ಆರತಿಯೊಂದಿಗೆ ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಸ್ಥಳ: ಶ್ರೀ ರೇಣುಕಾದೇವಿ ಕರಗ ದೇವಸ್ಥಾನ, ಇಟ್ಟಿಗೆಗೂಡು.

ಹಾರೋಹಳ್ಳಿ ಗ್ರಾಮ (ಮೈಸೂರು ತಾಲೂಕು)

■ **ಮೈಸೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ : ಹಾರೋಹಳ್ಳಿ ಗ್ರಾಪಂ ಸದಸ್ಯೆ ಶ್ರೀಮತಿ ಮಮತ ಮಹದೇವಸ್ವಾಮಿ, ಬೆಳಗ್ಗೆ 9ಕ್ಕೆ ಡಾ. ಎಚ್.ವಿ. ದೀಪಕ್ ಅವರಿಂದ ಪಶು ವೈದ್ಯಕೀಯ ತಪಾಸಣಾ ಶಿಬಿರ, ಸಂಜೆ 4.30ಕ್ಕೆ ಸಹಾಯಕ ಪ್ರಾಧ್ಯಾಪಕ ಪ್ರೊ. ಜೆ. ಗಿರೀಶ್ ಅವರಿಂದ ರಾಷ್ಟ್ರದ ಅಭಿವೃದ್ಧಿಯಲ್ಲಿ ಯುವ ಜನರ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಾರೋಹಳ್ಳಿ ಗ್ರಾಪಂ ಉಪಾಧ್ಯಕ್ಷೆ ಶ್ರೀಮತಿ ಜ್ಯೋತಿ ಮಹದೇವನಾಯಕ, ಮುಖ್ಯ ಅತಿಥಿಗಳು : ಸ್ವಾಮಪ್ಪ, ಲೋಕೇಶ್, ಮಂಚಯ್ಯ, ಸಿದ್ದರಾಜು, ಚಲುವರಾಜು, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರೋಹಳ್ಳಿ ಗ್ರಾಮ, ಮೈಸೂರು ತಾಲೂಕು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 13 ಬುಧವಾರ 2024

ಸಂಪುಟ: 44 | ಸಂಚಿಕೆ: 324 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪರಿಗೆ ರಾಜ್ಯದಲ್ಲಿ ಲೋಕಸಭಾ ಚುನಾವಣಾ ಜವಾಬ್ದಾರಿ

● ಅಭ್ಯರ್ಥಿಗಳ ಆಯ್ಕೆಯಲ್ಲೂ ಬಿಎಸ್‌ವೈ ಮಾತಿಗೆ ಹೆಚ್ಚು ಮನ್ನಣೆ ● ತಮ್ಮ ಪಾಲಿನ 21 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಅಂತಿಮ: ಬಾಕಿ ನಾಲ್ಕು ವರಿಷ್ಠರ ತೀರ್ಮಾನಕ್ಕೆ



ಬೆಂಗಳೂರು, ಮಾ.12(ಕುಂಶಿ)–ಮಾಜಿ ಮುಖ್ಯಮಂತ್ರಿ ಹಾಗೂ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಹೆಗಲಿಗೆ ಕರ್ನಾಟಕ ಲೋಕಸಭಾ ಚುನಾವಣೆ ಜವಾಬ್ದಾರಿಯನ್ನು ಬಿಜೆಪಿ ವರಿಷ್ಠರು ಹೊರಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಿನ್ನೆ ನಡೆದ ಚುನಾವಣಾ ಸಂಸದೀಯ ಮಂಡಳಿ ಸಭೆಯಲ್ಲಿ ಕರ್ನಾಟಕದ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಯಡಿಯೂರಪ್ಪ ಅವರ ಬಹುತೇಕ ಶಿಫಾರಸುಗಳಿಗೆ ಮನ್ನಣೆ ನೀಡುವ ಮೂಲಕ ಅವರನ್ನು ಗೆಲ್ಲಿಸಿಕೊಂಡು ಬರುವ ಜವಾಬ್ದಾರಿಯನ್ನೂ ನೀಡಿದ್ದಾರೆ. ಪಕ್ಷದ ಮುಖಂಡರು, ಕಾರ್ಯಕರ್ತರ ಜೊತೆಗೆ ಸಮಾಜದ ವಿವಿಧ ಸ್ತರಗಳಲ್ಲಿ ಸೇವೆ ಸಲ್ಲಿಸಿರುವವರಿಗೂ ಈ ಬಾರಿ ಬಿಜೆಪಿ ವರಿಷ್ಠರು ಟಿಕೆಟ್ ನೀಡಿದ್ದಾರೆ. ನಾಲ್ಕು ಕ್ಷೇತ್ರಗಳನ್ನು ಹೊರತುಪಡಿಸಿ 21 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದು, ಪಟ್ಟಿ ಯಾವುದೇ ಕ್ಷಣದಲ್ಲಿ ಹೊರಬೀಳಲಿದೆ. ಎನ್‌ಡಿಎ ಮೈತ್ರಿಕೂಟದಲ್ಲಿ ಭಾಗಿಯಾಗಿರುವ ಜೆಡಿಎಸ್‌ಗೆ ಮಂಡ್ಯ, ಹಾಸನ ಹಾಗೂ ಕೋಲಾರ ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಪ್ರತಾಪ್ ಸಿಂಹ ಅವರಿಗೆ ಇನ್ನು ಟಿಕೆಟ್ ಖಚಿತವಾಗಿಲ್ಲ. ಅವರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಯತ್ನ ಮುಂದುವರೆಸಿದ್ದಾರೆ. ಈ ಕ್ಷೇತ್ರಕ್ಕೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಹೆಸರೂ ಬಲವಾಗಿ ಕೇಳಿಬರುತ್ತಿದೆ.



> **ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 15ರಂದು ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಿಗೆ ಚಾಲನೆ ನೀಡಿ, ಚುನಾವಣಾ ಪ್ರಚಾರವನ್ನೂ ಆರಂಭಿಸಲಿದ್ದಾರೆ. ರಾಜ್ಯದಲ್ಲಿ ಮೋದಿ ಅವರ ಮೊದಲ ಚುನಾವಣಾ ಪ್ರಚಾರ ಈ ಕ್ಷೇತ್ರದ ದೇವನಹಳ್ಳಿಯಲ್ಲಿ ನಡೆಯಲಿದ್ದು, ಮಾಜಿ ಸಚಿವ ಹಾಗೂ ಸ್ಥಳೀಯ ಅಭ್ಯರ್ಥಿ ಡಾ.ಕೆ.ಸುಧಾಕರ್ ಅದ್ದೂರಿಯ ಸಿದ್ಧತೆಯಲ್ಲಿ ತೊಡಗಿದ್ದಾರೆ.**

ಒಂದು ವೇಳೆ ಯದುವೀರ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದರೆ, ಪಕ್ಷದ ಹಿರಿಯ ಮುಖಂಡ ಡಾ.ಮಂಜುನಾಥ್ ಅವರಿಗೆ ಟಿಕೆಟ್ ದೊರೆಯಲಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದ ಬಿಜೆಪಿ ವರಿಷ್ಠರು, ಹಾಲಿ ಸಂಸದ ಹಾಗೂ ದೇಶ ವಿಭಜನೆ ಬಗ್ಗೆ ಮಾತನಾಡಿದ್ದ ಡಿ.ಕೆ.ಸುರೇಶ್ ಅವರನ್ನು ಮಣಿಸಲು ಖ್ಯಾತ ಹೃದಯ ತಜ್ಞ ಡಾ. ಮಂಜುನಾಥ್ ಅವರಿಗೆ ಟಿಕೆಟ್ ನೀಡಿದೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಹಾವೇರಿಯಿಂದ ಕಣಕ್ಕಿಳಿಸುತ್ತಿದ್ದು ಮತ್ತೊಬ್ಬ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಗೆ ಇನ್ನೂ ಯಾವುದೇ ಕ್ಷೇತ್ರ ತೋರಿಸಿಲ್ಲ. ಉಳಿದಂತೆ ಚಾಮರಾಜನಗರದಿಂದ ಹಾಲಿ ಸಂಸದ ಶ್ರೀನಿವಾಸ ಪ್ರಸಾದ್ ಅಳಿಯ ಡಾ.ಮೋಹನ್ ಅವರಿಗೆ ಟಿಕೆಟ್ ದೊರೆತಿದೆ. ದೆಹಲಿ ಮೂಲಗಳ ಪ್ರಕಾರ, ಕರ್ನಾಟಕದ ಹತ್ತಕ್ಕೂ ಹೆಚ್ಚು ಕ್ಷೇತ್ರಗಳ ● 9ನೇ ಪುಟಕ್ಕೆ

ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ಕಾಂಗ್ರೆಸ್ ಸೇರ್ಪಡೆ

ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ



ಬೆಂಗಳೂರು, ಮಾ.12(ಕೆಎಂಶಿ)– ಮಾಜಿ ಸಂಸದ, ಹಿರಿಯ ನಾಯಕ ಜಯಪ್ರಕಾಶ್ ಹೆಗ್ಡೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ.

ಜಯಪ್ರಕಾಶ್ ಹೆಗ್ಡೆಗೆ ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ಅಭ್ಯರ್ಥಿ ಮಾಡುವಂತೆ ಎಐಸಿಸಿ ಸ್ಕ್ರೀನಿಂಗ್ ಕಮಿಟಿ ಪಕ್ಷದ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಿದೆ. ಇಂದು ಸಂಜೆ ಪಕ್ಷದ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಕ್ಷ ಸೇರಿದ ಜಯಪ್ರಕಾಶ್ ಹೆಗ್ಡೆ ಅವರಿಗೆ ಪಕ್ಷದ ಲಾಂಛನ ನೀಡಿ ಸ್ವಾಗತಿಸಿದರು. ಹೆಗ್ಡೆ ಅವರ ಜೊತೆಗೆ ಬಿಜೆಪಿಯ ಮಾಜಿ ಶಾಸಕರಾದ ಸುಕುಮಾರ್ ಶೆಟ್ಟಿ ಹಾಗೂ ಎಂ.ಪಿ.ಕುಮಾರಸ್ವಾಮಿ ಸಹ ಕಾಂಗ್ರೆಸ್ ಸೇರ್ಪಡೆಗೊಂಡರು. ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ನಿವೃತ್ತಿಗೂ ಮುನ್ನ ಇತ್ತೀಚೆಗಷ್ಟೇ ಕಾಂತರಾಜ್ ವರದಿಯನ್ನು ಪರಿಷ್ಕರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ದ್ವಿತೀಯ ಪಿಯುಸಿ ಭೌತಶಾಸ್ತ್ರಕ್ಕೆ ಗ್ರೇಸ್ ಮಾರ್ಕ್ಸ್

ಬೆಂಗಳೂರು: ಮಾರ್ಚ್ 7 ರಂದು ನಡೆದ ದ್ವಿತೀಯ ಪಿಯು ಭೌತಶಾಸ್ತ್ರ ಬೋರ್ಡ್ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ನೀಡಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ (ಕೆಎಸ್‌ಇಎಬಿ) ಸುತ್ತೋಲೆ ಹೊರಡಿಸಿದೆ.

ಮಾರ್ಚ್ 7ರಂದು ಭೌತಶಾಸ್ತ್ರ (ಫಿಸಿಕ್ಸ್) ನಡೆದಿತ್ತು. ಆದರೆ ಭೌತಶಾಸ್ತ್ರ ವಿಷಯದ ಪರೀಕ್ಷೆಯು ಕಷ್ಟವಾಗಿತ್ತು. ಅದರಲ್ಲೂ ಮಲ್ಟಿಪಲ್ ಛಾಯ್ಸ್ ಕ್ವಶ್ಚನ್ಸ್ ಕಷ್ಟವಾಗಿತ್ತು ಎಂದು ವಿದ್ಯಾರ್ಥಿಗಳು ಹೇಳಿದ್ದರು. ತಕ್ಷಣವೇ ಪಿಟಿಷನ್ ಸಲ್ಲಿಕೆಗೆ ಮುಂದಾಗಿದ್ದರು. ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಆನ್‌ಲೈನ್ ಪಿಟಿಶನ್ ಸಲ್ಲಿಸಿದ್ದರು. 7/03/2024 ರಂದು ನಡೆದ ಭೌತಶಾಸ್ತ್ರ ಪರೀಕ್ಷೆಯಲ್ಲಿ, MCQಗಳು ತುಂಬಾ ಕಷ್ಟಕರ ಮತ್ತು ಟ್ರಿಕಿ ಆಗಿದ್ದವು. ತಿಂಗಳಾನುಗಟ್ಟಲೆ ಕಷ್ಟಪಟ್ಟು ಓದಿರುವ ನಾವು ಇಂತಹ ಕಷ್ಟದ ಪರಿಸ್ಥಿತಿ ಎದುರಿಸಲು ಬಯಸುವುದಿಲ್ಲ. ಪ್ರತಿಯೊಂದು ಅಂಕವೂ ನಮ್ಮ ಭವಿಷ್ಯವನ್ನು ನಿರ್ಧರಿಸುವಂತಹದ್ದಾಗಿರುವುದರಿಂದ ನಾವು ಒಂದೇ ಒಂದು ಅಂಕವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಈ ಅಸ್ಪಷ್ಟತೆಗೆ ಪರಿಹಾರಾರ್ಥವಾಗಿ 7 MCQಗಳಿಗೆ ಗ್ರೇಸ್ ಅಂಕಗಳನ್ನು ನೀಡಬೇಕೆಂದು ನಾವು ಪಿಯು ಮಂಡಳಿಯನ್ನು ಒತ್ತಾಯಿಸಿದ್ದರು.

ರಾಜ್ಯ ಸರ್ಕಾರಿ ನೌಕರರಿಗೆ ಶೇ.3.75ರಷ್ಟು ತುಟ್ಟಿಭತ್ಯೆ ಹೆಚ್ಚಳ

ಬೆಂಗಳೂರು, ಮಾ.12(ಕೆಎಂಶಿ)– ಲೋಕಸಭಾ ಚುನಾವಣಾ ಹೊಸ್ತಿಲಲ್ಲಿ ನೌಕರರಿಗೆ ರಾಜ್ಯ ಸರ್ಕಾರ ಬಂಪರ್ ಕೊಡುಗೆ ನೀಡಿದೆ. ನೌಕರರಿಗೆ ಶೇ.3.75ರಷ್ಟು ತುಟ್ಟಿಭತ್ಯೆ ಹೆಚ್ಚಳ ಮಾಡಿರುವುದಲ್ಲದೆ, ಇದು ಜನವರಿಯಿಂದಲೇ ಪೂರ್ವಾನ್ವಯಗೊಳ್ಳಲಿದೆ. ಏಪ್ರಿಲ್ ತಿಂಗಳ ವೇತನದಲ್ಲಿ ಈ ತುಟ್ಟಿಭತ್ಯೆ ಹೆಚ್ಚಳ ಮತ್ತು ಬಾಕಿ ದೊರೆಯಲಿದೆ.

ಮೂಲ ವೇತನ ಶೇ.38.75ರಿಂದ ಶೇ. 42.5ಕ್ಕೆ ಪರಿಷ್ಕರಿಸಿ ತುಟ್ಟಿಭತ್ಯೆ ಮಂಜೂರು ಮಾಡಲಾಗಿದೆ. ತುಟ್ಟಿಭತ್ಯೆ ಹೆಚ್ಚಳದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 1,792 ಕೋಟಿ ರೂ. ಹೆಚ್ಚುವರಿ ಹೊರೆ ಬೀಳಲಿದೆ.

ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್‌ಗೆ ಹೊಸ ರೂಪ

ಮೈಸೂರು ಪೇಂಟ್ ಬ್ರ್ಯಾಂಡ್ ಆಗಿ ಪರಿವರ್ತನೆ

ಸರ್ಕಾರಿ ಕಟ್ಟಡಗಳಿಗೂ ಇದೇ ಬಣ್ಣ ಬಳಕೆ: ಸಚಿವ ಎಂ.ಬಿ.ಪಾಟೀಲ್

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಮೈಸೂರು ಪೇಂಟ್ಸ್ ಬ್ರ್ಯಾಂಡ್ ಆಗಿ ಪರಿವರ್ತನೆ ಮಾಡಲು ರಾಜ್ಯ ಸರ್ಕಾರ ಕ್ರಮ ಕೈಗೊಂಡಿದ್ದು, ಸಂಸ್ಥೆಯ ಉತ್ಪಾದನಾ ಸಾಮರ್ಥ್ಯ ಮತ್ತು ಆರ್ಥಿಕ ವಹಿವಾಟು ಹೆಚ್ಚಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ.




ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂಬಿ ಪಾಟೀಲ್ ಅಧ್ಯಕ್ಷತೆಯಲ್ಲಿ ಸರ್ಕಾರಿ ಸ್ವಾಮ್ಯದ ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್‌ನ ಉತ್ಪಾದನಾ ಸಾಮರ್ಥ್ಯ ಮತ್ತು ಆರ್ಥಿಕ ವಹಿವಾಟು ಹೆಚ್ಚಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳ ಕುರಿತು ಚರ್ಚಿಸಲು ಮಂಡಳಿಯ ಸಭೆ ನಡೆಯಿತು. ಸಭೆಯ ನಂತರ ಮಾತನಾಡಿದ ಎಂ.ಬಿ.ಪಾಟೀಲ್, 'ಮೈಸೂರು ಮಹಾರಾಜರ ಆಡಳಿತಾವಧಿಯಲ್ಲಿ ಸ್ಥಾಪಿಸಲಾದ ಪ್ರತಿಷ್ಠಿತ ಕಾರ್ಖಾನೆಗಳಲ್ಲಿ ಒಂದಾಗಿರುವ ಉದ್ಯಮವು ಪ್ರಸ್ತುತ ವಾರ್ಷಿಕ ಸುಮಾರು 34–35 ಕೋಟಿ ರೂಪಾಯಿ ವಹಿವಾಟು ನಡೆಸುತ್ತಿದೆ. ಆದರೆ, ಮುಂಬರುವ ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಅಳಿಸಲಾಗದ ಶಾಯಿಯ ಅವಶ್ಯಕತೆ ಇದ್ದು, ಈ ವರ್ಷದ ವಹಿವಾಟು 77 ಕೋಟಿ ರೂಗಳಾಗುತ್ತದೆ ಎಂದು ಹೇಳಿದರು. ● 9ನೇ ಪುಟಕ್ಕೆ

ಮೈಸೂರಲ್ಲಿ ಕಾರುಗಳ ಕಿಟಕಿ ಗಾಜು ಒಡೆದು ಲ್ಯಾಪ್‌ಟಾಪ್‌ಗಳು, ಬ್ಯಾಡ್ಮಿಂಟನ್ ಕಿಟ್ ಕಳವು

ಮೈಸೂರು, ಮಾ. 12(ಆರ್‌ಕೆ)– ಎರಡು ಪ್ರತ್ಯೇಕ ಸ್ಥಳಗಳಲ್ಲಿ ನಿಲ್ಲಿಸಿದ್ದ ಕಾರುಗಳ ಹಿಂಬದಿ ಡೋರ್ ಕಿಟಕಿ ಗಾಜು ಒಡೆದು ಬೆಲೆ ಬಾಳುವ ಲ್ಯಾಪ್‌ಟಾಪ್‌ಗಳು ಹಾಗೂ ಬ್ಯಾಡ್ಮಿಂಟನ್ ಕಿಟ್ ಕಳವು ಮಾಡಿರುವ ಘಟನೆ ಮೈಸೂರಲ್ಲಿ ಕಳೆದ ಶನಿವಾರ ನಡೆದಿದೆ. ಮೈಸೂರಿನ ಬೃಂದಾವನ ಬಡಾವಣೆ ನಿವಾಸಿಯಾದ ಕೈಗಾರಿಕೋದ್ಯಮಿ ಹೆಚ್.ಹೆಚ್.ರಾಮ್ ಮತ್ತು ಬೆಂಗಳೂರಿನ ಪವನ್ ಲ್ಯಾಪ್‌ಟಾಪ್ ಹಾಗೂ ಬ್ಯಾಡ್ಮಿಂಟನ್ ಕಿಟ್ ಕಳೆದುಕೊಂಡವರು.





ಕಳೆದ ಶನಿವಾರ ಶ್ರೀಹರ್ಷ ರಸ್ತೆಯ ಸೆಸ್ಕ್ ಕಚೇರಿ ಎದುರು ನಿಲ್ಲಿಸಿದ್ದ ರಾಮ್ ಅವರ ಮಹೀಂದ್ರಾ XUV 700 ಕಾರಿನ ಡ್ರೈವರ್ ಹಿಂಭಾಗದ ಸೀಟಿನ ಕಿಟಕಿ ಗಾಜು ಒಡೆದು 1.20 ಲಕ್ಷ ರೂ. ಬೆಲೆ ಬಾಳುವ ಲ್ಯಾಪ್‌ಟಾಪ್ ಮತ್ತು ಬ್ಯಾಡ್ಮಿಂಟನ್ ಕಿಟ್ ಅನ್ನು ದುಷ್ಕರ್ಮಿಗಳು ಕದ್ದಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ರಾಮ್, ಶನಿವಾರ ತಾವು ಸಂಜೆ 4.30 ಗಂಟೆ ವೇಳೆಗೆ ಶ್ರೀಹರ್ಷ ರಸ್ತೆಯಲ್ಲಿ ಕಾರು ನಿಲ್ಲಿಸಿ ಸಭೆಯಲ್ಲಿ ಪಾಲ್ಗೊಂಡು, ಸಂಜೆ 5.50 ಗಂಟೆಗೆ ಹಿಂದಿರುಗಿದಾಗ ಕಾರಿನ ಹಿಂಬದಿ ಸೀಟಿನ ಕಿಟಕಿ ಗಾಜು ಒಡೆದು ಲ್ಯಾಪ್‌ಟಾಪ್ ಮತ್ತು ಬ್ಯಾಡ್ಮಿಂಟನ್ ಕಿಟ್ ಕಳವು ಮಾಡಿರುವುದು ತಿಳಿಯಿತು ಎಂದರು. ತಕ್ಷಣ ಅವರು ಲಷ್ಕರ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುತ್ತಿದ್ದಾರೆ.

ಲ್ಯಾಪ್‌ಟಾಪ್ ಕಳವು: ಅದೇ ರೀತಿ ಮತ್ತೊಂದು ಪ್ರಕರಣ ಗರುಡ ಮಾಲ್ ಬಳಿ ನಡೆದಿದೆ. ಪಾರ್ಕಿಂಗ್ ಸ್ಥಳದಲ್ಲಿ ಬೆಂಗಳೂರು ನಿವಾಸಿಯಾದ ಮೂಲತಃ ಕೊಡಗಿನ ಶನಿವಾರಸಂತೆಯ ಪವನ್ ಮಹೀಂದ್ರ XUV ಕಾರು ನಿಲ್ಲಿಸಿದ್ದರು. ಅದರ ಹಿಂಬದಿ ಡೋರ್ ಗಾಜು ಒಡೆದು ಅದೇ ದಿನ ಸಂಜೆ 4 ಗಂಟೆ ವೇಳೆಗೆ ಲ್ಯಾಪ್‌ಟಾಪ್ ಇದ್ದ ಬ್ಯಾಗನ್ನು ದುಷ್ಕರ್ಮಿಗಳು ಹೊತ್ತೊಯ್ದಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಎರಡೂ ಪ್ರಕರಣದಲ್ಲಿ ಸಿಸಿಟಿವಿ, ಕ್ಯಾಮರಾ ಫುಟೇಜ್‌ಗಳನ್ನು ಪಡೆದು ಖದೀಮರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

5, 8, 9ನೇ ತರಗತಿ ಬೋರ್ಡ್ ಪರೀಕ್ಷೆಗೆ 'ಸುಪ್ರೀಂ' ತಡೆ

ಪರೀಕ್ಷೆ ಮುಂದೂಡಿದ ಶಿಕ್ಷಣ ಇಲಾಖೆ

ಬೆಂಗಳೂರು, ಮಾ.12– ಮಹತ್ವದ ಬೆಳವಣಿಗೆಯಲ್ಲಿ ಈಗಾಗಲೇ ಆರಂಭವಾಗಿರುವ 5,8 ಮತ್ತು 9ನೇ ತರಗತಿಗಳ ಬೋರ್ಡ್ ಪರೀಕ್ಷೆಗೆ ಸುಪ್ರೀಂಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದ್ದು, ಶಿಕ್ಷಣ ಇಲಾಖೆ ಪರೀಕ್ಷೆಗಳನ್ನು ಮುಂದೂಡಿದೆ.



5,8,9 ಮತ್ತು 11ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಸಲು ಅನುಮತಿ ನೀಡಿದ್ದ ಹೈಕೋರ್ಟ್ ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಪರೀಕ್ಷೆಗಳನ್ನು ನಡೆಸದಂತೆ ತಡೆ ನೀಡಿದೆ. ಸುಪ್ರೀಂ ಕೋರ್ಟ್ ತಡೆ ನೀಡಿರುವ ಹಿನ್ನೆಲೆಯಲ್ಲಿ 5, 8, 9ನೇ ತರಗತಿಯ ಬೋರ್ಡ್ ಪರೀಕ್ಷೆಗಳನ್ನು ಶಿಕ್ಷಣ ಇಲಾಖೆ ಮುಂದೂಡಿದೆ. ಈ ಬಗ್ಗೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿಬಿ ಕಾವೇರಿ ಅವರು ಆದೇಶ ಹೊರಡಿಸಿದ್ದಾರೆ. ಕರ್ನಾಟಕ ಹೈಕೋರ್ಟ್ ಏಕ ಸದಸ್ಯ ಪೀಠ ಮಾ.6 ರಂದು ಬೋರ್ಡ್ ಪರೀಕ್ಷೆಗಳನ್ನು ನಡೆಸುವ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ, ಬೋರ್ಡ್ ಪರೀಕ್ಷೆ ನಡೆಸಲು ಅನುಮತಿ ನೀಡಿತ್ತು. ರಾಜ್ಯಾದ್ಯಂತ 45,000 ಶಾಲೆಗಳ 28 ಲಕ್ಷ ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆ ಬರೆಯುತ್ತಿದ್ದು, ಅವರ ಭವಿಷ್ಯ ಈಗ ಅತಂತ್ರವಾಗಿದೆ. ಇನ್ನು 11 ತರಗತಿ ಪರೀಕ್ಷೆಗಳು ಈಗಾಗಲೇ ಫೆಬ್ರವರಿ 28 ರಂದೇ ಮುಕ್ತಾಯಗೊಂಡಿವೆ.





ಮೈಸೂರಿನ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಲೋಕಾರ್ಪಣೆ

● ಮೈಸೂರು–ಚೆನ್ನೈ ನಡುವಿನ 2ನೇ ವಂದೇ ಭಾರತ್ ರೈಲು ಸಂಚಾರಕ್ಕೂ ಚಾಲನೆ ● ಮೈಸೂರು ರೈಲ್ವೆ ನಿಲ್ದಾಣದ ಜನೌಷಧ್ ಕೇಂದ್ರವೂ ಆರಂಭ ● ಕಡಕೊಳದಲ್ಲಿ ಕಂಟೈನರ್ ಕೇಂದ್ರ ಉದ್ಘಾಟಿಸಿದ ಸಂಸದ ಪ್ರತಾಪ್ ಸಿಂಹ ● 10 ವರ್ಷದ ಅಭಿವೃದ್ಧಿ ಟ್ರೈಲರ್ ಅಷ್ಟೆ; ನನ್ನ ಕನಸು ಮತ್ತಷ್ಟಿದೆ ● ಮೈಸೂರು, ಮಂಡ್ಯ, ಚಾಮರಾಜನಗರ, ಕೇರಳದ ಕೈಗಾರಿಕಾ ಬೆಳವಣಿಗೆ







ಮೈಸೂರಿನ ಕಡಕೊಳದ ತಾಂಡವಪುರ ಕೈಗಾರಿಕಾ ಪ್ರದೇಶದಲ್ಲಿ ಮಂಗಳವಾರ ಲೋಕಾರ್ಪಣೆಗೊಂಡ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್(ಮೊದಲ ಚಿತ್ರ), ಅನ್ನು ಗುಜರಾತ್‌ನ ಅಹಮದಾಬಾದ್‌ನಿಂದ ವರ್ಚುಯಲ್ ಮೂಲಕ ಉದ್ಘಾಟಿಸಿದ ಪ್ರಧಾನಿ ಮೋದಿ. ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ (ಮಧ್ಯಚಿತ್ರ) ಕಾಣಬಹುದು. ಕಡಕೊಳದ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ನಲ್ಲಿರುವ ಕಂಟೈನರ್ ಕೇಂದ್ರವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು (ಕೊನೆಚಿತ್ರ)

ವರ್ಚುಯಲ್ ಮೂಲಕ ಪ್ರಧಾನಿ ಮೋದಿ ಉದ್ಘಾಟನೆ

ಮೈಸೂರು, ಮಾ.12(ಬಿಎಲ್‌ಎಸ್)– ಮೈಸೂರು ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಕೈಗಾರಿಕಾಭಿವೃದ್ಧಿಗೆ ಪೂರಕವಾಗಿ ಮೈಸೂರಿನ ಕಡಕೊಳ ಬಳಿಯ ತಾಂಡವಪುರ ಕೈಗಾರಿಕಾ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಿರುವ 100 ಕೋಟಿ ವೆಚ್ಚದ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಲೋಕಾರ್ಪಣೆಗೊಳಿಸಿದರು. ಇದು ಕರ್ನಾಟಕದ ಅತ್ಯಾಧುನಿಕ ಎರಡನೇ ಲಾಜಿಸ್ಟಿಕ್ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ನರೇಂದ್ರ ಮೋದಿ ವರ್ಚುಯಲ್ ಮೂಲಕ ಮೈಸೂರಿನ ಲಾಜಿಸ್ಟಿಕ್ ಪಾರ್ಕ್ ಅನ್ನು ಉದ್ಘಾಟಿಸಿದರು. ಇದೇ ವೇಳೆ ಮೈಸೂರು ಹಾಗೂ ಚೆನ್ನೈ ನಡುವೆ ಸಂಚರಿಸುವ ಮತ್ತೊಂದು ವಂದೇ ಭಾರತ್ ರೈಲು ಸೇವೆಗೂ ಚಾಲನೆ ನೀಡಿದ ನರೇಂದ್ರ ಮೋದಿ, ಮೈಸೂರು ರೈಲ್ವೆ ನಿಲ್ದಾಣದಲ್ಲಿ ತೆರೆದಿರುವ ಒಂದು ನಿಲ್ದಾಣ, ಒಂದು ಉತ್ಪನ್ನ ಯೋಜನೆಯನ್ನು ಕೂಡ ಉದ್ಘಾಟನೆ ಮಾಡಿದರು.

ದೇಶದಲ್ಲಿನ 85 ಸಾವಿರ ಕೋಟಿ ರೂಪಾಯಿಗಳ ನೂರಾರು ರೈಲ್ವೆ ಯೋಜನೆಗಳಿಗೆ ಇದೇ ವೇಳೆ ಚಾಲನೆ ನೀಡಿದ ನರೇಂದ್ರ ಮೋದಿ, ಕೆಲವು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ಮಾತನಾಡಿದ ನರೇಂದ್ರ ಮೋದಿ, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಭಿವೃದ್ಧಿಯಲ್ಲಿ ದಾಪುಗಾಲಿಟ್ಟಿದೆ. ಈ ಮೂಲಕ ● 9ನೇ ಪುಟಕ್ಕೆ

ಲಾಜಿಸ್ಟಿಕ್ ಪಾರ್ಕ್‌ನಲ್ಲಿ ಶೀಘ್ರವೇ ಕಸ್ಟಮ್ಸ್ ಕಚೇರಿ ಆರಂಭ

ಮೈಸೂರಿನಲ್ಲಿ ನಿರ್ಮಾಣವಾಗಿರುವ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ರಫ್ತು ಮತ್ತು ಆಮದಿನಲ್ಲಿ ತಿಂಗಳಿಗೆ ಸುಮಾರು 12 ಸಾವಿರಕ್ಕೂ ಹೆಚ್ಚು ಕಂಟೈನರ್‌ಗಳ ರವಾನೆ ಆಗಲಿದೆ ಎಂದು ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾದ ಮೈಸೂರಿನ ಪ್ರಧಾನ ವ್ಯವಸ್ಥಾಪಕ ಎಂ.ಪಿ.ವಿಜಯಕುಮಾರ್ ತಿಳಿಸಿದರು.

ಇನ್ನು ಕೆಲವೇ ದಿನಗಳಲ್ಲಿ ಮೈಸೂರಿನ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್‌ನಲ್ಲೇ ಕಸ್ಟಮ್ಸ್ ಕಚೇರಿ ತೆರೆಯಲಾಗುವುದು ಎಂದು ತಿಳಿಸಿದರು. ಈ ಮೊದಲು ಮೈಸೂರು ಸೇರಿದಂತೆ ಸುತ್ತಮುತ್ತಲಿನ ಕೈಗಾರಿಕೋದ್ಯಮಿಗಳು ರಫ್ತು ಮತ್ತು ಆಮದಿಗೆ ಮಂಗಳೂರು ಅಥವಾ ಚೆನ್ನೈ ಬಂದರಿಗೆ ಹೋಗಬೇಕಿತ್ತು. ಅಲ್ಲಿನ ಕಸ್ಟಮ್ಸ್ ಇಲಾಖೆಯಲ್ಲಿ ಕಾನೂನು ರೀತ್ಯಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಿತ್ತು. ಆದರೆ ಈಗ ಮೈಸೂರಿನಲ್ಲೇ ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ. ಇದು ಕೈಗಾರಿಕೋದ್ಯಮಿಗಳಿಗೆ ವರದಾನವಾಗಲಿದೆ ಎಂದರು.

ಲಾಜಿಸ್ಟಿಕ್ ಪಾರ್ಕ್‌ನಲ್ಲೇ ರೈಲ್ವೆ ಸಂಪರ್ಕದ ವ್ಯವಸ್ಥೆ ಇದೆ. ರೈಲ್ವೆ ವ್ಯಾಗನ್‌ಗಳ ಮೂಲಕ ಕಂಟೈನರ್‌ಗಳನ್ನು ಬಂದರಿಗೆ ಕಳುಹಿಸಬಹುದು. ಅಲ್ಲದೆ ಆಮದಾಗುವ ವಸ್ತುಗಳ ಕಂಟೈನರ್‌ಗಳನ್ನು ವ್ಯಾಗನ್ ಮೂಲಕವೇ ಇಲ್ಲಿಗೆ ತರಿಸಿಕೊಳ್ಳಬಹುದು. ಇದರಿಂದ ಕೈಗಾರಿಕೋದ್ಯಮಿಗಳಿಗೆ ಬಹಳಷ್ಟು ● 9ನೇ ಪುಟಕ್ಕೆ

ಅತ್ಯಾಧುನಿಕ ಸೌಲಭ್ಯಗಳು

- ಮೂರು ಪೂರ್ಣ ಹಳಿ ಮಾರ್ಗ (ಹ್ಯಾಂಡ್ಲಿಂಗ್ ಲೈನ್ 1, ಸ್ಟೇಬ್ಲಿಂಗ್ ಲೈನ್ 1), ಎಂಜಿನ್ ಮಾರ್ಗ 1)
- ಪಾರ್ಕ್‌ನಲ್ಲಿ ಶೀಘ್ರವೇ ಕಸ್ಟಮ್ ಕಚೇರಿ ಆರಂಭ
- ಎಲೆಕ್ಟ್ರಾನಿಕ್ ಇನ್ ಮೋಷನ್ ವೇಬ್ರಿಡ್ಜ್
- ಸಾವಿರ ಚದರ ಮೀಟರ್‌ನ ಎರಡು ಗೋದಾಮು
- ಸಂಯೋಜಿತ ಲೋಡ್, ಅನ್‌ಲೋಡ್ ಫ್ಲಾಟ್ ಫಾರ್ಮ್‌ಗಳು
- ಕಾರ್ಮಿಕರಿಗೆ ಕ್ಯಾಂಟೀನ್, ಶೌಚಾಲಯದ ವ್ಯವಸ್ಥೆ
- ಬಿಗಿ ಭದ್ರತೆ, ಸಿಸಿಟಿವಿ ಕಣ್ಗಾವಲು, ಹೈಮಾಸ್ಟ್ ಲೈಟ್
- ಗೇಟ್ ಕಾಂಪ್ಲೆಕ್ಸ್, ಸ್ವಂತ ಉಪಕೇಂದ್ರದೊಂದಿಗೆ 500 ಕೆ.ವಿ. ವಿದ್ಯುತ್ ಸರಬರಾಜು
- ಬಹುಮಾದರಿ ಸಾರಿಗೆ, ಗೋದಾಮು, ಕಸ್ಟಮ್ಸ್ ಕ್ಲಿಯರೆನ್ಸ್ ಸೌಲಭ್ಯ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಪ್ರಿಯ, ನೀವು ಕಳೆದ ಹತ್ತು ದಿನಗಳಿಂದ ಮುತ್ತು ಕೊಟ್ಟಿಲ್ಲ ಗೊತ್ತೆ?

ಗಂಡ : ಅರೆ ! ನಾನು ಹಾಗಾದರೆ ಯಾರಿಗೆ ಕೊಡ್ತಾ ಇದ್ದೆ...

ಮೈಸೂರು ಮಿತ್ರ

ಬುಧವಾರ, 13 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮದುವೆ ಎಂಬುದು ಬಿರುಗಾಳಿಯಲ್ಲಿ ಒಂದು ಬಂದರು ಇದ್ದಂತೆ. ಆದರೆ ಎಷ್ಟೋ ಸಲ ಬಂದರಿನಲ್ಲಿಯೇ ಬಿರುಗಾಳಿ ಏಳುತ್ತದೆ. – ಆಸ್ಕರ್ ವೈಲ್ಡ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಾಯಾದಿ ಇದ್ದ ಕಡೆ ಬೆಂಕಿ ಹುಡುಕಬೇಕಾಗಿಲ್ಲ

ನಿಮ್ಮ ಪತ್ರಗಳು

■ ವಿದ್ಯಾರ್ಥಿನಿಲಯ, ಶಾಲೆ, ಕಾಲೇಜಿನಲ್ಲಿ ಸ್ವಚ್ಛತೆ ಮಾಡಬಾರದೆ?

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ದೊಡ್ಡ ದೊಡ್ಡ ಅಕ್ರಮ, ಅನಾಚಾರ, ಭ್ರಷ್ಟಾಚಾರ, ಮೋಸ, ದರೋಡೆ, ಸಾಮಾಜಿಕ ಪಿಡುಗುಗಳನ್ನು ಬಯಲಿಗೆಳೆಯಲು ಆಗದ ಮಾಧ್ಯಮ ಶಾಲೆ, ಕಾಲೇಜು, ಹಾಸ್ಟೆಲ್‌ಗಳಂತ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಸಣ್ಣಪುಟ್ಟ ವಿಚಾರಗಳನ್ನು ವರದಿ ಮಾಡಿ ಪೋಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ಕಂದಕ ಏರ್ಪಡುವಂತೆ ಮಾಡಿ ವ್ಯವಸ್ಥೆಯನ್ನೆ ಹಾಳು ಮಾಡುತ್ತಿದೆ.

ಮಕ್ಕಳಿಗೆ ಪಠ್ಯ ಚಟುವಟಿಕೆ ಎಷ್ಟು ಮುಖ್ಯವೂ ಪಠ್ಯೇತರ ಚಟುವಟಿಕೆಗಳು ಅಷ್ಟೇ ಮುಖ್ಯ. ನಾವು ಶಾಲೆಗೆ ಹೋಗುತ್ತಿದ್ದಾಗ ಕಸ ಗುಡಿಸುವ, ಗಿಡಗಳನ್ನು ನೆಡುವುದು, ಗಿಡಗಳಿಗೆ ಕೆರೆಯಿಂದ ನೀರು ತಂದು ಹಾಕುವುದು, ಶಾಲಾ ಆವರಣದಲ್ಲಿ ಕಸ ಎತ್ತುವುದು, ಹೀಗೆ ಹಲವಾರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದೆವು. ಇದರಿಂದ ಶಿಕ್ಷಣದ ಜೊತೆಗೆ ಶಿಸ್ತಿನ ಪಾಠವನ್ನು ಕಲಿಯುತ್ತಿದ್ದೆವು. ಮಹಾತ್ಮ ಗಾಂಧಿಯವರು ಶೌಚಾಲಯದಲ್ಲಿ ದೇವರು ನೆಲೆಸಿದ್ದಾನೆ ಎಂದವರು, ಸ್ವತಃ ತಾವೇ ಶೌಚಾಲಯ ಶುಚಿಗೊಳಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದವರು. ಹೀಗಿರುವಾಗ ಹನೂರಿನ ವಿದ್ಯಾರ್ಥಿನಿಲಯದ ಮಕ್ಕಳು ನೀರಿನ ಟ್ಯಾಂಕ್ ಶುಚಿಗೊಳಿಸಿದ್ದು ತಪ್ಪೆ? ಅದನ್ನೆ ಮಾಧ್ಯಮ ತಪ್ಪು ಎನ್ನುವ ರೀತಿ ವರದಿ ಮಾಡುವುದು ಎಷ್ಟು ಸರಿ? ನಡೆಯುವವನು ಎಡವದೆ ಕುಳಿತಿರುವವ ಎಡವುವನೆ ಎನ್ನುವ ಮಾತಿನಂತೆ ಎಡವುತ್ತೇವೆ ಎಂದು ಭಾವಿಸಿದರೆ ನಡೆಯುವಾಗಿಲ್ಲ. ಕ್ರೀಡೆಯಲ್ಲಿ ಭಾಗವಹಿಸುವ ಹಾಗಿಲ್ಲ. ವಿಮಾನ ಅಪಘಾತವಾಗುತ್ತದೆ ಎಂದು ಪೈಲೆಟ್ ಆಗುವಂತಿಲ್ಲ. ಮಕ್ಕಳಿಗೆ ಎಲ್ಲಾ ಸಾಮಾಜಿಕ ಜವಾಬ್ದಾರಿಯನ್ನು ಕಲಿಸಲು ಬಿಡಿ. ರಾಷ್ಟ್ರೀಯ ಸೇವಾ ಯೋಜನೆಯಡಿ ಕಾಲೇಜು ವಿದ್ಯಾರ್ಥಿಗಳು ಗ್ರಾಮಗಳಲ್ಲಿ ಚರಂಡಿ ಸಹಿತ ಎಲ್ಲವನ್ನು ಸ್ವಚ್ಛ ಮಾಡುತ್ತಾರೆ. ಈ ಕಾರ್ಯಕ್ರಮಕ್ಕೆ ಸರ್ಕಾರ ಹಣ ಕೊಡುತ್ತದೆ. ಇದು ತಪ್ಪೆ? ಸ್ವಚ್ಛತೆ ಕೈಗೊಳ್ಳುವಾಗ ಹಾವು ಕಚ್ಚಿದ ನಿದರ್ಶನವಿದೆ. ಹಾಗೆಂದ ಮಾತ್ರಕ್ಕೆ ಕಾರ್ಯಕ್ರಮ ಮಾಡುವುದು ತಪ್ಪು. ಮಲದ ಗುಂಡಿ ಸ್ವಚ್ಛತೆಗೆ ಯಂತ್ರ ಬಳಸಿ ವ್ಯಕ್ತಿಗಳಿಂದ ಮಾಡಿಸಬೇಡಿ ಎಂದಾಕ್ಷಣ ಶೌಚಾಲಯ, ನೀರಿನ ಟ್ಯಾಂಕ್, ಶಾಲಾ ಆವರಣ ಸ್ವಚ್ಛ ಮಾಡಬಾರದು ಎಂದರ್ಥವೇ? ವರದಿಗಾರರು ಸ್ವಚ್ಛತೆ ಒಂದು ಸಾಮಾಜಿಕ ಜವಾಬ್ದಾರಿ ಎಂಬುದನ್ನು ಅರಿಯಬೇಕು ಅದು ಮಕ್ಕಳಿಗೂ ತಿಳಿಯಬೇಕು ಎಂದು ಬರೆಯಬೇಕು.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

■ ಚಾಮುಂಡಿಬೆಟ್ಟಕ್ಕೆ ರೋಪ್‌ವೇ ಗುಮ್ಮಾ!

ಮಾನ್ಯರೆ,

ಪರಿಸರ ಪ್ರಿಯರ ವಿರೋಧದ ಕಾರಣ ತಟಸ್ಥವಾಗಿದ್ದ ಚಾಮುಂಡಿ ಬೆಟ್ಟದ ರೋಪ್ ವೇ ವಿಚಾರ ಮೊನ್ನೆ ಮೈಸೂರಿನಲ್ಲಿ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಘಡ್ಕರಿಯವರು 114 ಕೋಟಿ ವೆಚ್ಚದಲ್ಲಿ 1.4 ಕಿ.ಮೀ. ಉದ್ದದ ರೋಪ್ ವೇಯನ್ನು ಚಾಮುಂಡಿ ಬೆಟ್ಟದಲ್ಲಿ ನಿರ್ಮಾಣ ಮಾಡಲು ಅನುದಾನ ಬಳಕೆ ಮಾಡಲಾಗುವುದು ಎಂದು ಹೇಳುವ ಮೂಲಕ ಮತ್ತೆ ವಿವಾದಕ್ಕೆ ನಾಂದಿ ಹಾಡಿದ್ದಾರೆ. ಸಿಎಂ ಸಿದ್ದರಾಮಯ್ಯನವರು ಕೂಡ ಮೈಸೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಪರಿಸರ ಪ್ರಿಯರು ಒಪ್ಪಿದರೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಿಸಲಾಗುವುದು ಎಂದು ಹೋಟೆಲ್ ಮಾಲೀಕರ ಮನವಿಗೆ ಸಂಬಂಧಿಸಿದಂತೆ ಹೇಳಿದ್ದರು. ಕೇವಲ ಪ್ರವಾಸೋದ್ಯಮ ಮತ್ತು ಹೋಟೆಲ್‌ಗಳ ಅಭಿವೃದ್ಧಿಯನ್ನಷ್ಟೇ ಗಮನದಲ್ಲಿ ಇಟ್ಟುಕೊಂಡು ಈ ರೀತಿ ಅಭಿವೃದ್ಧಿ ಬಯಸುವುದರ ಬದಲು, ಚಾಮುಂಡಿಬೆಟ್ಟದಲ್ಲಿನ ಸ್ಥಿತಿಗತಿಯನ್ನೂ ಗಮನದಲ್ಲಿ ಇಟ್ಟುಕೊಂಡಿದ್ದರೆ ಬಹುಶಃ ಇಂತಹ ಯೋಜನೆ ಅಪ್ರಸ್ತುತ ಎನಿಸುತ್ತಿತ್ತು. ಚಾಮುಂಡಿ ಬೆಟ್ಟ ಕೇವಲ ಚಾಮುಂಡೇಶ್ವರಿ ದೇವಸ್ಥಾನವಲ್ಲದೆ ಒಂದು ಗ್ರಾಮವೂ ಇದೆ. ಎಲ್ಲಾ ಊರು ಪಟ್ಟಣಗಳು ಬೆಳೆಯುತ್ತಿರುವಂತೆ ಚಾಮುಂಡಿ ಗ್ರಾಮವೂ ಬೆಳೆಯುತ್ತಿದೆ! ಆದರೆ ನಮ್ಮ ಊರು, ಪಟ್ಟಣಗಳನ್ನು ಅಕ್ಕ ಪಕ್ಕ ಇರುವ ಜಮೀನುಗಳನ್ನು ಲೇ ಔಟ್‌ಗಳಾಗಿ ಪರಿವರ್ತಿಸಿ ವಿಸ್ತರಣೆ ಮಾಡುತ್ತೇವೆ. ಆದರೆ. ಚಾಮುಂಡಿ ಬೆಟ್ಟ ಮತ್ತು ಗ್ರಾಮವನ್ನು ಅಭಿವೃದ್ಧಿ ಮಾಡಬೇಕಾದರೆ ಬೆಟ್ಟವನ್ನು ಸಮತಟ್ಟು ಮಾಡಿ ಮನೆ, ಮಾರುಕಟ್ಟೆ ನಿರ್ಮಿಸಬೇಕಾಗುತ್ತದೆ. ಅಭಿವೃದ್ಧಿಗೆ ಕೊನೆಯೇ ಇಲ್ಲಾ. ಒಂದಕ್ಕೊಂದು ಕೊಂಡಿಯಂತೆ ಈ ಅಭಿವೃದ್ಧಿಯ ಸರಪಳಿ ಸುತ್ತಿಕೊಳ್ಳುತ್ತದೆ! ಹಾಗೆ ನೋಡಿದರೆ ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಕೂಡ ಅಗತ್ಯವಿರಲಿಲ್ಲ ಎನಿಸುತ್ತದೆ. ಹಿಂದೆ ಸಚಿವರಾಗಿದ್ದವರೊಬ್ಬರು ಚಾಮುಂಡಿ ಬೆಟ್ಟದಲ್ಲಿ ಇರುವ ನಿವಾಸಿಗಳನ್ನು ಬೇರೆಡೆ ಸ್ಥಳಾಂತರಿಸಿ (ಶಿಫ್ಟ್) ಅಲ್ಲಿ ಕೇವಲ ಚಾಮುಂಡಿ ದೇವಸ್ಥಾನ ಮಾತ್ರ ಇರುವಂತೆ ಯೋಚಿಸಿದ್ದರೆಂದು ವರದಿಯಾಗಿತ್ತು. ಇದು ಚಾಮುಂಡಿ ಬೆಟ್ಟದ ಪರಿಸರ ಕಾಪಾಡಲು ಅಗತ್ಯ ಕೂಡ ಎಂಬ ಮಾತುಗಳು ಕೇಳಿ ಬಂದಿದ್ದವು. ಚಾಮುಂಡಿ ಬೆಟ್ಟದ ರೋಪ್ ವೇ ಯೋಜನೆ ಪರಿಸರವಾದಿಗಳ ತೀವ್ರ ವಿರೋಧದ ಕಾರಣ ಹಿಂದೆ ಸರಿದಿತ್ತು. ಆದರೆ ಅದನ್ನು ಪದೇ ಪದೆ ಮುನ್ನೆಲೆಗೆ ತರುತ್ತಿರುವುದು ಅರ್ಥವಾಗದ ವಿಚಾರ.

–ಮುಳ್ಳೂರು ಪ್ರಕಾಶ್, ಮೈಸೂರು.

■ ಭಯೋತ್ಪಾದಕನ ಬಂಧನಕ್ಕೆ ತೊಡಕಾದ ಮಾಧ್ಯಮಗಳು!

ಮಾನ್ಯರೆ,

ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವ ದ್ವಿಚಕ್ರ ವಾಹನ ಸವಾರರನ್ನು ಅಡ್ಡಗಟ್ಟಿ ಸಂಚಾರಿ ಪೊಲೀಸರು ದಂಡ ವಸೂಲಿ ಮಾಡುತ್ತಿರುವಾಗ ಕೆಲವು ವಾಹನ ಸವಾರರು ಎದುರಿನಿಂದ ಬರುವ ವಾಹನ ಸವಾರರನ್ನು ಎಚ್ಚರಿಸುತ್ತಾ 'ಮುಂದೆ ಪೊಲೀಸರಿದ್ದಾರೆ' ಎಂಬ ಮಾಹಿತಿ ನೀಡುತ್ತಾ ಹೋಗುತ್ತಾರೆ. ಆಗ ಉಳಿದ ಸವಾರರು ಎಚ್ಚೆತ್ತು ಮಾರ್ಗ ಬದಲಿಸಿ ಹಿಂದೆ ತೆರಳುತ್ತಾ ಪೊಲೀಸರಿಂದ ತಪ್ಪಿಸಿಕೊಳ್ಳುತ್ತಾರೆ. ಈಗ ಇದೇ ಕೆಲಸವನ್ನು ನಮ್ಮ ಸುದ್ದಿವಾಹಿನಿಗಳು ಮಾಡುತ್ತಿವೆ!

ರಾಮೇಶ್ವರಂ ಹೊಟೇಲಿಗೆ ಬಾಂಬ್ ಇಟ್ಟು ಸ್ಫೋಟಿಸಿದ ಭಯೋತ್ಪಾದಕನನ್ನು ಸೆರೆ ಹಿಡಿಯಲು ಸುದ್ದಿವಾಹಿನಿಗಳೇ ಅಡ್ಡಿಯಾಗಿವೆ. ಶಂಕಿತ ಭಯೋತ್ಪಾದಕ ಎಲ್ಲಿದ್ದಾನೆ? ಆತ ಯಾವ ಬಸ್ಸಿನ ಮೂಲಕ ಪ್ರಯಾಣಿಸಿ ಯಾವ ಊರಿಗೆ ತೆರಳಿದ್ದಾನೆ? ಈಗ ಯಾವ ಊರಿನಲ್ಲಿದ್ದಾನೆ? ಪೊಲೀಸರು ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಈ ಮಾಹಿತಿಯ ವೀಕ್ಷಕ ವಿವರಣೆಯನ್ನು ಬಿತ್ತರಿಸುವ ಸುದ್ದಿವಾಹಿನಿಗಳ ಕೃಪೆಯಿಂದ ಶಂಕಿತ ಬಾಂಬರ್ ತಪ್ಪಿಸಿಕೊಳ್ಳಲು ಅನುಕೂಲವಾಗಿದೆ. ಪೊಲೀಸರೂ ಸಹ ಪ್ರಚಾರ ಗಿಟ್ಟಿಸಿಕೊಳ್ಳುವುದಕ್ಕಾಗಿ ಶಂಕಿತನ ಮಾಹಿತಿಯನ್ನು ಆತುರಾತುರವಾಗಿ ಮಾಧ್ಯಮಗಳಿಗೆ ಬಹಿರಂಗ ಪಡಿಸುವುದರಿಂದ ಶಂಕಿತ ಭಯೋತ್ಪಾದಕ ಟಿ ವಿ ನ್ಯೂಸ್ ವೀಕ್ಷಿಸಿದರೆ ಸಾಕು. ಆರಾಮವಾಗಿ ತಪ್ಪಿಸಿಕೊಳ್ಳಬಹುದು. ಶಂಕಿತನ ಹೆಡೆಮುರಿ ಕಟ್ಟಿ ನ್ಯಾಯಾಂಗದ ಸುಪರ್ದಿಗೆ ಒಪ್ಪಿಸುವವರೆಗೆ ಶಂಕಿತನ ಚಲನವಲನದ ವಿವರವನ್ನು ಬಹಿರಂಗ ಪಡಿಸದಂತೆ ಪೊಲೀಸರಿಗೆ ಮತ್ತು ಮಾಧ್ಯಮದವರಿಗೆ ನ್ಯಾಯಾಲಯವೇ ನಿರ್ದೇಶನ ನೀಡಬೇಕಾಗಿದೆ! ಕಳ್ಳ–ಪೊಲೀಸ್ ಆಟವಾಡುವ ಮಕ್ಕಳಿಗೆ ಇರುವಷ್ಟು ಜಾಣತನ ನಮ್ಮ ಪೊಲೀಸರು ಮತ್ತು ಮಾಧ್ಯಮಗಳಿಗೆ ಇಲ್ಲವಾಯಿತೇ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ ಪುನರುಕ್ತ ನಾಮಗಳು

ಅತ್ಯಂತ ಪವಿತ್ರವಾದ ಮತ್ತು ಜನಪ್ರಿಯವಾದ ಸಹಸ್ರನಾಮ ಸ್ತೋತ್ರಗಳಲ್ಲಿ ಒಂದಾದ ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ ಹಲವು ನಾಮಗಳು ಪುನರುಕ್ತವಾಗಿವೆ. ಎಂದರೆ ಒಂದೇ ನಾಮವನ್ನು ಮತ್ತೆ ಹೇಳಲಾಗಿದೆ. ಕೆಲವು ಉದಾಹರಣೆಗಳನ್ನು ನೋಡೋಣ.

ವಿಷ್ಣು ಎಂಬ ನಾಮವು–**ವಿಶ್ವಂ ವಿಷ್ಣುರ್ವಷಟ್ಕಾರಃ** ಎಂಬಲ್ಲೂ **ವೃಷಾಹೀ ವೃಷಭೋ ವಿಷ್ಣುಃ ಅನಿರ್ದೇಶ್ಯ ವಪುರ್ವಿಷ್ಣುಃ** ಎಂಬಲ್ಲೂ ಬಂದಿದೆ. ಸ್ಥಾಣು ಎಂಬ ನಾವು–**ಅಮೃತಃ ಶಾಶ್ವತಃ ಸ್ಥಾಣುಃ** ಎಂಬಲ್ಲೂ **ಸರ್ವಃ ಶರ್ವಃ ಶಿವಃ ಸ್ಥಾಣುಃ** ಎಂಬಲ್ಲೂ **ವಿಸ್ತಾರಃ ಸ್ಥಾವರಃ ಸ್ಥಾಣುಃ** ಎಂಬಲ್ಲೂ ಬಂದಿದೆ. ಶಿವ ಎಂಬ ನಾಮವು **ಸರ್ವಃ ಶರ್ವಃ ಶಿವಃ** ಎಂಬಲ್ಲೂ **ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃತ್ ಶಿವಃ** ಎಂಬಲ್ಲೂ ಬಂದಿದೆ. ಮಾಧವ ಎಂಬ ನಾಮವು **ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧು ಸೂದನಃ** ಎಂಬಲ್ಲೂ **ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ** ಎಂಬಲ್ಲೂ ಬಂದಿದೆ. ಇದೇ ರೀತಿಯಾಗಿ ಪದ್ಮನಾಭ, ಶಾಶ್ವತ, ಅಪರಾಜಿತ, ವಾಸುದೇವ, ಅಚ್ಯುತ ಮುಂತಾದ ನಾಮಗಳು ಪುನರುಕ್ತವಾಗಿರುವುದನ್ನು ಪಾರಾಯಣ ಮಾಡುವವರು ತಿಳಿದೇ ಇದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಯೋಚಿಸಬಹುದು.

ವಿಷ್ಣು ಸಹಸ್ರನಾಮ ಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಈ ಬಗೆಗೆ ಏನು ಹೇಳಿದ್ದಾರೆಂಬುದನ್ನು ನೋಡೋಣ –

"ವಿಷ್ಣ್ವಾದಿ ಶಬ್ದಾನಾಂ ಪುನರುಕ್ತಾನಾಮಪಿ ವೃತ್ತಿಭೇದೇನ ಅರ್ಥಭೇದಾತ್ ನ ಪೌನರುಕ್ತ್ಯಮ್ । ಶ್ರೀಪತಿರ್ಮಾಧವಃ ಇತ್ಯಾದೀನಾಂ ವೃತ್ತ್ಯೇ ಕತ್ವೇಽಪಿ ಶಬ್ದಭೇದಾನ್ನ ಪೌನರುಕ್ತ್ಯಮ್। ಅರ್ಥೈಕತ್ವೇಽಪಿ ನ ಪೌನರುಕ್ತ್ಯಂ ದೋಷಾಯ, ನಾಮ್ನಾಂ ಸಹಸ್ರಸ್ಯ ಕಿಮೇಕಂ ದೈವತಮ್ ಇತಿ ಪೃಷ್ಟೇಃ ಏಕದೇವತಾ ವಿಷಯತ್ವಾತ್ ।"

(ವಿಷ್ಣು ಮುಂತಾದ ಶಬ್ದಗಳು ಎರಡು ಮೂರು ಸಲ ಹೇಳಲ್ಪಟ್ಟಿದ್ದರೂ ವ್ಯುತ್ಪತ್ತಿ ಭೇದದಿಂದ ಬೇರೆ ಬೇರೆ ಅರ್ಥಗಳು ಸಂಭವಿಸುವುದರಿಂದ ಪುನರುಕ್ತಿ ದೋಷವಿಲ್ಲ. ಶ್ರೀಪತಿ, ಮಾಧವ ಮುಂತಾದುವುಗಳ ಅರ್ಥ ಒಂದೇ ಆದರೂ ಶಬ್ದ ಶಕ್ತಿಯು ಭಿನ್ನವಾದುದರಿಂದ ಪುನರುಕ್ತಿ ಇಲ್ಲ. ಒಂದೇ ಅರ್ಥವನ್ನು ಬೇರೆ ಬೇರೆ ಪದಗಳಿಂದ ಹೇಳಿದಾಗ ಸಹಸ್ರನಾಮ ಸ್ತೋತ್ರದಲ್ಲಿ ಪೌನರುಕ್ತ್ಯ ದೋಷವಿಲ್ಲ. ಸಾವಿರ ನಾಮಗಳಿಂದ ಹೇಳಲ್ಪಡುವ ಒಬ್ಬ ದೇವನು ಯಾರು? ಎಂಬುದೇ ಪ್ರಶ್ನೆಯಾಗಿದ್ದು ಉತ್ತರವು ಏಕ ದೇವತಾ ವಿಷಯವಾಗಿದ್ದುದರಿಂದ ದೋಷಕ್ಕೆ ಎಡೆಯಿಲ್ಲ.)

ಭಗವಂತನು ಒಬ್ಬನೇ, ಅವನ ರೂಪಗಳು ನೂರಾರು, ಸಾವಿರಾರು. ಒಬ್ಬ ಪರಮಾತ್ಮನನ್ನೇ ಸಾವಿರ ನಾಮಗಳಿಂದ ಭಜಿಸುತ್ತೇವೆ. **ದೇವ ಏಕೋ ನಾರಾಯಣಃ**. ಆದ್ದರಿಂದಲೇ ಅನೇಕ ದೇವರುಗಳ ಹೆಸರುಗಳು ಸಹಸ್ರನಾಮದಲ್ಲಿ ಬಂದಿವೆ. ಇದು ವಿಷ್ಣು ಸಹಸ್ರನಾಮ. ಇದರಲ್ಲಿ–'ಸರ್ವಃ ಶರ್ವಃ ಶಿವಃ ಸ್ಥಾಣುಃ' ಎಂದು ಶಿವನ ಪ್ರಸಿದ್ಧವಾದ ನಾಮಗಳನ್ನು ಏಕೆ ಹೇಳಿದ್ದಾರೆ? ಎಂದರೆ, ಆ ಶಬ್ದಗಳ ಅವಯವಾರ್ಥವನ್ನು ಗ್ರಹಿಸಿದಾಗ ಯಾವ ದೋಷವೂ ಇಲ್ಲ. **ಸರ್ವವೂ** ಸಮಸ್ತವೂ ಆಗಿರುವವನು ವಿಷ್ಣುವೇ. ಶರ್ವತಿ ಸಂಹರತಿ ಇತಿ ಶರ್ವಃ (ಜಗತ್ತಿನ ಪ್ರಳಯಕ್ಕೆ ಮೂಲವಾಗಿರುವ ದೇವತೆ) ಎಂದು ಅರ್ಥ. ಪರಬ್ರಹ್ಮ ಸ್ವರೂಪನಾದ ವಿಷ್ಣುವೇ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಕಾರಕನೆಂದು 'ಜನ್ಮಾದ್ಯಸ್ಯ ಯತಃ' ಎಂಬ ಬ್ರಹ್ಮಸೂತ್ರದಲ್ಲಿ ವ್ಯಕ್ತವಾಗಿದೆ. **ಶಿವಃ** ಎಂದರೆ ಮಂಗಳ ಸ್ವರೂಪನೆಂದು ಅರ್ಥವನ್ನು ಗ್ರಹಿಸಬೇಕು. ಇದೇ ರೀತಿಯಲ್ಲಿ ಶಿವ ಸಹಸ್ರನಾಮ ಸ್ತೋತ್ರದಲ್ಲಿ ವಿಷ್ಣುವಾಚಕಗಳೆಂದು ಪ್ರಸಿದ್ಧವಾದ ಪದಗಳಿದ್ದರೂ ಶಬ್ದ ವ್ಯುತ್ಪತ್ತಿಗೆ ಅನುಗುಣವಾದ ಅರ್ಥವನ್ನು ಗ್ರಹಿಸಬೇಕು. ಇದನ್ನು ಶ್ರೀ ಶಂಕರಾಚಾರ್ಯರು ಸ್ಪಷ್ಟಪಡಿಸಿದ್ದಾರೆ–

"ಅತ್ರ ನಾಮಸಹಸ್ರೇ ಆದಿತ್ಯಾದಿ ಶಬ್ದಾನಾಮ್ ಅರ್ಥಾಂತರೇ ಪ್ರಸಿದ್ಧಾನಾಂ ಆದಿತ್ಯಾದ್ಯರ್ಥಾನಾಂ ತದ್ವಿಭೂತಿತ್ವೇನ ತದಭೇದಾತ್ ತಸ್ಯೈವ ಸ್ತುತಿರಿತಿ ಪ್ರಸಿದ್ಧಾರ್ಥಗ್ರಹಣೇಽಪಿ ತತ್‌ಸ್ತುತಿತ್ವಮ್"

(ಈ ಈ ಸಹಸ್ರನಾಮ ಸ್ತೋತ್ರದಲ್ಲಿ ವಿಷ್ಣುವಿನ ನಾಮಗಳೆಂದು ಆದಿತ್ಯ ಮುಂತಾದ ಶಬ್ದಗಳನ್ನು ಬಳಸಿದ್ದಾರೆ. ಇವು ಸೂರ್ಯಬಿಂಬ ಮುಂತಾದ ಅರ್ಥಗಳನ್ನು ಹೇಳುತ್ತವೆ. ಆದರೂ ಆ ಆದಿತ್ಯಾದಿಗಳೆಲ್ಲ ಭಗವಾನ್ ವಿಷ್ಣುವಿನ ವಿಭೂತಿಗಳು. ಆದ್ದರಿಂದ ವಿಷ್ಣುವಿಗೂ ಆದಿತ್ಯಾದಿಗಳಿಗೂ ಅಭೇದ. ಆ ಪದಗಳೂ ಪರಮಾರ್ಥದಲ್ಲಿ ವಿಷ್ಣು ವಾಚಕವೇ. ಹೀಗೆ ಯಾವ ಅರ್ಥವನ್ನು ಗ್ರಹಿಸಿದರೂ ವಿಷ್ಣು ಸ್ತುತಿಯೇ ಆಗುವುದೆಂದು ತಿಳಿದುಕೊಳ್ಳಬೇಕು.)

ವಿಷ್ಣು ಎಂಬ ನಾಮವು ಮೂರು ಬಾರಿ ಬಂದಿರುವಾಗ ಅದರ ವ್ಯಾಖ್ಯಾನವನ್ನು ಹೇಗೆ ಮಾಡಿದ್ದಾರೆಂಬುದನ್ನು ನೋಡೋಣ. **ವಿಶ್ವಂ ವಿಷ್ಣುಃ** ಎಂಬಲ್ಲಿ **ವೇವೇಷ್ಟಿ ವ್ಯಾಪ್ನೋತೀತಿ ವಿಷ್ಣುಃ ... ದೇಶಕಾಲ ವಸ್ತು ಪರಿಚ್ಛೇದ ಶೂನ್ಯ ಇತ್ಯರ್ಥಃ** ಎಂದು ಹೇಳಿದ್ದಾರೆ. ಎಲ್ಲೆಲ್ಲೂ ವ್ಯಾಪಿಸಿರುವವನು ವಿಷ್ಣು. ಅವನಿಗೆ ದೇಶಕೃತವಾದ, ಕಾಲಕೃತವಾದ, ವಸ್ತುಕೃತವಾದ ಮಿತಿ ಇಲ್ಲ ಎಂದು ಭಾಷ್ಯದ ಅರ್ಥ. **ವೃಷಾಹೀ ವೃಷಭೋ ವಿಷ್ಣುಃ** ಎಂಬಲ್ಲಿ ವಿಷ್ಣುಃ, ವಿಷ್ಣುರ್ವಿಕ್ರಮಣಾದಿತಿ ವ್ಯಾಸೋಕ್ತೇಃ ಎಂದು ಭಾಷ್ಯವನ್ನು ಬರೆದಿದ್ದಾರೆ. ತ್ರಿವಿಕ್ರಮನಾಗಿ ವಿಕ್ರಮವನ್ನು ತೋರಿಸಿದ್ದರಿಂದ ವಿಷ್ಣು ಎಂದು ಇದರ ಅರ್ಥವಾಗುತ್ತದೆ. **ಅನಿರ್ದೇಶ್ಯವಪುರ್ವಿಷ್ಣುಃ** ಎಂಬಲ್ಲಿ **ರೋದಸೀ ವ್ಯಾಪ್ಯ ಕಾಂತಿರಭ್ಯಧಿಕಾ ಸ್ಥಿತಾಸ್ಯೇತಿ ವಿಷ್ಣುಃ** ಎಂದು ಭಾಷ್ಯವಿದೆ. ಭೂಲೋಕ ಸ್ವರ್ಗಲೋಕಗಳನ್ನು ವ್ಯಾಪಿಸಿದ ಅಧಿಕ ಕಾಂತಿಯುಳ್ಳವನು ವಿಷ್ಣು ಎಂದು ಕರೆಸಿಕೊಂಡಿದ್ದಾನೆ ಎಂದು ಇದರ ಅರ್ಥ.

ಇನ್ನು ಪುನರುಕ್ತವಾಗಿರುವ **ಸ್ಥಾಣು** ಎಂಬ ಪದವನ್ನು ನೋಡೋಣ. ಇದಕ್ಕೆ ಕೋಶದಲ್ಲಿ ಉಮಾಪತಿಯಾದ ಶಿವ ಎಂಬ ಅರ್ಥವಿದೆ. ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ ವಿಷ್ಣುವನ್ನೂ ಸ್ಥಾಣು ಎಂದು ಕರೆದಿದ್ದಾರೆ. **ಸರ್ವಃ ಶರ್ವಃ ಶಿವಃ ಸ್ಥಾಣುಃ** ಎಂಬಲ್ಲಿ ಆಚಾರ್ಯ ಶಂಕರರು **'ಸ್ಥಿರತ್ವಾತ್ ಸ್ಥಾಣುಃ'** ಎಂದು ಸಂಕಿಪ್ತವಾಗಿ ವ್ಯಾಖ್ಯಾನ ಮಾಡಿದ್ದಾರೆ. ಜಗತ್ತೆಲ್ಲ ಪ್ರಳಯಕ್ಕೆ ಗುರಿ ಆದರೂ ಸ್ಥಿರವಾಗಿ ಯಾವ ಬದಲಾವಣೆಯನ್ನೂ ಹೊಂದದೆ ಉಳಿದಿರುವವನು ವಿಷ್ಣುವೇ ಆದುದರಿಂದ ಅವನು ಸ್ಥಾಣು ಎಂದು ಅವರ ತಾತ್ಪರ್ಯ.

ಅಮೃತಃ ಶಾಶ್ವತ ಸ್ಥಾಣುಃ ಎಂಬಲ್ಲಿ ಆಚಾರ್ಯ ಶಂಕರರು ಶಾಶ್ವತ ಸ್ಥಾಣುಃ ಎಂಬುದು ಒಂದೇ ಪದ ಎಂದು ಸ್ವೀಕರಿಸಿದ್ದಾರೆ. ಶಾಶ್ವತಶ್ಚಾಸೌ ಸ್ಥಾಣು ಶ್ಚ ಎಂದು ವಿಗ್ರಹವನ್ನು ಮಾತ್ರ ತೋರಿಸಿದ್ದಾರೆ. ಸ್ಥಾಣು ಶಬ್ದಕ್ಕೆ ಬೇರೆ ಯಾವ ಅರ್ಥವನ್ನೂ ವಿವರಿಸಿಲ್ಲ. ಸ್ಥಾಣು ಎಂದರೆ ಸ್ಥಿರವಾಗಿ ನಿಂತಿರುವುದು ಎಂಬ ಅರ್ಥವನ್ನು ಹಿಂದೆ ಹೇಳಿರುವುದರಿಂದ ಅದಕ್ಕೆ ಶಾಶ್ವತ ಎಂಬ ವಿಶೇಷಣ ಏತಕ್ಕೆ ಎಂಬ ಸಂದೇಹವೂ ಹುಟ್ಟುತ್ತದೆ. ವಿಸ್ತಾರಃ ಸ್ಥಾವರ ಸ್ಥಾಣುಃ ಎಂಬಲ್ಲೂ ಆಚಾರ್ಯ ಶಂಕರರು ಸ್ಥಾವರ ಸ್ಥಾಣುಃ ಎಂಬುದು ಒಂದೇ ಪದ ಎಂದು ಸ್ವೀಕರಿಸಿದ್ದಾರೆ. ಸ್ಥಿತಿಶೀಲತ್ವಾತ್ ಸ್ಥಾವರಃ, ಸ್ಥಿತಿ ಶೀಲಾನಿ ಪೃಥಿವ್ಯಾದೀನಿ ತಿಷ್ಠಂತಿ ಅಸ್ಮಿನ್ನಿತಿ ಸ್ಥಾಣುಃ, ಸ್ಥಾವರ ಶ್ಚಾಸೌ ಸ್ಥಾಣುಶ್ಚ ಸ್ಥಾವರ ಸ್ಥಾಣುಃ ಎಂಬ ವಿವರಣೆಯನ್ನು ಕೊಟ್ಟಿದ್ದಾರೆ. ಸ್ಥಾವರಗಳಾದ ಪೃಥಿವೀ ಮುಂತಾದುವು ವಿಷ್ಣುವಿನ ಉದರದಲ್ಲೇ ಅಡಗಿವೆ ಎಂದು ಈ ನಾಮದ ಅಭಿಪ್ರಾಯ.

ಇಷ್ಟೆಲ್ಲ ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡುವ ಆವಶ್ಯಕತೆ ಏನಿದೆ ಎಂದು ಕೆಲವರು ಪ್ರಶ್ನಿಸಬಹುದು. ಅರ್ಥವನ್ನು ತಿಳಿದುಕೊಂಡು ಅಥವಾ ತಿಳಿದುಕೊಳ್ಳದೆ ಪಾರಾಯಣ ಮಾಡಿದರೆ ಬರುವ ಫಲ ಒಂದೇ ಅಲ್ಲವೆ? ಸೂರ್ಯನ ಬೆಳಕಿನಲ್ಲಿ ವಿಜ್ಞಾನವನ್ನು ತಿಳಿಯದವರೂ ಓಡಾಡುತ್ತಾರೆ. ಸೂರ್ಯನಲ್ಲಿ ಬೆಳಕನ್ನು ಕೊಡುವ ಶಕ್ತಿ ಎಲ್ಲಿಂದ ಬಂತು, ಯಾವ ವೇಗದಲ್ಲಿ ಎಷ್ಟು ಕಾಲದಲ್ಲಿ ಬೆಳಕು ಸೂರ್ಯನಿಂದ ಭೂಮಿಗೆ ತಲುಪುತ್ತದೆ, ಸೂರ್ಯನ ಬೆಳಕಿನಲ್ಲಿ ಎಷ್ಟು ಬಣ್ಣಗಳಿವೆ ಎಂಬುದನ್ನು ಅವರು ತಿಳಿದಿರುವುದಿಲ್ಲ. ಇವೆಲ್ಲವನ್ನೂ ಖಚಿತವಾಗಿ ತಿಳಿದುಕೊಂಡ ವಿಜ್ಞಾನಿಯೂ ಅದೇ ಬೆಳಕಿನಲ್ಲಿ ಓಡಾಡುತ್ತಾನೆ. ಇಬ್ಬರಿಗೂ ಫಲ ಸಮಾನ. ಹಾಗೆ ವಿಷ್ಣು ಸಹಸ್ರನಾಮದ ಸೂಕ್ಷ್ಮಾರ್ಥಗಳನ್ನು ತಿಳಿಯದವರೂ ಭಕ್ತಿಯಿಂದ ಪಾರಾಯಣ ಮಾಡಿದಾಗ ಫಲ ಸಮಾನವಾಗಿ ಸಿಕ್ಕುವುದೇನೋ ಸರಿ. ಆದರೂ ಅರ್ಥವನ್ನು ತಿಳಿದುಕೊಂಡು ಸ್ತೋತ್ರವನ್ನು ಪಠಿಸುವಾಗ ಒಂದು ವಿಶಿಷ್ಟವಾದ ಆನಂದ ಉಂಟಾಗುತ್ತದೆ. ಅದಕ್ಕಾಗಿ ಭಾಷ್ಯಗಳ ರಚನೆ ಆಗಿದೆ.

ವಿಷ್ಣು ಸಹಸ್ರನಾಮದ ಜಪ ಅಥವಾ ಪಾರಾಯಣ ಮುಖ್ಯ.

ಜಪಸ್ತು ಸರ್ವ ಧರ್ಮೇಭ್ಯಃ ಪರಮೋ ಧರ್ಮ ಉಚ್ಯತೇ।
ಅಹಿಂಸಯಾ ಚ ಭೂತಾನಾಂ ಜಪಯಜ್ಞಃ ಪ್ರವರ್ತತೇ॥

ಎಂಬುದು ಮಹಾಭಾರತ ವಚನ. ಎಲ್ಲ ಧರ್ಮಗಳಿಗಿಂತ ಶ್ರೇಷ್ಠ ಧರ್ಮವು ಜಪ. ಏಕೆಂದರೆ ಇದರಲ್ಲಿ ಯಾವ ಜೀವಕ್ಕೂ ಹಿಂಸೆಯಿಲ್ಲ. ಆದ್ದರಿಂದಲೇ ಭಗವಾನ್ ಕೃಷ್ಣನು 'ಯಜ್ಞಾನಾಂ ಜಪಯಜ್ಞೋಽಸ್ಮಿ' ಎಂದು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ವಿಷ್ಣು ಸಹಸ್ರನಾಮ ಸ್ತೋತ್ರದ ಜಪವು ಸಮಸ್ತ ಭಕ್ತರಿಗೂ ಶುಭವನ್ನು ತರುವುದಾಗಲಿ.

ಶ್ರೀ ಕೃಷ್ಣಾರ್ಪಣ ಮಸ್ತು

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗೆ ಶಾಸಕ ಜಿಟಿಡಿ ಚಾಲನೆ



ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು.

ಮೈಸೂರು, ಮಾ.12– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ. ದೇವೇಗೌಡರು ಚಾಲನೆ ನೀಡಿದರು.

ಮೈಸೂರಿನ ವಿಜಯನಗರ 3ನೇ ಹಂತದ ಸಂಗಮ್ ವೃತ್ತವನ್ನು 1 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿ ಹಾಗೂ ಹೆರಿಟೇಜ್ ಕ್ಲಬ್ ಎದುರಿನ ಉದ್ಯಾನದಲ್ಲಿ 9 ಲಕ್ಷ ರೂ. ವೆಚ್ಚದಲ್ಲಿ ವ್ಯಾಯಾಮ ಸಾಮಾಗ್ರಿಗಳು ಮತ್ತು ಮಕ್ಕಳ ಆಟಿಕೆ ಅಳವಡಿಸುವ ಕಾಮಗಾರಿ, ಬೋಗಾದಿ 2ನೇ ಹಂತದ ಜನಹಿತ ಸಂಘದ ರಸ್ತೆಯನ್ನು 40 ಲಕ್ಷದ ರೂ. ವೆಚ್ಚದಲ್ಲಿ ಅಭಿವೃದ್ಧಿ, ಮಂಡನಹಳ್ಳಿ ಗ್ರಾಮದಲ್ಲಿ 5 ಲಕ್ಷ ರೂ. ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಹಾಗೂ 35 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದರು.

ಸಮಾರಂಭದಲ್ಲಿ ವಿಜಯನಗರದ ಮರೀಗೌಡರು, ಮಂಜು, ರವಿಕುಮಾರ್, ಅಶೋಕ್, ಪುಟ್ಟೇಗೌಡ, ಕಾರ್ಯಪ್ಪ, ರಘು, ಮಂಜಪ್ಪ, ಹೇಮಂತ್, ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಉಮಾಶಂಕರ್, ಸುರೇಶ್, ಶೇಖರ್, ಜನಹಿತ ಸಂಘದ ಶ್ರೀನಿವಾಸ್, ರಿಷಿ, ಜೆಡಿಎಸ್ ಮುಖಂಡ ಹೆಚ್.ಸಿ.ರಾಜು, ಬೆಳವಾಡಿ ಶಿವಕುಮಾರ್, ಹಾರೋಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಜಯಪ್ಪ, ಮುಖಂಡರಾದ ಜವರನಾಯಕ, ದಾರಿಪುರ ಬಸವಣ್ಣ, ನಾಗರಾಜು, ರೇಣುಕಾ, ಧನಗಳ್ಳಿ ಸ್ವಾಮಿ, ದೇವರಾಜು, ಮದ್ದೂರು ಹರೀಶ್, ಶಿವಣ್ಣ, ಶಿವನಂಜಯ್ಯ, ಗುಜ್ಜೇಗೌಡನಪುರ ಪ್ರಕಾಶ್, ಚನ್ನಕೇಶವ ಮತ್ತಿತರರು ಭಾಗವಹಿಸಿದ್ದರು.

ಟಿಕೆಟ್ ಸಿಗುವ ವಿಶ್ವಾಸವಿದೆ; ಎಕ್ಸ್‌ನಲ್ಲಿ ಸಂಸದ ಪ್ರತಾಪ್ ಸಿಂಹ


ಇಲ್ಲವಾದರೆ ಪಕ್ಷಕ್ಕಾಗಿ ದುಡಿಯುತ್ತೇನೆ



ಮೈಸೂರು,ಮಾ.12(ಪಿಎಂ)– ನನಗೆ ಟಿಕೆಟ್ ಸಿಗುತ್ತದೆ ಎಂಬ ವಿಶ್ವಾಸವಿದೆ. ಇಲ್ಲದಿದ್ದರೆ ನಾನು ಪಕ್ಷಕ್ಕಾಗಿ ದುಡಿಯುತ್ತೇನೆಂದು ಸಂಸದ ಪ್ರತಾಪ್ ಸಿಂಹ ಸಾಮಾಜಿಕ ಜಾಲತಾಣದಲ್ಲಿ (ಎಕ್ಸ್) ಹೇಳಿಕೊಂಡಿದ್ದಾರೆ.

ಕರ್ನಾಟಕದ ಬಿಜೆಪಿ ಚುನಾವಣಾ ಉಸ್ತುವಾರಿ ಡಾ.ರಾಧಮೋಹನ್ ದಾಸ್ ಅಗರ್‌ವಾಲ್ ಅವರನ್ನು ಬೆಂಗಳೂರಿನಲ್ಲಿ ಮಂಗಳವಾರ ಭೇಟಿಯಾದ ಬಳಿಕ ಸಾಮಾಜಿಕ ಜಾಲತಾಣದಲ್ಲಿ ಅವರ ಜೊತೆಗಿರುವ ಫೋಟೋದೊಂದಿಗೆ ಪ್ರತಿಕ್ರಿಯಿಸಿದ್ದಾರೆ.

'ಡಾ.ರಾಧಾಮೋಹನ್ ದಾಸ್ ಅಗರ್‌ವಾಲ್ ಸರ್ ಅವರೊಂದಿಗೆ ನಾನು ಈಗಷ್ಟೆ ಗಂಟೆಯಷ್ಟು ಕಾಲ ಸಭೆ ನಡೆಸಿದ್ದೇನೆ. ನಾನು ಈ ಮೊದಲು ಹೇಳಿದ್ದೇನೆ ಈಗಲೂ ಹೇಳುತ್ತೇನೆ. ನರೇಂದ್ರ ಮೋದಿಜಿ ಇಲ್ಲದೇ ನಾನು ಏನೂ ಅಲ್ಲ. ನನಗೆ ಟಿಕೆಟ್ ದೊರೆಯುವ ವಿಶ್ವಾಸವಿದೆ. ಇಲ್ಲದಿದ್ದರೆ ನಾನು ಪಕ್ಷಕ್ಕಾಗಿ ಕೆಲಸ ಮಾಡುತ್ತೇನೆ' ಎಂದು ಎಕ್ಸ್‌ನಲ್ಲಿ ಮಂಗಳವಾರ ರಾತ್ರಿ ಹೇಳಿಕೊಂಡಿದ್ದಾರೆ.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಏಳು ಮಂದಿ ವಿಶೇಷ ಚೇತನರಿಗೆ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ಮೂರು ಚಕ್ರದ ವಾಹನವನ್ನು ಸಂಸದ ಪ್ರತಾಪ್ ಸಿಂಹ ಜನದರ್ಶಿನಿ ಅತಿಥಿಗೃಹದ ಆವರಣದಲ್ಲಿ ಮಂಗಳವಾರ ವಿತರಣೆ ಮಾಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅರಮನೆ ರಾಜನ ಬದುಕು ಬಿಟ್ಟು ರಾಜಕೀಯಕ್ಕೆ ಬಂದರೆ ಯದುವೀರ್‌ಗೆ ಸ್ವಾಗತ

ಅವರು ಸಂಸದರಾದರೆ ಮಾಡಬೇಕಾಗಿರುವ ಕಾರ್ಯಗಳು ಬಹಳಷ್ಟಿವೆ: ಸಂಸದ ಪ್ರತಾಪ್ ಸಿಂಹ



■ನಮ್ಮ ನಾಯಕರು ಯದುವೀರ್ ಮನವೊಲಿಸಿದ್ದಾರೆ ■ಅವರು ಸಂಸದನಾದರೆ ಎರಡು ಸಾವಿರ ಎಕರೆ ಭೂಮಿ ಜನರಿಗೆ ನೀಡಬೇಕಾಗುತ್ತೆ! ■ಬೆಂಗಳೂರು ಅರಮನೆ ಜನರ ಉಪಯೋಗಕ್ಕೆ ಬಿಡಬೇಕಾಗುತ್ತೇ ■ಸಿದ್ದರಾಮಯ್ಯ ವಿರುದ್ಧ ಪ್ರತಿಭಟನೆಗೂ ಇಳಿಯಬೇಕು ■ಬಿಜೆಪಿ ನಾಯಕರಿಗಾಗಿ ಗಂಟೆ ಗಟ್ಟಲೆ ಕಾದು ನಿಲ್ಲಲೂಬೇಕು

ಮೈಸೂರು, ಮಾ.12(ಬಿಎಲ್‌ಯು)– ಅರಮನೆಯ ಹವಾ ನಿಯಂತ್ರಿತ ಕೊಠಡಿಯ ರಾಜನ ಬದುಕು ಬಿಟ್ಟು ಸಾಮಾನ್ಯ ಪ್ರಜೆಯ ರೀತಿ ಬದುಕಲು ಬರುತ್ತೇನೆ ಎಂದರೆ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರಾಜಕೀಯ ಮಾಡಬಹುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಬೋಗಾದಿಯ ಕಲ್ಯಾಣ ಮಂಟಪದಲ್ಲಿ ನಡೆದ ಲೋಕಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಭೆಯ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಯುವರಾಜನಿಗೆ ಟಿಕೆಟ್ ಕೊಟ್ಟರೆ ಸ್ವಾಗತ ಕೋರುವೆ. ಬಿಜೆಪಿ ಕಾರ್ಯಕರ್ತನಾಗಿ ನಾನು ಕೂಡ ಅವರ ಪರ ಕೆಲಸ ಮಾಡುವೆ ಎಂದು ಸ್ಪಷ್ಟಪಡಿಸಿದ್ದಾರೆ.

ಯದುವೀರ್ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದರೆ ಜನಪ್ರತಿನಿಧಿಯಾಗುತ್ತಾರೆ. ಆ ಸಂದರ್ಭದಲ್ಲಿ ಅವರಿಗೆ ಸೇರಿದ ಎರಡು ಸಾವಿರ ಎಕರೆ ಪ್ರದೇಶವನ್ನು ಜನರ ಉಪಯೋಗಕ್ಕೆ ಬಿಟ್ಟು ಕೊಡಬೇಕಾಗುತ್ತದೆ ಎಂದು ಹೇಳಿದರು.

ಎಲ್ಲವನ್ನೂ ಜನರಿಗಾಗಿ ನೀಡಬೇಕು: ಮೈಸೂರಿನ ದಸರಾ ವಸ್ತು ಪ್ರದರ್ಶನ, ಚಾಮುಂಡಿಬೆಟ್ಟ, ಆಡಳಿತ ತರಬೇತಿ ಕೇಂದ್ರ, ಲಲಿತ ಮಹಲ್ ಹೆಲಿಪ್ಯಾಡ್, ವಿಜಯಶ್ರೀಪುರ ಸೇರಿದಂತೆ ಅವರಿಗೆ ಸೇರಿದ ಭೂಮಿಯನ್ನು ಜನರಿಗಾಗಿ ಬಿಟ್ಟು ಕೊಡಬೇಕು. ಜನರ ಸೇವೆ ಮಾಡಲು ಬಂದವರು ಜನರಿಗೆ ಸವಲತ್ತು ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಮೂಲಕ ಮೈಸೂರು ರಾಜಮನೆತನಕ್ಕೆ ಸೇರಿವೆ ಎಂದು ನ್ಯಾಯಾಲಯದಲ್ಲಿ ಹೂಡಿರುವ ದಾವೆಗಳನ್ನು ವಾಪಾಸು ಪಡೆಯಬೇಕು. ಸರ್ಕಾರದ ಭಾಗವಾಗಿ, ಜನಪ್ರತಿನಿಧಿಯಾಗಿ ಅವರಿಗೆ ಸೇರಿದ ಭೂಮಿ ಜನರಿಗೆ ನೀಡಬೇಕು ಎಂದು ಪುನರುಚ್ಚರಿಸಿದರು. ಯದುವೀರ್ ಕಾನ್ವೆಂಟ್‌ನಲ್ಲಿ ಓದಿದವರು, ಪದವಿ ಪಡೆದವರು, ಇಂಗ್ಲಿಷ್ ಚೆನ್ನಾಗಿ ಬಲ್ಲವರು, ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಹೊಂದಿರುವವರು. 1947ರ ಸ್ವಾತಂತ್ರ್ಯ ನಂತರ ರಾಜ ಹಾಗೂ ಪ್ರಜೆ ನಡುವಿನ ವ್ಯತ್ಯಾಸ ಇಲ್ಲದೆ ಎಲ್ಲರೂ ಸಮಾನರಾಗಿದ್ದೇವೆ. ಇಂತಹ ಸಂದರ್ಭದಲ್ಲಿ ರಾಜ ನಾಗಿದ್ದವನು ಸಾಮಾನ್ಯ ಪ್ರಜೆಯಂತೆ ಬದುಕಲು ಬಂದಾಗ ಜನರಿಗೆ ಬಹಳಷ್ಟು ಉಪಯೋಗವಾಗುತ್ತದೆ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ತಡೆದಿರುವ ನೀರಿನ ಸಂಪರ್ಕ ತೆರವುಗೊಳಿಸಬೇಕು: ಕೇಂದ್ರ ಸರ್ಕಾರದ ಅಮೃತ್ ಯೋಜನೆಯಡಿ ಮೈಸೂರು ನಗರದಿಂದ ಚಾಮುಂಡಿಬೆಟ್ಟಕ್ಕೆ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿದೆ. ಆದರೆ ಚಾಮುಂಡಿಬೆಟ್ಟದಲ್ಲಿನ ರಾಜಮನೆತನದ ಪ್ಯಾಲೆಸ್ ಆವರಣದ ಒಳಗೆ ಪೈಪ್‌ಲೈನ್ ಹೋಗಿರುವ ಕಾರಣ ಪ್ರಮೋದಾ ದೇವಿ ಒಡೆಯರ್ ನೀರಿನ ಸಂಪರ್ಕ ಕಲ್ಪಿಸಲು ಅವಕಾಶ ಕಲ್ಪಿಸುತ್ತಿಲ್ಲ. ಈಗ ಯದುವೀರ್ ಲೋಕಸಭಾ ಸದಸ್ಯರಾಗಿ ಆಯ್ಕೆಯಾದರೆ ಪ್ಯಾಲೆಸ್ ಆವರಣದಲ್ಲೇ ಪೈಪ್ ಹಾಕಿ ನೀರಿನ ಸಂಪರ್ಕ ಕಲ್ಪಿಸಬೇಕಾಗುತ್ತದೆ ಎಂದು ಹೇಳಿದರು.

ರಾಜೇಂದ್ರ ಶ್ರೀಗಳ ಪ್ರತಿಮೆ ಅನಾವರಣಗೊಳಿಸಬೇಕು: ಇದಲ್ಲದೆ ಗನ್ ಹೌಸ್ ಬಳಿಯ ವೃತ್ತದಲ್ಲಿ ಜೆಎಸ್‌ಎಸ್ ಮಠಾಧೀಶರಾದ ದಿವಂಗತ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಪ್ರತಿಮೆ ಅನಾವರಣ ಮಾಡಲು ಸುಪ್ರೀಂಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಈಗ ಲೋಕಸಭಾ ಸದಸ್ಯರಾದರೆ ತಡೆಯಾಜ್ಞೆ ತೆರವುಗೊಳಿಸಿ, ನ್ಯಾಯಾಲಯದ ದಾವೆ ವಾಪಾಸು ಪಡೆದು ಯದುವೀರ್ ಅವರೇ ಸ್ವಾಮೀಜಿ ಪ್ರತಿಮೆ ಸ್ಥಾಪನೆ ಮಾಡಬೇಕಿದೆ ಎಂದು ತಿಳಿಸಿದರು.

ವಿಜಯಶ್ರೀಪುರ ಒಪ್ಪಿಸಬೇಕಾಗುತ್ತೆ: ಮೈಸೂರಿನ ವಿಜಯಶ್ರೀಪುರ ಬಡಾವಣೆಯ ಭೂಮಿ ತಮಗೆ ಸೇರಿದೆ ಎಂದು ವಾದಿಸುತ್ತಿದ್ದಾರೆ. ಲೋಕಸಭಾ ಸದಸ್ಯರಾದರೆ ವಿಜಯಶ್ರೀಪುರ ಬಡಾವಣೆಯಲ್ಲಿ ತಮ್ಮ ಹಕ್ಕು ಪ್ರತಿಪಾದನೆಯಿಂದ ಹಿಂದಕ್ಕೆ ಸರಿದು ಅಲ್ಲಿನ ಜನರ ಮಾಲೀಕತ್ವಕ್ಕೆ ನಿವೇಶನಗಳನ್ನು ನೀಡಬೇಕು. ಇದಲ್ಲದೆ ಬೆಂಗಳೂರು ಅರಮನೆಯನ್ನು ಜನರ ಉಪಯೋಗಕ್ಕೆ ನೀಡಬೇಕು ಎಂದು ಪ್ರತಾಪ್ ಸಿಂಹ ಹೇಳಿದರು.

ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಬೇಕು: ಅರಮನೆಯಲ್ಲಿ ಆರಾಮವಾಗಿದ್ದ ವ್ಯಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣಾ ಫಲಕ ಹಿಡಿದು ಧಿಕ್ಕಾರದ ಘೋಷಣೆ ಕೂಗುತ್ತೇನೆ ಅಂದರೆ ಅವರಿಗೆ ಅರಮನೆಯ ವೈಭೋಗ ಬೇಕಿಲ್ಲ ಎಂಬುದು ಸ್ಪಷ್ಟ. ಈ ಮೂಲಕ ನಾನು ಸಾಮಾನ್ಯನಾಗಿರುತ್ತೇನೆ ಎಂದರೆ ಸ್ವಾಗತ ಮಾಡುವೆ ಎಂದರು.

ಬಾಹುಬಲಿ ಸಿನಿಮಾದಲ್ಲಿ ಅರಮನೆಯಿಂದ ಹೊರಗೆ ಹಾಕಿದ ಮೇಲೆ ಅಮರೇಂದ್ರ ಬಾಹುಬಲಿ ಅರಮನೆಯಿಂದ ಹೊರಗೆ ಬಂದ. ಆದರೆ ಯದುವೀರ್ ಅವರಾಗಿಯೇ ಅರಮನೆಯಿಂದ ಹೊರಗೆ ಬರುತ್ತೇನೆ ಅಂದರೆ ಸ್ವಾಗತ ಕೋರಬೇಕಲ್ಲವೆ? ಎಂದು ಹೇಳಿದರು.

ನಮ್ಮ ಬಿಜೆಪಿ ಕಾರ್ಯಕಾರಣಿ ನಡೆದಾಗ ನಮ್ಮ ನಾಯಕರು ವೇದಿಕೆಯಲ್ಲಿ ಆಸೀನರಾಗಿರುತ್ತಾರೆ. ನಾವು ಕೆಳಗೆ ಕೂತಿರುತ್ತೇವೆ. ಈಗ ಯದುವೀರ್ ಎಲ್ಲರಂತೆ ಕೆಳಗೆ ಕೂರುತ್ತೇನೆ ಅಂದರೆ ಸ್ವಾಗತಿಸಬೇಕು. ನಮ್ಮ ನಾಯಕರು ಏರ್‌ಪೋರ್ಟ್‌ಗೆ ಬಂದಾಗ ಗಂಟೆ ಗಟ್ಟಲೆ ಕಾದು ಸ್ವಾಗತ ಕೋರಿ ಜೊತೆ ಜೊತೆಗೆ ಹೋಗುತ್ತೇವೆ. ಅವರಿಗೆ ಊಟ ಮಾಡಿಸಿ ಮತ್ತೆ ಏರ್‌ಪೋರ್ಟ್‌ಗೆ ಬಿಟ್ಟು ಬರುತ್ತೇವೆ. ಈಗ ಯದುವೀರ್ ಆ ಕೆಲಸ ಮಾಡುತ್ತಾರೆ ಎಂದರೆ ಸ್ವಾಗತಿಸಬೇಕಲ್ಲವೆ ಎಂದು ಪ್ರತಾಪ್ ಸಿಂಹ ಮರು ಎಂದರು.

ಕಸ ತೆರವಿಗೆ ಮುಂದಾಗಬೇಕು: ಕೆಲವು ಪ್ರಕರಣಗಳು ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದಾಗ, ನಾನು ಫೋನ್ ಮಾಡುತ್ತಿದ್ದೆ. ನಗರದಲ್ಲಿ ಕಸ ಬಿದಿದ್ದರೆ, ರಿಂಗ್ ರಸ್ತೆಯಲ್ಲಿ ಕಟ್ಟಡ ತ್ಯಾಜ್ಯ ಸುರಿದಿದ್ದರೆ ನನಗೆ ದೂರು ನೀಡುತ್ತಿದ್ದರು. ಈಗ ಯದುವೀರ್ ಅವರೇ ಈ ಎಲ್ಲಾ ಕಾರ್ಯವನ್ನು ಮಾಡುತ್ತೇನೆ ಎಂದರೆ ಅವರನ್ನು ಬೆಂಬಲಿಸಬೇಕು ಎಂದರು. ಅರಮನೆಯಲ್ಲಿದ್ದ ರಾಜನನ್ನು ನಮ್ಮ ಕೆಲವು ಬಿಜೆಪಿ ನಾಯಕರು ಮನವೊಲಿಸಿ ರಾಜಕೀಯಕ್ಕೆ ಕರೆ ತರುತ್ತಿದ್ದಾರೆ. ಅವರನ್ನು ನಾವು ಸ್ವಾಗತಿಸಬೇಕಲ್ಲವೆ ಎಂದು ಪ್ರತಾಪ್ ಸಿಂಹ ಹೇಳಿದರು. ಯದುವೀರ್ ಲೋಕಸಭಾ ಸದಸ್ಯರಾದರೆ ಮುಂದೆ ಏನೇನು ಮಾಡಬೇಕಾ ಗುತ್ತದೆ ಎಂದು ಪ್ರತಾಪ್ ಸಿಂಹ ಪಟ್ಟಿಯನ್ನೇ ಮುಂದಿಟ್ಟರು.

ಸಿದ್ದರಾಮಯ್ಯ ವಿರುದ್ಧ ಮಾತನಾಡಲು ಬಿಜೆಪಿ ನಾಯಕರಿಗೆ ತೊಡೆ ನಡುಗುತ್ತದೆ

ಸ್ವಪಕ್ಷದ ವಿರುದ್ಧ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ

● ನಿಮ್ಮ ಮನೆ ಕಾಯುವವರಿಗೆ ಟಿಕೆಟ್ ಕೊಡಬೇಕು; ಆದರೆ ನಾವು ಅವರ ಮನೆ ಕಾಯುವ ಸ್ಥಿತಿ ಬರಬಾರದು; ಕೈ ಮುಗಿಯುತ್ತೇನೆ ನಾಯಕರ ಹಿಂದೆ ಹೋಗಬೇಡಿ!

ಮೈಸೂರು, ಮಾ.12(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾತನಾಡಲು ನಮ್ಮ ಬಿಜೆಪಿ ನಾಯಕರಿಗೆ ತೊಡೆ ನಡುಗುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ಸ್ವಪಕ್ಷದ ನಾಯಕರ ವಿರುದ್ಧವೇ ಆವೇಶಭರಿತರಾಗಿ ಟೀಕಾ ಪ್ರಹಾರ ನಡೆಸಿದರು. ಮೈಸೂರಿನ ಬೋಗಾದಿಯ ಕಲ್ಯಾಣ ಮಂಟಪದಲ್ಲಿ ನಡೆದ ಲೋಕಸಭಾ ಕ್ಷೇತ್ರದ ಚುನಾವಣಾ ನಿರ್ವಹಣಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಹಳೇ ಮೈಸೂರು ಭಾಗದಲ್ಲಿ ಸಿದ್ದರಾಮಯ್ಯ ವಿರುದ್ಧ ತೊಡೆ ತಟ್ಟಿದ ಏಕೈಕ ವ್ಯಕ್ತಿ ಈ ಪ್ರತಾಪ್ ಸಿಂಹ ಎಂದರು.

ನಾನು ರಿಯಲ್ ಎಸ್ಟೇಟ್ ಮಾಡಿಲ್ಲ, ಕಮಿಷನ್ ಪಡೆದಿಲ್ಲ, ಭಟ್ಟಂಗಿಗಳನ್ನು ಕಟ್ಟಿಕೊಂಡು ಓಡಾಡಿಲ್ಲ. ಅಭಿವೃದ್ಧಿ ಮಾತ್ರ ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು. ಈ ಹಿಂದೆ ಬಿಜೆಪಿಯಿಂದ ಗೆದ್ದವರು ಪಕ್ಷವನ್ನು ಹೇಗೆ ಕಟ್ಟಿದರು, ಎಷ್ಟು ಜನರನ್ನು ಬೆಳೆಸಿದ್ದಾರೆ ಹೇಳಿ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ನಾನು ಪಲಾಯನವಾದಿಯಲ್ಲ, ನಿಮ್ಮ ಜೊತೆ ಸದಾ ಇರುತ್ತೇನೆ. ಆದರೆ ಮುಂದಿನ ದಿನಗಳಲ್ಲಿ ಗಾಸಿಪ್ ಹರಡಬೇಡಿ ಎಂದು ಸಲಹೆ ನೀಡಿದರು. ಜನರ ಪ್ರೀತಿ, ವಿಶ್ವಾಸ ಸಂಪಾದನೆ ಮಾಡಿರುವ ನಾನು, ರಾಜು ಕೊಲೆಯಾದಾಗ ಧೈರ್ಯದಿಂದ ಹೋರಾಟ ಮಾಡಿದ್ದೇನೆ. ಮೈಸೂರು ಹಾಗೂ ಕೊಡಗು ಜಿಲ್ಲೆಯನ್ನು ಬಿಜೆಪಿ ಭದ್ರ ಕೋಟೆಯಾಗಿ ಮಾಡಿದ್ದೇನೆ. ಈ ಬಾರಿಯೂ ಟಿಕೆಟ್ ಕೊಟ್ಟರೆ ಮೂರು ಲಕ್ಷ ಮತಗಳ ಅಂತರದಿಂದ ಗೆಲ್ಲುತ್ತೇನೆ. ಆಲ್ ಪಾರ್ಟಿ ಮೆಂಬರ್ ಆಗಿರುವ ನಾನು, ಒಳ್ಳೆಯ ಕೆಲಸ ಮಾಡಿದ್ದೇನೆ. ಅವಕಾಶ ಸಿಕ್ಕರೆ ಕೊಡಗಿನ ಜನರ ಋಣ ತೀರಿಸುತ್ತೇನೆ ಎಂದು ಭರವಸೆ ನೀಡಿದರು. ನಿಮ್ಮ ಮನೆ ಕಾಯುವವರಿಗೆ ಟಿಕೆಟ್ ಕೊಡಬೇಕೆ ಹೊರತು, ನಾವು ಅವರ ಮನೆ ಕಾಯುವ ಸ್ಥಿತಿ ಬರಬಾರದು ಎಂದು ಪರೋಕ್ಷವಾಗಿ ರಾಜವಂಶಸ್ಥ ಯದುವೀರ್ ಉಲ್ಲೇಖಿಸಿ ಹೇಳಿದ ಪ್ರತಾಪ್ ಸಿಂಹ, ಕಾರ್ಯಕರ್ತರೇ ನನ್ನ ದೊಡ್ಡ ಶಕ್ತಿಯಾಗಿದ್ದು, ಯಾರು ತಲೆ ಕೆಡಿಸಿಕೊಳ್ಳಬೇಡಿ. ಗಟ್ಟಿಗನಾದ ನಾನು ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತೇನೆ ಎಂದು ಪ್ರತಾಪ್ ಸಿಂಹ ಘರ್ಜಿಸಿದರು.

ಬಿಜೆಪಿಗಾಗಿ ಬಾವುಟ ಕಟ್ಟುತ್ತೇನೆ. ಆದರೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನಾಯಕರ ಹಿಂದೆ ಹೋಗಬೇಡಿ. ಪಕ್ಷದ ಜೊತೆ ಹೋಗಿ ಎಂದು ಸಲಹೆ ನೀಡಿದ ಪ್ರತಾಪ್ ಸಿಂಹ, ಯಾರೂ ಅಪಪ್ರಚಾರ ಮಾಡಬೇಡಿ. ಪಕ್ಷದ ಅಭ್ಯರ್ಥಿ ನಾನೇ ಆಗಲಿ ಅಥವಾ ಬೇರೆ ಯಾರೇ ಆಗಲಿ, ಬಿಜೆಪಿ ಅಭ್ಯರ್ಥಿ ಗೆಲ್ಲಿಸೋಣ ಎಂದು ಕರೆ ನೀಡಿದರು. ಆವೇಶ ಹಾಗೂ ಬಾವುಕರಾಗಿ ಮಾತನಾಡಿದ ಪ್ರತಾಪ್ ಸಿಂಹ, ಮೈಸೂರು ಲೋಕಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿಯೂ ಆದ ಶಾಸಕ ಡಾ.ಅಶ್ವಥ್ ನಾರಾಯಣ್ ಭಾಷಣ ಆರಂಭಿಸುತ್ತಿದ್ದಂತೆ ಸಭೆಯಿಂದ ಏಕಾಏಕಿ ನಿರ್ಗಮಿಸಿದರು.

ಕಾರಿನ ಮೇಲೆ ಕಬ್ಬು ತುಂಬಿದ ಲಾರಿ ಉರುಳಿ ಬಿದ್ದು

ಒಂದೇ ಕುಟುಂಬದ ಮೂವರು ಸಾವು



ಚಾಮರಾಜನಗರ, ಮಾ.12–ಕಾರಿನ ಮೇಲೆ ಕಬ್ಬು ತುಂಬಿದ ಲಾರಿ ಉರುಳಿ ಬಿದ್ದ ಪರಿಣಾಮ ಸ್ಥಳದಲ್ಲೇ ಒಂದೇ ಕುಟುಂಬದ ಮೂವರು ಮೃತಪಟ್ಟಿರುವ ಘಟನೆ ಚಾಮರಾಜನಗರ ಗಡಿಭಾಗವಾದ ತಮಿಳುನಾಡಿನ ದಿಂಬಂ ಘಾಟ್‌ನಲ್ಲಿ ಮಂಗಳವಾರ ನಡೆದಿದೆ. ಮೃತರು ತಮಿಳುನಾಡಿನ ಈರೋಡ್ ಮೂಲದವರು ಎಂದು ಗುರುತಿಸಲಾಗಿದ್ದು, ಪೂರ್ಣ ಮಾಹಿತಿ ತಿಳಿದು ಬಂದಿಲ್ಲ.

ಒಂದೇ ಕುಟುಂಬದ ಐವರು ಕಾರಿನಲ್ಲಿ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಬರುತ್ತಿದ್ದರು. ಈ ವೇಳೆ ತಾಳವಾಡಿಯಿಂದ ಸತ್ಯಮಂಗಲಂದತ್ತ ಕಬ್ಬು ತುಂಬಿಕೊಂಡು ಹೋಗುತ್ತಿದ್ದ ಲಾರಿ ಚಾಲಕನ ನಿಯಂತ್ರಣ ತಪ್ಪಿ ದಿಂಬಂನ 27ನೇ ತಿರುವಿನಲ್ಲಿ ಕಾರಿನ ಮೇಲೆ ಉರುಳಿ ಬಿದ್ದಿದೆ. ಪರಿಣಾಮ ಕಾರಿನಲ್ಲಿದ್ದ ಐವರಲ್ಲಿ ಮೂವರು ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡು ಸತ್ಯಮಂಗಲಂ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ತಮಿಳುನಾಡಿನ ಆಸನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೋಕಸಭಾ ಚುನಾವಣೆ–2024: ಮೈಸೂರು–ಕೊಡಗು ಕ್ಷೇತ್ರಕ್ಕೆ

ಯಾರೇ ಅಭ್ಯರ್ಥಿ ಆದರೂ ಅವರ ಗೆಲುವಿಗೆ ಶ್ರಮಿಸುತ್ತೇವೆ

● ಮೈಸೂರು ನಗರ, ಜಿಲ್ಲಾ ಬಿಜೆಪಿ ಘೋಷಣೆ ● ಇನ್ನೂ ಅಭ್ಯರ್ಥಿ ಘೋಷಣೆ ಆಗದ ಹಿನ್ನೆಲೆಯಲ್ಲಿ ಗೊಂದಲ ಬೇಡ


ಮೈಸೂರು, ಮಾ.12(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯಾರೆಂದು ಇನ್ನೂ ನಿರ್ಧಾರವಾಗಿಲ್ಲ. ಅಭ್ಯರ್ಥಿ ಯಾರೇ ಆದರೂ ಅವರ ಗೆಲುವಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು ಶ್ರಮಿಸುವುದಾಗಿ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಸ್ಪಷ್ಟಪಡಿಸಿದರು.

ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಪಕ್ಷದ ಸ್ಥಳೀಯ ನಾಯಕರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದೆರಡು ದಿನಗಳಿಂದ ಲೋಕಸಭಾ ಚುನಾವಣೆ ಅಭ್ಯರ್ಥಿ ಯಾರು? ಎಂಬ ಜಿಜ್ಞಾಸೆ ನಡೆದಿದೆ. ಮಾಧ್ಯಮಗಳಲ್ಲಿ ಕೆಲವರ ಹೆಸರು ಕೇಳಿಬಂದಿವೆ. ಈ ಹಿನ್ನೆಲೆಯಲ್ಲಿ ಬೇರೆ ವಿಚಾರಗಳೂ ಪ್ರಸ್ತಾಪವಾಗಿವೆ. ಆದರೆ ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಈ ವಿಚಾರದಲ್ಲಿ ಗೊಂದಲಕ್ಕೀಡಾಗಬಾರದು ಎಂದರು.

ಇಲ್ಲಿ ಕುಳಿತಿರುವ ಯಾವ ನಾಯಕರು ಅಥವಾ ರಾಜ್ಯದ ನಾಯಕರೂ ಲೋಕಸಭೆ ಚುನಾವಣೆಗೆ ಟಿಕೆಟ್ ನೀಡಲು ಸಾಧ್ಯವಿಲ್ಲ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಚುನಾವಣಾ ಸಂಸದೀಯ ಮಂಡಳಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿದೆ. ಹಾಗಾಗಿ ಯಾರೋ ಒಬ್ಬ ಸ್ಥಳೀಯ ನಾಯಕರಿಂದ, ಪದಾಧಿಕಾರಿಗಳಿಂದ, ರಾಜ್ಯಾಧ್ಯಕ್ಷರಿಂದ ಟಿಕೆಟ್ ತಪ್ಪಿತು ಎಂಬ ಮಾತು ಬರಬಾರದು ಎಂಬ ಕಾರಣಕ್ಕೆ ಸುದ್ದಿಗೋಷ್ಠಿ ಮೂಲಕ ಸ್ಪಷ್ಟಪಡಿಸುತ್ತೇನೆ ಎಂದು ತಿಳಿಸಿದರು.

ಹತ್ತು ವರ್ಷಗಳ ಹಿಂದೆ ಪ್ರತಾಪ್ ಸಿಂಹ ಅವರು ಅಭ್ಯರ್ಥಿಯಾಗಿ ಬಂದ ಸಂದರ್ಭದಲ್ಲಿ ಇಲ್ಲಿನ ಯಾವ ಮುಖಂಡರು ಹಾಗೂ ಕಾರ್ಯಕರ್ತರಿಗೆ ಪರಿಚಿತರಾಗಿರಲಿಲ್ಲ. ಆದರೂ ಎಲ್ಲರೂ ಸೇರಿ ಚುನಾವಣೆಯಲ್ಲಿ ಗೆಲ್ಲಿಸಿದ್ದೆವು. ಆದರೆ ಈಗ ಯಾರು ಅಭ್ಯರ್ಥಿ ಎನ್ನುವುದೇ ಇನ್ನೂ ತೀರ್ಮಾನವಾಗಿಲ್ಲ. ಈ ವಿಚಾರವಾಗಿ ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಯಾಗಿದೆ. ನಿಜಕ್ಕೂ ಪ್ರತಾಪ್ ಸಿಂಹ ಅವರು 10 ವರ್ಷ ಸಂಸದರಾಗಿ ಒಳ್ಳೆಯ ಕೆಲಸವನ್ನೇ ಮಾಡಿದ್ದಾರೆ. ಕಾರ್ಯಕರ್ತರ ಸಂಘಟನೆ, ಪಕ್ಷದ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ಮೊನ್ನೆಯಷ್ಟೇ 4 ಸಾವಿರ ಕೋಟಿ ಅನುದಾನದಲ್ಲಿ ಮೈಸೂರು ಭಾಗದ ಹೆದ್ದಾರಿಗಳ ಅಭಿವೃದ್ಧಿ ಯೋಜನೆಗೆ ಚಾಲನೆ ಸಿಕ್ಕಿದೆ. ಇದರ ನಡುವೆ ಇವರಿಗೆ ಟಿಕೆಟ್ ಕೈತಪ್ಪಬಹುದು ಎಂಬ ಚರ್ಚೆಯಾಗುತ್ತಿದೆ. ಈ ರೀತಿಯ ಗೊಂದಲ ಬೇಡ ಎಂದು ಹೇಳಿದರು.

ಹಗುರವಾಗಿ ಮಾತನಾಡಬೇಡಿ: ಮೈಸೂರಿನ ಮಹಾರಾಜರು ಕೂಡ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಮಹಾರಾಜರ ಕುಟುಂಬದವರ ಬಗ್ಗೆ ಹಗುರವಾಗಿ ಮಾತನಾಡದಂತೆ ಪಕ್ಷದ ನಮ್ಮ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸೂಚನೆ ನೀಡುತ್ತೇನೆ. ಹಾಗೆಯೇ ಸಾರ್ವಜನಿಕರಲ್ಲೂ ಮನವಿ ಮಾಡುತ್ತೇನೆ. ಟಿಕೆಟ್ ವಿಚಾರವಾಗಿ ನಮ್ಮ ಪಕ್ಷದವರು ರಾಜ್ಯ ನಾಯಕರ ಬಗ್ಗೆ ಮಾತನಾಡಬಾರದು ಎಂದು ಸೂಚನೆ ನೀಡಿದರು.



ಸುದ್ದಿಗೋಷ್ಠಿ ನಂತರ ಭೇಟಿ ನೀಡಿದ ಮಾಜಿ ಸಚಿವ ಅಶ್ವಥ್ ನಾರಾಯಣ್, ಕಾಲಿಗೆ ಪೆಟ್ಟಾಗಿರುವ ಎಲ್.ನಾಗೇಂದ್ರ ಅವರ ಆರೋಗ್ಯ ವಿಚಾರಿಸಿದರು. ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಸ್.ಎ.ರಾಮದಾಸ್, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಖಂಡರಾದ ಸಂದೇಶ್ ಸ್ವಾಮಿ, ಕೇಬಲ್ ಮಹೇಶ್, ಬಿ.ಎಂ.ರಘು, ಗಿರಿಧರ್, ಮೋಹನ್, ಅರುಣ್‌ಕುಮಾರ್ ಗೌಡ, ಹೇಮಂತ್‌ಕುಮಾರ್ ಗೌಡ, ರಾಕೇಶ್ ಭಟ್ ಚಿತ್ರದಲ್ಲಿದ್ದಾರೆ.

ಪಕ್ಷದ ನಿರ್ಧಾರಕ್ಕೆ ಬದ್ಧ: ನಾನು ಮೂರು ಬಾರಿ ಕಾರ್ಪೊರೇಟರ್, ಮುಡಾ ಅಧ್ಯಕ್ಷ, ಶಾಸಕನಾಗಿ ಕೆಲಸ ಮಾಡಿದೆ. ಕಳೆದ ಚುನಾವಣೆಯಲ್ಲಿ ಸೋತೆ. ಹತ್ತು ವರ್ಷದ ಹಿಂದೆ ಮೈಸೂರಿನ ಟಿಕೆಟ್ ಕೇಳಿದ್ದ ವಿಜಯ್‌ಶಂಕರ್ ಪಕ್ಷದ ಸೂಚನೆಯಂತೆ ಹಾಸನದಲ್ಲಿ ಸ್ಪರ್ಧಿಸಿದರು. ಇಲ್ಲಿ ಪ್ರತಾಪ್ ಸಿಂಹ ಅವರನ್ನು ಗೆಲ್ಲಿಸಿದೆವು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಟಿಕೆಟ್ ಇಲ್ಲ ಎಂದಾಗ ರಾಮದಾಸ್ ಅವರು ಒಪ್ಪಿಕೊಂಡು, ಶ್ರೀವತ್ಸ ಅವರ ಪರ ಕೆಲಸ ಮಾಡಿದರು. ಇದು ನಮ್ಮ ಪಕ್ಷದ ಸಿದ್ಧಾಂತ. ಇದಕ್ಕೆ ನಾವು ಬದ್ಧರಾಗಿರಲೇಬೇಕು. ಪ್ರತಾಪ್ ಸಿಂಹ, ಯದುವೀರ್ ಒಡೆಯರ್ ಅಥವಾ ಬೇರೆ ಯಾರಿಗೇ ಟಿಕೆಟ್ ನೀಡಿದರೂ ಪಕ್ಷದ ನಿರ್ಧಾರಕ್ಕೆ ಬದ್ಧರಾಗಿ ಅಭ್ಯರ್ಥಿ ಗೆಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಸ್ಪಷ್ಟನೆ ನೀಡಿದರು.

ನಾಲ್ಕೈದು ಆಕಾಂಕ್ಷಿಗಳಿದ್ದಾರೆ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈಶ್ವರಪ್ಪನವರು 50 ನಿಮಿಷದಲ್ಲಿ 100–150 ಜನರ ಅಭಿಪ್ರಾಯ ಸಂಗ್ರಹಿಸಿದರು. ನಗರಾಧ್ಯಕ್ಷನಾಗಿ ನಾನು ಅಭಿಪ್ರಾಯ ತಿಳಿಸಿದೆ. ನಮ್ಮ ಪಕ್ಷದಲ್ಲೂ ಸಾಕಷ್ಟು ಆಕಾಂಕ್ಷಿಗಳಿದ್ದಾರೆ. ಹಾಗೆಯೇ ನಮಗೆ ಡಾ.ಮಂಜುನಾಥ್ ಅವರು ಅರ್ಜಿ ನೀಡಿದ್ದು, ಅಪ್ಪಚ್ಚು ರಂಜನ್ ಸೇರಿದಂತೆ ಮೂರ್ನಾಲ್ಕು ಮಂದಿ ಸ್ಪರ್ಧಾಕಾಂಕ್ಷೆ ವ್ಯಕ್ತಪಡಿಸಿದ್ದನ್ನೂ ಅವರ ಗಮನಕ್ಕೆ ತಂದಿದ್ದೆ. ಎಲ್ಲರ ಅಭಿಪ್ರಾಯವನ್ನು ರಾಜ್ಯ ನಾಯಕರ ಮೂಲಕ ಕೇಂದ್ರ ನಾಯಕರಿಗೆ ಕಳುಹಿಸಿ ಕೊಟ್ಟಿದ್ದಾರೆ. ಆದರೆ ಅಭ್ಯರ್ಥಿ ಬದಲಿಸಬೇಕೆಂಬ ಪ್ರಯತ್ನವನ್ನು ಯಾರೂ ನಡೆಸಿಲ್ಲ. ಈ ಬಗ್ಗೆ ಪಕ್ಷದಿಂದಲೂ ಯಾವುದೇ ಸೂಚನೆ ಇಲ್ಲ. ಮೈಸೂರು ನಗರದ ಯಾವ ನಾಯಕರಿಗೂ ಯದುವೀರ್ ಒಡೆಯರ್ ವಿಚಾರ ಗೊತ್ತಿಲ್ಲ, ಅವರನ್ನು ಭೇಟಿ ಮಾಡಿಲ್ಲ ಎಂದು ತಿಳಿಸಿದರು.

ನನ್ನ ನಡವಳಿಕೆ ಸರಿಯಿದೆ: ವಿಧಾನಸಭಾ ಚುನಾವಣೆಯಲ್ಲಿ ನಿಮ್ಮ ಸೋಲಿಗೆ ವೈಯುಕ್ತಿಕ ನಡವಳಿಕೆಗಳು ಕಾರಣ ಎಂದು ಪ್ರತಾಪ್ ಸಿಂಹ ಹೇಳಿದ್ದಾರೆಂಬುದಕ್ಕೆ ಪ್ರತಿಕ್ರಿಯಿಸಿ, ನಾನು ಸೋತಿರಬಹುದು, ಆದರೆ ನನ್ನ ನಡವಳಿಕೆಯಿಂದ ಪಕ್ಷಕ್ಕೆ ಯಾವುದೇ ಮುಜುಗರವಾಗಿಲ್ಲ. ಪಕ್ಷಕ್ಕೆ ಹಿನ್ನಡೆಯಾಗಿಲ್ಲ ಹಿಂದಿನ ಚುನಾವಣೆಗಿಂತ 18 ಸಾವಿರಕ್ಕೂ ಹೆಚ್ಚು ಮತ ನೀಡಿದ್ದಾರೆ. ನನ್ನ ನಡವಳಿಕೆ ಸರಿ ಇದೆ. ಇಲ್ಲವಾಗಿದ್ದರೆ ನಗರಾಧ್ಯಕ್ಷ ಜವಾಬ್ದಾರಿ ನೀಡುತ್ತಿರಲಿಲ್ಲ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಖಂಡರಾದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕೇಬಲ್ ಮಹೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

> “ಯದುವೀರ್ ಒಡೆಯರ್ ಮಾತ್ರವಲ್ಲ ಯಾರೇ ಬಂದರೂ ನಮ್ಮ ಪಕ್ಷ ಬೆಂಬಲ ನೀಡುತ್ತದೆ. ಆದರೆ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನಿರಾಕರಣೆ ಆಗಿಲ್ಲ. ಅವರಿಗೆ ಟಿಕೆಟ್ ಸಿಗಬಹುದೆಂಬ ವಿಶ್ವಾಸ ಈಗಲೂ ಇದೆ. ಹಾಗಾಗಿ ಹತಾಷೆಯಿಂದ ಸಾಮಾಜಿಕ ಮಾಧ್ಯಮದಲ್ಲಿ ಭಾವನಾತ್ಮಕವಾಗಿ ಮಾತನಾಡುವುದು ಬೇಡ. ಇದರಿಂದ ಪಕ್ಷಕ್ಕೆ ಹೊಡೆತ ಎನ್ನುವುದಕ್ಕಿಂತ ನಿಮ್ಮ ಪರ ಕೆಲಸ ಮಾಡಿದ ಕಾರ್ಯಕರ್ತರು, ಹಾಗೂ ನಂಬಿರುವ ಮತದಾರರಿಗೆ ಮುಜುಗರವಾಗುತ್ತದೆ. ಪ್ರತಾಪ್ ಸಿಂಹ ನಮ್ಮ ಓರ್ವ ನಾಯಕರು. 10 ವರ್ಷ ಸಂಸದರಾಗಿ ಕೆಲಸ ಮಾಡಿ, ಹಲವು ಯೋಜನೆಗಳನ್ನು ತಂದಿದ್ದಾರೆ. ವಿಚಲಿತರಾಗಬೇಡಿ, ಆತಂಕಕ್ಕೆ ಒಳಗಾಗಬೇಡಿ. ನಿಮಗೇ ಟಿಕೆಟ್ ಸಿಗಬಹುದು. ಆಕಸ್ಮಾತ್ ಬೇರೆಯವರಿಗೆ ಸಿಕ್ಕಿದರೂ ನೀವು ನಮ್ಮೊಟ್ಟಿಗೆ ಕೆಲಸ ಮಾಡಿ ಎಂದು ಮನವಿ ಮಾಡುತ್ತೇವೆ.
> – ಟಿ.ಎಸ್.ಶ್ರೀವತ್ಸ, ಶಾಸಕರು

ಯಾರೇ ಆದರೂ ಪಕ್ಷಕ್ಕೆ ತ್ಯಾಗ ಮಾಡಬೇಕು...

ಕಳೆದ ವಿಧಾನಸಭಾ ಚುನಾವಣಾ ಟಿಕೆಟ್ ವಂಚಿತ ಮಾಜಿ ಸಚಿವ ಎಸ್.ಎ.ರಾಮದಾಸ್ ಕಾರ್ಯಕರ್ತರು, ಮುಖಂಡರಿಗೆ ಪರೋಕ್ಷ ಕಿವಿಮಾತು

ಮೈಸೂರು, ಮಾ.12(ಎಸ್‌ಬಿಡಿ)–ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಕೈತಪ್ಪಿದ ಸಂದರ್ಭವನ್ನು ಸ್ಮರಿಸಿಕೊಳ್ಳುವ ಮೂಲಕ ಮಾಜಿ ಶಾಸಕ ಎಸ್.ಎ.ರಾಮದಾಸ್, ಯಾರೇ ಆದರೂ ಪಕ್ಷಕ್ಕಾಗಿ ಇಂತಹ ತ್ಯಾಗಕ್ಕೆ ಸಿದ್ಧರಾಗಿರಬೇಕು ಎಂದು ಪರೋಕ್ಷವಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾಲ್ಕು ಬಾರಿ ಶಾಸಕನಾಗಿ ಕೆಲಸ ಮಾಡಿಯೂ ಕಳೆದ ಬಾರಿ ನಿಮಗೆ ಟಿಕೆಟ್ ನೀಡಲ್ಲ, ಯಾರಿಗೆ ಕೊಡಬೇಕು ಹೇಳಿ ಎಂದಾಗ ಪಕ್ಷದ ನಗರಾಧ್ಯಕ್ಷರಾಗಿ, ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡಿರುವ ಶ್ರೀವತ್ಸ ಅವರಿಗೆ ಕೊಡಿ, ಗೆಲ್ಲಿಸಿಕೊಂಡು ಬರುತ್ತೇನೆ ಎಂದು ಹೇಳಿದೆ. ಸಂಸದರು ಹಾಗೂ ರಾಷ್ಟ್ರೀಯ ನಾಯಕರು ನಮ್ಮ ಮನೆಗೆ ಬಂದಿದ್ದಾಗ ಕಾರ್ಯಕರ್ತರ ಮನವೊಲಿಸಲು ಎರಡು ದಿನ ಸಮಯ ಕೇಳಿದ್ದೆ. ಅದರಂತೆ ಕಾರ್ಯಕರ್ತರೊಂದಿಗೆ ಮಾತನಾಡಿ ನಮ್ಮ ಮನೆಯಲ್ಲೇ ಸುದ್ದಿಗೋಷ್ಠಿ ನಡೆಸಿದ್ದಾಗಿ ಸ್ಮರಿಸಿಕೊಂಡರು.

ಆಗ ಸ್ವತಃ ಪ್ರತಾಪ್ ಸಿಂಹ ಅವರೂ ಅಲ್ಲಿಗೆ ಬಂದು ಬಿಜೆಪಿ ನಿಂತಿರುವುದೇ ನಿಷ್ಠಾವಂತ ಕಾರ್ಯಕರ್ತರಿಂದ. ಪಕ್ಷಕ್ಕೆ ತಾಯಿಯ ಸ್ಥಾನ ನೀಡಿರುವ ರಾಮದಾಸ್ ಅವರು ಇಲ್ಲಿಯೇ ಉಳಿದುಕೊಂಡು ಪಕ್ಷದ ಸೂಚನೆ ಪಾಲಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದರು. ಆ ಬಗ್ಗೆ ನನಗೆ ತುಂಬಾ ಗೌರವವಿದೆ. ಆದರೆ ಪ್ರಸ್ತುತ ಲೋಕಸಭಾ ಚುನಾವಣೆ ಅಭ್ಯರ್ಥಿ ಯಾರೆಂದು ನಿರ್ಣಯಿಸಿಲ್ಲ. ಚುನಾವಣಾ ಸಂಸದೀಯ ಮಂಡಳಿ ಸಭೆಯಲ್ಲಿ ತೀರ್ಮಾನವಾಗಬೇಕಿದೆ. ಈ ಸಂದರ್ಭದಲ್ಲಿ ಅನಾವಶ್ಯಕವಾದ ಚರ್ಚೆಗಳು ಶುರುವಾಗಿರುವುದರಿಂದ ಟಿಕೆಟ್ ಇನ್ನೂ ನಿರ್ಧಾರವಾಗಿಲ್ಲ, ನಾವೆಲ್ಲಾ ಪಕ್ಷದ ಪರವಾಗಿದ್ದೇವೆ ಎಂದು ತಿಳಿಸುವುದು ಇಂದಿನ ಸುದ್ದಿಗೋಷ್ಠಿಯ ಏಕೈಕ ಉದ್ದೇಶ ಎಂದರು. ಈ ಬೆಳವಣಿಗೆಗೆ ರಾಮದಾಸ್ ಕೂಡ ಕಾರಣ ಎಂಬ ಕೆಲವರ ಆರೋಪಕ್ಕೆ ಪ್ರತಿಕ್ರಿಯಿಸಿ, ಯಾರು ಈ ರೀತಿ ಚರ್ಚೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಾಪ್ ಸಿಂಹ ಅವರೇ ನನ್ನನ್ನು ಹೊಗಳಿದ್ದರು. ಆ ಬಗ್ಗೆ ಈಗಲೂ ಗೌರವವಿದೆ. ಪಕ್ಷಕ್ಕಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧ ಎನ್ನುವುದಕ್ಕೆ ರಾಮದಾಸ್ ಉದಾಹರಣೆ ಎಂದಿದ್ದರು. ಈಗಲೂ ನಾನು ಉದಾಹರಣೆಯಾಗಿದ್ದೇನೆ. ಜೀವನದಲ್ಲಿ ಎದುರಾದ ಪರೀಕ್ಷೆಯಲ್ಲಿ ನಾನು ಯಶಸ್ವಿಯಾಗಿದ್ದೇನೆ ಎಂಬ ತೃಪ್ತಿ ನನಗಿದೆ. ಟಿಕೆಟ್ ಬಿಟ್ಟುಕೊಟ್ಟ ನಂತರದಲ್ಲೂ ರಾಜ್ಯಾದ್ಯಂತ ವಿವಿಧ ಯೋಜನೆಗಳ ಜವಾಬ್ದಾರಿ ನಿರ್ವಹಿಸುತ್ತಿದ್ದೇನೆ. ನಾನು ತ್ಯಾಗ ಮಾಡಿದ್ದೇನೆ ಎಂದು ಬೇರೆಯವರಿಗೆ ಪಾಠ ಮಾಡುವುದಿಲ್ಲ. ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನೀಡಿದರೂ ಕಳೆದ ಬಾರಿಗಿಂತ ಹೆಚ್ಚಿನ ಮತದಿಂದ ಗೆಲ್ಲಿಸುವ ಪ್ರಯತ್ನ ಮಾಡುತ್ತೇವೆ. 2014ರಲ್ಲಿ ಪಕ್ಷಕ್ಕಾಗಿ ಎಲ್ಲರೂ ವೈಯಕ್ತಿಕವಾಗಿ ಖರ್ಚು ಮಾಡಿಕೊಂಡು ಕೆಲಸ ಮಾಡಿದ್ದೇವೆ. ಈಗ ಅವರು ನಮ್ಮ ಲೀಡರ್, ಅದೇ ರೀತಿಯ ಗೌರವ ಕೊಡುತ್ತಿದ್ದೇವೆ ಎಂದು ಹೇಳಿದರು.

ರಾಜವಂಶಸ್ಥರ ಗೌರವಿಸಬೇಕು: ದೇಶದ ಪ್ರಧಾನಿ ಮೈಸೂರು ಮಹಾರಾಜರ ಕೊಡುಗೆಯನ್ನು ಸ್ಮರಿಸಿಕೊಂಡು ದೇಶಕ್ಕೆ ಮಾದರಿ ಎಂದು ಬಣ್ಣಿಸಿದರು. ಮೈಸೂರು ಭಾಗದ ಜನ ಮಹಾರಾಜರಿಗೆ ಋಣಿಯಾಗಿರಬೇಕು. ದೂರದೃಷ್ಟಿಯಿಂದ ಸಿಎಫ್‌ಟಿಆರ್‌ಐ, ಡಿಎಫ್‌ಆರ್‌ಎಲ್, ವಾಕ್ ಶ್ರವಣ ಸಂಸ್ಥೆ, ಮೊದಲಿಗೆ ಮೀಸಲಾತಿ, ಸಾಮಾಜಿಕ ಭದ್ರತೆ ಚಿಂತನೆ, ವಿಮಾನ ನಿಲ್ದಾಣ, ರೈಲು ನಿಲ್ದಾಣ, ವಿದ್ಯುತ್ ಸಂಪರ್ಕ ಸೇರಿದಂತೆ ಹಲವು ಕೊಡುಗೆ ನೀಡಿದ್ದಾರೆ. ಮಹಾರಾಜರನ್ನು ಗೌರವಿಸುವುದು ನಮ್ಮೆಲ್ಲರ ಜವಬ್ದಾರಿ. ಸಣ್ಣ ವಿಚಾರಗಳನ್ನು ಮಾತನಾಡುವುದು ಒಳ್ಳೆಯದಲ್ಲ ಎಂದರು. ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ, ರಾಜವಂಶಸ್ಥರನ್ನು ರಾಜಕೀಯಕ್ಕೆ ಆಹ್ವಾನಿಸುವಾಗ ಕೇಂದ್ರ ನಾಯಕರು ಎಲ್ಲವನ್ನೂ ಯೋಚನೆ ಮಾಡುತ್ತಾರೆ. ಸಾರ್ವಜನಿಕ ಜೀವನಕ್ಕೆ ಬರುವಾಗ ಅವರೂ ಚಿಂತನೆ ಮಾಡುತ್ತಾರೆ. ಮಧ್ಯಪ್ರದೇಶದಲ್ಲಿ ರಾಜಮನೆತನದವರು ರಾಜಕೀಯಕ್ಕೆ ಬಂದಾಗಲೂ ಚರ್ಚೆಯಾಗಿತ್ತು. ಹಾಗಾಗಿ ಈ ಬಗ್ಗೆ ಇಷ್ಟು ಬೇಗ ಚರ್ಚೆ ಬೇಡ ಎಂದು ಹೇಳಿದರು.

ಅಹಂಕಾರವು ಮಹಿಳೆಗೆ ಅಲಂಕಾರವಾಗಬಾರದು

ಮಹಿಳಾ ಉದ್ಯಮಿ ಶ್ರೀಮತಿ ರಚನಾ ಮಹೇಶ್ ಅಭಿಮತ



ಮೈಸೂರು, ಮಾ. 12– ಸಮಯ ಮತ್ತು ಸಂದರ್ಭದ ಪ್ರಜ್ಞೆ ಮಹಿಳೆಯರಿಗೆ ಸದಾ ಇರಬೇಕು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಪುರುಷರ ಪ್ರೇರಣೆಯಿಂದಲೇ ಹಲವಾರು ಉತ್ತಮ ಕೆಲಸಗಳನ್ನು ನಿರ್ವಹಿಸಿ ತಮ್ಮದೇ ಆದ ಸ್ಥಾನಕ್ಕೇರಲು ಪರಿಶ್ರಮ ಪಟ್ಟು ಗಮ್ಯ ಸ್ಥಾನಕ್ಕೆ ತಲುಪುತ್ತಿದ್ದಾರೆ ಎಂದು ಖ್ಯಾತ ಮಹಿಳಾ ಉದ್ಯಮಿ ಶ್ರೀಮತಿ ರಚನಾ ಮಹೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾನ ಅವಕಾಶಗಳ ಕೋಶ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಐಕ್ಯೂಎಸಿ ಘಟಕಗಳು ಜಂಟಿಯಾಗಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು. ಮಹಿಳೆಯರು ತಮ್ಮ ಸಂಕಷ್ಟಗಳ ನಡುವೆಯೂ ತಮ್ಮ ಪ್ರತಿಭೆಯ ಮೂಲಕ ಯಶಸ್ಸಿಗೆ ಶ್ರಮಿಸಬೇಕು. ಆಡುಮುಟ್ಟದ ಸೊಪ್ಪಿಲ್ಲ ಎನ್ನುವ ವ್ಯಾಖ್ಯೆಗೆ ಯುಕ್ತವಾಗುವಂತೆ ಇಂದು ಎಲ್ಲಾ ರಂಗಗಳಲ್ಲೂ ಪುರುಷರಿಗೆ ಸರಿ ಸಮಾನವಾಗಿ ಸ್ಪರ್ಧೆಯನ್ನು ನೀಡುತ್ತಾ ಯಶಸ್ಸಿನ ದಾರಿಯತ್ತಾ ಸಾಗುತ್ತಿದ್ದಾರೆ ಎಂದರು. ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥೆ ಡಾ.ಎಸ್.ಪೂರ್ಣಿಮ ಮಾತನಾಡುತ್ತಾ, ಮಹಿಳಾ ಉದ್ಯೋಗಿಗಳು ಇಂದು ವೃತ್ತಿ ಹಾಗೂ ವೈಯಕ್ತಿಕ ಬದುಕಿನಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವುದು ತುಂಬಾ ಅವಶ್ಯಕವಾಗಿದೆ ಎಂದರು. ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ಕಂಪನಿ ಕಾಯಿದೆ 2015ರ ಪ್ರಕಾರ ಪ್ರತಿಯೊಂದು ಸಂಸ್ಥೆಯಲ್ಲಿಯೂ ಮಹಿಳೆಯರಿಗೆ ಅವಕಾಶ ನೀಡಬೇಕು. ಮಹಿಳೆಯರು ಶಿಕ್ಷಣ, ಬ್ಯಾಂಕಿಂಗ್, ಹಣಕಾಸು, ಆರೋಗ್ಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದರು.

ವಾಗ್ದಾನ ಈಡೇರಿಸಿದ ತೃಪ್ತಿ ನಮ್ಮ ಸರ್ಕಾರಕ್ಕಿದೆ



ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಉದ್ಘಾಟಿಸಿದರು.

ಮಳವಳ್ಳಿ, ಮಾ.12– ಕೇಂದ್ರ ಸರ್ಕಾರದ ಜನ ವಿರೋಧಿ ನೀತಿ ಹಾಗೂ ಬೆಲೆ ಏರಿಕೆಯಿಂದ ನರಳುತ್ತಿರುವ ಜನಸಾಮಾನ್ಯರನ್ನು ರಕ್ಷಿಸಲು ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವ ನೀಡಿರುವ ಗ್ಯಾರಂಟಿಗಳನ್ನು ಸಕಾಲದಲ್ಲಿ ಈಡೇರಿಸಿರುವ ತೃಪ್ತಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕಿದೆ ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಮಂಗಳವಾರ ಪಟ್ಟಣದ ಟಿಎಪಿಸಿಎಂಎಸ್ ಬಳಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಂಚ ಗ್ಯಾರಂಟಿಗಳ ಅನುಷ್ಠಾನದಿಂದ ಜನ ಸಾಮಾನ್ಯರಿಗೆ ಸಾಕಷ್ಟು ಅನುಕೂಲವಾಗಿದೆ. ಶಕ್ತಿ ಯೋಜನೆಯಡಿ ರಾಜ್ಯದಲ್ಲಿ 171 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದು, ಇದಕ್ಕಾಗಿ 4160 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ, ಗೃಹಲಕ್ಷ್ಮಿ ಯೋಜನೆಯಡಿ 1.21 ಕೋಟಿ ಮಹಿಳೆಯರಿಗೆ ಮಾಸಿಕ 2 ಸಾವಿರ ರೂ. 2420 ಕೋಟಿ ರೂಗಳನ್ನು ಪಾವತಿಸಲಾಗಿದ್ದು, ಗೃಹಜ್ಯೋತಿ ಯೋಜನೆಯಡಿ 1.67 ಕೋಟಿ ನಿವಾಸಿಗಳಿಗೆ ಉಚಿತ ವಿದ್ಯುತ್ ನೀಡಲು 880 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದರು.

ಕಾಂಗ್ರೆಸ್ ಎಂಪಿ ಅಭ್ಯರ್ಥಿ ಸ್ಟಾರ್ ಚಂದ್ರು ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಒಮ್ಮತದ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಜಿಲ್ಲೆಯ ಸಚಿವ ಹಾಗೂ ಶಾಸಕರುಗಳ ಬೆಂಬಲದಿಂದ ನನ್ನನ್ನು ಲೋಕಸಭೆಗೆ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೇವಲ 19 ಶಾಸಕ ಸ್ಥಾನಗಳಲ್ಲಿ ಗೆಲುವು ಕಂಡಿರುವ ಜೆಡಿಎಸ್ ಪಕ್ಷ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಶೂನ್ಯ ಗೆಲುವಿನ ಆತಂಕದಿಂದ ಕೋಮುವಾದಿ ಬಿಜೆಪಿ ಪಕ್ಷದ ಜೊತೆ ಮೈತ್ರಿ ರಾಜಕಾರಣಕ್ಕೆ ಮುಂದಾಗಿದೆ. ಅಧಿಕಾರದ ಲಾಲಸೆಗೆ ಬಲಿಯಾಗಿರುವ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಕಪಟ ನಾಟಕವನ್ನು ರಾಜ್ಯದ ಜನ ತಿರಸ್ಕರಿಸಲಿದ್ದು, ಸಿದ್ದರಾಮಯ್ಯ ಅವರ ಗಟ್ಟಿ ನಾಯಕತ್ವದಲ್ಲಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಅವರ ಸವಾಲು ಸ್ವೀಕರಿಸಲು ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿದರು.

ವೇದಿಕೆಯಲ್ಲಿ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜು, ಮುಖಂಡರಾದ ಎಸ್.ಪಿ.ಸತೀಶ್, ಚಿಕ್ಕಲಿಂಗಯ್ಯ, ಜಯಣ್ಣ, ಪ್ರಾಶ್, ಅಂಬರೀಷ್, ಆರ್.ಎನ್.ವಿಶ್ವಾಸ್, ಶ್ರೀನಿವಾಸ್, ಸಿದ್ದೇಗೌಡ, ಪುಟ್ಟಬಸವಯ್ಯ, ಸುಷ್ಮಾರಾಜು, ಸುಜಾತ ಕೆ.ಎಂಪುಟ್ಟು, ದೊಡ್ಡಯ್ಯ, ಮಲ್ಲಯ್ಯ, ಸಿ.ಮಾಧು, ಶಿವಮಾದೇಗೌಡ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಕೆ.ಆರ್.ಪೇಟೆ ಪುರಸಭೆ: 12 ಲಕ್ಷ ರೂ. ಉಳಿತಾಯ ಬಜೆಟ್ ಮಂಡನೆ



ಕೆ.ಆರ್.ಪೇಟೆ ಪಟ್ಟಣದ ಸ್ವರ್ಣಜಯಂತಿ ಶಹರೀ ರೋಜ್ಗಾರ್ ಯೋಜನಾ ಭವನದಲ್ಲಿ ನಡೆದ ಕೆ.ಆರ್.ಪೇಟೆ ಪುರಸಭೆಯ 2024–25ನೇ ಸಾಲಿನ ವಾರ್ಷಿಕ ಬಜೆಟ್ ಅನ್ನು ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಯಿತು.

ಕೆ.ಆರ್.ಪೇಟೆ, ಮಾ.12– ಕೆ.ಆರ್.ಪೇಟೆ ಪುರಸಭೆಯ 2024–25ನೇ ಸಾಲಿನ ವಾರ್ಷಿಕ ಬಜೆಟ್ ಅನ್ನು ಪಟ್ಟಣದ ಸ್ವರ್ಣ ಜಯಂತಿ ಶಹರೀ ರೋಜ್‌ಗಾರ್ ಯೋಜನಾ ಭವನದಲ್ಲಿ ನಡೆದ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಯಿತು.

ಒಟ್ಟು ನಿರೀಕ್ಷಿತ 14,12,36,661 ರೂ ಆದಾಯದಲ್ಲಿ 14,73,564 ರೂ.ಗಳ ಖರ್ಚನ್ನು ಅಂದಾಜಿಸಲಾಗಿದ್ದು, ಕೃಷ್ಣರಾಜಪೇಟೆ ಪಟ್ಟಣದ ಸಮಗ್ರವಾದ ಅಭಿವೃದ್ಧಿಗೆ ಪೂರಕವಾದ 11,63,097 ರೂ.ಗಳ ಉಳಿತಾಯ ಬಜೆಟ್ ಅನ್ನು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಆರ್.ಲೋಕೇಶ್ ಮಂಡಿಸಿದರು.

ಬಜೆಟ್ ಮಂಡನಾ ಸಭೆಯಲ್ಲಿ ಹಾಜರಿದ್ದ ಕೆ.ಆರ್.ಪೇಟೆ ಶಾಸಕ ಹೆಚ್.ಟಿ.ಮಂಜು, ಪುರಸಭೆಯ ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳಾದ ಜೆ.ಬಿ.ಮಾರುತಿ, ಮುಖ್ಯಾಧಿಕಾರಿ ಬಿ.ಜಿ.ಸತೀಶ್ ಹಾಗೂ ಆಡಳಿತ ಮಂಡಳಿಯ ಸದಸ್ಯರು ಪಕ್ಷಾತೀತವಾಗಿ ಬಜೆಟ್ ಅನ್ನು ಸ್ವಾಗತಿಸಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ಕೆ.ಆರ್.ಪೇಟೆ ಪಟ್ಟಣದ ಸಮಗ್ರವಾದ ಅಭಿವೃದ್ಧಿಗೆ ಪೂರಕವಾಗಿ ಸದಸ್ಯರು ಪಕ್ಷಾತೀತವಾಗಿ ಕೆಲಸ ಮಾಡಬೇಕು. ಚುನಾವಣೆಯ ಸಂದರ್ಭ ಬಂದಾಗ ರಾಜಕಾರಣ ಮಾಡೋಣ ಉಳಿದಂತೆ ಪಟ್ಟಣದ ಅಭಿವೃದ್ಧಿಗೆ ನಾವೆಲ್ಲರೂ ಒಂದೆಂಬಂತೆ ಪಕ್ಷಭೇದವಿಲ್ಲದೇ ಎಲ್ಲರೂ ಪಟ್ಟಣದ ಅಭಿವೃದ್ಧಿಗೆ ಪೂರಕವಾದ ಸಲಹೆ ಸೂಚನೆ ನೀಡಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಯಲು ರಂಗಮಂದಿರ ನಿರ್ಮಾಣ ಕಾಮಗಾರಿಗೆ ತಮ್ಮ ಶಾಸಕರ ಅನುದಾನದಲ್ಲಿ 10 ಲಕ್ಷ ರೂ. ವಿಶೇಷ ಅನುದಾನ ನೀಡುವುದಾಗಿ ಪ್ರಕಟಿಸಿದರು.

ಸದಸ್ಯರಾದ ಕೆ.ಸಿ.ಮಂಜುನಾಥ್, ಡಿ.ಪ್ರೇಮಕುಮಾರ್, ಬಸ್ ಸಂತೋಷ್ ಕುಮಾರ್, ಕೆ.ಎಸ್.ಪ್ರಮೋದ್‌ಕುಮಾರ್, ಕೆ.ಬಿ.ಮಹೇಶ್, ಹೆಚ್.ಎನ್.ಪ್ರವೀಣ್ ಮಾತನಾಡಿ, ಪ್ರಸ್ತುತ ಮಂಡಿಸಲಾಗಿರುವ ಬಜೆಟ್ ಸಾಮಾಜಿಕ ಅಸಮಾನತೆಯಿಂದ ಕೂಡಿದೆ. ಪಟ್ಟಣದ ಪಾರ್ಕುಗಳು ಹಾಗೂ ವಿದ್ಯುತ್ ಶವಾಗಾರ ಹಾಗೂ ಸಾರ್ವಜನಿಕ ಸ್ಮಶಾನಗಳ ಅಭಿವೃದ್ಧಿಗೆ ಮೀಸಲಾಗಿಟ್ಟಿರುವ ಅನುದಾನವು ಯಾವುದಕ್ಕೂ ಸಾಲುವುದಿಲ್ಲ. ಪಟ್ಟಣದಲ್ಲಿ ನಡೆಯುತ್ತಿರುವ ಕೋಟಿಗಟ್ಟಲೆ ಹಣದ ಕಾಮಗಾರಿಗಳು ಅವೈಜ್ಞಾನಿಕವಾಗಿದ್ದು, ಕಾಮಗಾರಿಗಳೆಲ್ಲವೂ ಸಂಪೂರ್ಣವಾಗಿ ಕಳಪೆ ಗುಣಮಟ್ಟದಿಂದ ಕೂಡಿವೆ ಎಂದರು.

ಬಸವೇಶ್ವರ ನಗರದಲ್ಲಿ ಹಲವಾರು ದಲಿತರ ಕುಳುವಾಡಿಕೆ ಜಮೀನಿನಲ್ಲಿ ನಿರ್ಮಿಸಿರುವ ಮನೆಗಳು ಹಾಗೂ ವಾಣಿಜ್ಯ ಸಮುಚ್ಛಯಗಳ ನಿರ್ಮಾಣದಲ್ಲಿ ಭಾರೀ ಗೋಲ್‌ಮಾಲ್ ನಡೆದಿದೆ. ಈ ಅವ್ಯವಹಾರವನ್ನು ಲೋಕಾಯುಕ್ತಕ್ಕೆ ಒಪ್ಪಿಸಬೇಕು. ಈ ಬಗ್ಗೆ ನನ್ನ ಹೋರಾಟವು ನಿರಂತರವಾಗಿರುತ್ತದೆ ಎಂದು ಡಿ.ಪ್ರೇಮಕುಮಾರ್ ಗುಡುಗಿದರು.

ಪುರಸಭೆಯ ಮುಖ್ಯಾಧಿಕಾರಿ ಸತೀಶ್ ಸ್ವಾಗತಿಸಿದರೆ, ಕಂದಾಯಾಧಿಕಾರಿ ರವಿಕುಮಾರ್ ವಂದಿಸಿದರು. ಪುರಸಭೆ ಮಾಜಿ ಅಧ್ಯಕ್ಷರು ಹಾಲಿ ಸದಸ್ಯರಾದ ಮಹಾದೇವಿ ನಂಜುಂಡ, ನಟರಾಜ್, ಸದಸ್ಯರಾದ ಇಂದ್ರಾಣಿ ವಿಶ್ವನಾಥ್, ಪದ್ಮಮ್ಮ, ಶುಭಾ ಗಿರೀಶ್, ಖಮ್ಮರ್‌ತಾಜ್, ಕಲ್ಪನಾ ದೇವರಾಜು ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಮೇಲುಕೋಟೆ: ಇಂದು ಪ್ರಥಮ ತೆಪ್ಪೋತ್ಸವ



ಮೇಲುಕೋಟೆ, ಮಾ.12– ಶ್ರೀ ಚೆಲುವ ನಾರಾಯಣಸ್ವಾಮಿಯವರ ವೈರಮುಡಿ ಬ್ರಹ್ಮೋತ್ಸವ ಪೂರ್ವಭಾವಿಯಾಗಿ ಮಾ.13ರ ಬುಧವಾರ ರಾತ್ರಿ 7 ಗಂಟೆಗೆ ಪ್ರಥಮ ತೆಪ್ಪೋತ್ಸವ ಕಲ್ಯಾಣಿಯಲ್ಲಿ ಸಡಗರ ಸಂಭ್ರಮದಿಂದ ನಡೆಯಲಿದೆ.

ಪ್ರಥಮ ತೆಪ್ಪೋತ್ಸವ ಸಂಬಂಧ ಕಲ್ಯಾಣಿ ಸಮುಚ್ಚಯಕ್ಕೆ ಸರಳ ದೀಪಾಲಂಕಾರ ಮಾಡಲಾಗುತ್ತಿದೆ. ಸೆಸ್ಕ್ ಇಂಜಿನಿಯರ್ ಸಲಹೆಯಂತೆ ಮೈಸೂರಿನ ಹನಿ ಎಲೆಕ್ಟ್ರಿಕಲ್ ಇಡೀ ಮೇಲುಕೋಟೆಗೆ ದೀಪಾಲಂಕಾರ ಮಾಡುತ್ತಿದೆ. ತೆಪ್ಪೋತ್ಸವದಂದು ಪಾಂಡವಪುರ ಖಜಾನೆಯಿಂದ ತಂದ ಅಮೂಲ್ಯ ಮುತ್ತಮುಡಿಯೊಂದಿಗೆ ಅಲಂಕೃತನಾದ ಶ್ರೀ ಚೆಲುವ ನಾರಾಯಣಸ್ವಾಮಿಯ ಭವ್ಯ ಉತ್ಸವ ಕಲ್ಯಾಣಿಗೆ ತಲುಪಲಿದೆ.

ಪ್ರಥಮ ತೆಪ್ಪೋತ್ಸವ ಶ್ರೀದೇವಿ ಭೂದೇವಿ ಆಚಾರ್ಯ ರಾಮಾನುಜರ ಸಮೇತನಾಗಿ ಸ್ವಾಮಿಗೆ ನಡೆಯಲಿದ್ದು, ಆರಂಭದಲ್ಲಿ ಮಹೂರ್ತಪಠಣದ ನಂತರ ತೆಪ್ಪೋತ್ಸವಕ್ಕೆ ಚಾಲನೆ ಸಿಗಲಿದೆ. ಕಲ್ಯಾಣಿಯಲ್ಲಿ ಮೂರು ಪ್ರದಕ್ಷಿಣೆಯೊಂದಿಗೆ ಪ್ರಥಮ ತೆಪ್ಪೋತ್ಸವ ಮುಕ್ತಾಯವಾಗಲಿದೆ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್ ಮಾಹಿತಿ ನೀಡಿದ್ದಾರೆ.

ಇಂದಿನಿಂದ ನೀರು ಸರಬರಾಜು ವ್ಯತ್ಯಯ

ಮಂಡ್ಯ, ಮಾ.12– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆ ಅಡಿ ಮಂಡ್ಯ ನಗರದ ನಗರಸಭೆ ಕಚೇರಿ ಪಕ್ಕದಲ್ಲಿರುವ ಸಿಟಿ ಕ್ಲಬ್ ಎದುರು ಅಳವಡಿಸಿರುವ 700 ಮಿ. ಮೀ. ವ್ಯಾಸದ ಎಂ.ಎಸ್. ನೀರು ಸರಬರಾಜು ಕೊಳವೆ ಮಾರ್ಗದಲ್ಲಿ ಗಣನೀಯ ಪ್ರಮಾಣದಲ್ಲಿ ನೀರು ಸೋರುವಿಕೆ ಕಂಡುಬಂದಿದ್ದು, ಸದರಿ ಕೊಳವೆ ಮಾರ್ಗದ ದುರಸ್ತಿ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮಂಡ್ಯ ನಗರದಲ್ಲಿ ಮಾ.13 ಮತ್ತು 14ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.



ಭಾರತೀನಗರ ಸಮೀಪದ ಹನುಮಂತನಗರದ ಶ್ರೀ ಆತ್ಮಲಿಂಗೇಶ್ವರ ಕ್ಷೇತ್ರದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ 2ನೇ ವರ್ಷದ ತೆಪ್ಪೋತ್ಸವ ಹಾಗೂ ಊಯಾಲೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

ವಿ.ಸಿ.ನಾಲೆಯಲ್ಲಿ ಮತ್ತೊಂದು ದುರಂತ

ನಾಲೆಗೆ ಕಾರು ಬಿದ್ದು ಓರ್ವ ಸಾವು, ಮತ್ತೋರ್ವ ಗಂಭೀರ

ಮಂಡ್ಯ, ಮಾ.12– ಕಾರೊಂದು ವಿ.ಸಿ.ನಾಲೆಗೆ ಬಿದ್ದು ಓರ್ವ ಸಾವನ್ನಪ್ಪಿ, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಪಾಂಡವಪುರ ತಾಲೂಕಿನ ಅಮ್ವೇರಹಳ್ಳಿ ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದೆ.

ಘಟನೆಯಲ್ಲಿ ಪಾಂಡವಪುರ ತಾಲೂಕಿನ ಬ್ಯಾಡರಹಳ್ಳಿ ಗ್ರಾಮದ ನಂದೀಶ್ (18) ಮೃತಪಟ್ಟಿದ್ದು, ಮತ್ತೋರ್ವ ಯುವಕ ಯೋಗಾನಂದ ಗಂಭೀರವಾಗಿ ಗಾಯಗೊಂಡಿದ್ದಾನೆ. ಮೂರ್‍ನಾಲ್ಕು ತಿಂಗಳಿನಿಂದ ನೀರಿಲ್ಲದೇ ನಾಲೆಗಳು ಒಣಗಿದ್ದು, ಜೊತೆಗೆ ತಡೆಗೋಡೆ ನಿರ್ಮಾಣವಾಗದ ಪರಿಣಾಮ ನಾಲೆ ದುರಂತಗಳು ಸಂಭವಿಸುತ್ತಿವೆ.

ಅಣ್ಣತಮ್ಮಂದಿರಾದ ನಂದೀಶ್ ಮತ್ತು ಯೋಗಾನಂದ ಕಾರ್ಯನಿಮಿತ್ತ ಪಾಂಡವಪುರದ ಕಡೆಗೆ ತೆರಳುವಾಗ ಆಯತಪ್ಪಿ ಅಮ್ವೇರಹಳ್ಳಿ ಬಳಿ ನಾಲೆಗೆ ಕಾರು ಉರುಳಿ ಬಿದ್ದಿದ್ದು, ನೀರಿಲ್ಲದ ಪರಿಣಾಮ ಸ್ವಿಫ್ಟ್ ಕಾರು ನಜ್ಜುಗುಜ್ಜಾಗಿ ನಂದೀಶ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಗಂಭೀರವಾಗಿ ಗಾಯಗೊಂಡ ಯೋಗಾನಂದನನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಚಿಕ್ಕಬಳ್ಳಾಪುರದ ಸದ್ಗುರು ಸನ್ನಿಧಿಯಲ್ಲಿ ಮಹಾಶಿವರಾತ್ರಿ ಸಂಭ್ರಮ

4 ಲಕ್ಷಕ್ಕೂ ಅಧಿಕ ಮಂದಿ ಭಾಗಿ



ಮೈಸೂರು, ಮಾ.12(ಪಿಎಂ)– ಚಿಕ್ಕಬಳ್ಳಾಪುರದ ಸದ್ಗುರು ಸನ್ನಿಧಿಯಲ್ಲಿ ನಡೆದ ಇಶಾ ಮಹಾಶಿವರಾತ್ರಿ ಆಚರಣೆಗೆ ಅಭೂತಪೂರ್ವ ಸ್ಪಂದನೆ ದೊರೆತಿದ್ದು, ಮಾ.8ರಿಂದ 10ರವರೆಗೆ 4 ಲಕ್ಷಕ್ಕೂ ಹೆಚ್ಚು ಜನರು ಸನ್ನಿಧಿಗೆ ಭೇಟಿ ನೀಡಿದ್ದರು.

ಶಿವರಾತ್ರಿ ಆಚರಣೆ ದಿನವಾದ ಮಾ.8ರ ಬೆಳಗ್ಗೆ 8 ಗಂಟೆಯಿಂದ ಮಾ.9ರ ಬೆಳಗ್ಗೆ 8 ಗಂಟೆವರೆಗೆ ಸುಮಾರು ಎರಡೂವರೆ ಲಕ್ಷ ಜನರು ಆಗಮಿಸಿದ್ದರು. ಶಿವರಾತ್ರಿ ಮಾರನೇ ದಿನವಾದ ಮಾ.9ರಂದು ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡಿದ್ದರೆ, ಮಾ.10ರಂದು ಇನ್ನುಳಿದ ಜನಸಮೂಹ ಭೇಟಿ ನೀಡಿತ್ತು.

ಸದ್ಗುರು ಸನ್ನಿಧಿಗೆ ಜನಸಾಗರ ಹರಿದು ಬಂದಿದ್ದರೂ ಆಚರಣೆಗೆ ಸಂಬಂಧಿಸಿದ ಎಲ್ಲಾ ವ್ಯವಸ್ಥೆ ಸುಸೂತ್ರವಾಗಿದ್ದವು. ಜೊತೆಗೆ ಸ್ಥಳೀಯ ಆಡಳಿತ ಬೆಂಬಲವೂ ದೊರೆಯಿತು. ಸುಮಾರು 200 ಪೊಲೀಸರ ಪಡೆ, 200 ಹೋಮ್ ಗಾರ್ಡ್ಸ್ ಪಡೆ, 170 ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ, ಕರ್ನಾಟಕ ರಾಜ್ಯ ಹೆಚ್ಚುವರಿ ಪೊಲೀಸ್ ಪಡೆಯ ಸಿಬ್ಬಂದಿ ಮತ್ತು ಅನೇಕ ಇಶಾ ಸ್ವಯಂ ಸೇವಕರ ಶ್ರಮದಿಂದ ಯಶಸ್ವಿಯಾಗಿ ನಡೆಯಿತು.

ಕೆಎಸ್‌ಆರ್‌ಟಿಸಿ ವತಿಯಿಂದ ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಲಕ್ಸುರಿ ಬಸ್‌ಗಳನ್ನು ಒಳಗೊಂಡಂತೆ ಅನೇಕ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿತ್ತು. 4 ಸಾವಿರ ಕಾರುಗಳು ಮತ್ತು 5 ಸಾವಿರ ದ್ವಿಚಕ್ರ ವಾಹನಗಳಲ್ಲದೆ, ರಾಜ್ಯದೆಲ್ಲೆಡೆಯಿಂದ ಆಗಮಿಸಿದ್ದ ನೂರಾರು ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳಿಗೆ ಕೂಡ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು.

112 ಅಡಿ ಎತ್ತರ ಆದಿಯೋಗಿಯ ಭವ್ಯ ಸನ್ನಿಧಿ, ಯೋಗೇಶ್ವರ ಲಿಂಗ, ನಾಗ ಮಂಟಪ, ಜಾತ್ರೆ, ಇಶಾ ಗೋಶಾಲೆಯ ಸ್ಥಳೀಯ ತಳಿಗಳ ಪ್ರದರ್ಶನ ಸೆಳೆಯಿತು. ಕೊಯಂಬತ್ತೂರಿನ ಇಶಾ ಯೋಗ ಕೇಂದ್ರದಲ್ಲಿ ಶುಕ್ರವಾರ ಸಂಜೆ 6ರಿಂದ ಶನಿವಾರ ಬೆಳಗ್ಗೆ 6ರವರೆಗೆ ನಡೆದ ವೈಭವದ ಮಹಾಶಿವರಾತ್ರಿ ಆಚರಣೆಯನ್ನು ಬೃಹತ್ ಸ್ಕ್ರೀನ್‌ಗಳಲ್ಲಿ ನೇರ ಪ್ರಸಾರ ಮಾಡಲಾಯಿತು. ಸದ್ಗುರು ನಡೆಸಿಕೊಟ್ಟ ಮಧ್ಯರಾತ್ರಿ ಧ್ಯಾನದಲ್ಲಿ ಎಪ್ಪತ್ತು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದು, ಎಲ್ಲರೂ ಈ ರಾತ್ರಿಯ ಆಧ್ಯಾತ್ಮಿಕ ಸಾಧ್ಯತೆ ಬಳಸಿಕೊಳ್ಳಲು ಒಂದು ಅವಕಾಶವಾಗಿತ್ತು.

ಇದೇ ವೇಳೆ ನಡೆದ ಸಾಂಪ್ರದಾಯಿಕ ಜಾತ್ರೆಯು ಸನ್ನಿಧಿಯ ಸುತ್ತಲಿನ ಸಮುದಾಯಗಳನ್ನು ಆಕರ್ಷಿಸಿತು. 25 ಸ್ಟಾಲ್‌ಗಳನ್ನು ನಿರ್ಮಿಸಿ, ಸ್ಥಳೀಯ ತಿನಿಸು, ಬಟ್ಟೆ, ಪಾತ್ರೆ ಇತ್ಯಾದಿಗಳ ಸಾಂಸ್ಕೃತಿಕ ಪ್ರದರ್ಶನ ಇಲ್ಲಿ ಕಂಡಿತು. ಅದಲ್ಲದೆ, ಸದ್ಗುರು ಸನ್ನಿಧಿಯ ಗೋಶಾಲೆ ಎತ್ತುಗಳು ಜನರೊಂದಿಗೆ ಬೆರೆತು ಆನಂದಿಸಿದವು. ಗೋಶಾಲೆಯಲ್ಲಿ ಸದ್ಯ 15 ಸ್ಥಳೀಯ ತಳಿಯ ಎತ್ತುಗಳಿದ್ದು, ಇವುಗಳ ಜನಪ್ರಿಯತೆ ಹೆಚ್ಚುತ್ತಲೇ ಇದೆ.

ಮಹಾಶಿವರಾತ್ರಿ ಮರುದಿನ ಶಿವಲಿಂಗ ದರ್ಶನ ಮಾಡುವುದು ಇಲ್ಲಿನ ಜನರ ಸಂಪ್ರದಾಯವಾಗಿದೆ. ಆದ್ದರಿಂದ ಮಾ.9ರ ಬೆಳಗ್ಗೆ ಒಂದು ಲಕ್ಷಕ್ಕೂ ಹೆಚ್ಚು ಜನರು, ಯೋಗೇಶ್ವರ ಲಿಂಗಕ್ಕೆ ಜಲಾರ್ಪಣೆ ಮತ್ತು ಪುಷ್ಪಾರ್ಪಣೆ ಮಾಡಲು ಸನ್ನಿಧಿಯಲ್ಲಿ ಸೇರಿದರು. ಜನರ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಮುನ್ನಚ್ಚರಿಕೆ ಕ್ರಮ ಕೈಗೊಳ್ಳಲಾಗಿತ್ತು. ಪೊಲೀಸರು ಸಕಲ ಭದ್ರತೆ ಒದಗಿಸಿದ್ದರು.

ಮಾನವತೆಗೆ ಆಧ್ಯಾತ್ಮದ ಒಂದು ಹನಿ ಅರ್ಪಿಸುವ ನಿಟ್ಟಿನಲ್ಲಿ ಜಗತ್ತಿನಾದ್ಯಂತ ಆಧ್ಯಾತ್ಮಿಕ ಮೂಲಸೌಕರ್ಯವನ್ನು ಕಟ್ಟುವುದು ಸದ್ಗುರು ಸನ್ನಿಧಿಯ ಸದುದ್ದೇಶವಾಗಿದೆ. ಇತ್ತೀಚೆಗೆ ಮಕರ ಸಂಕ್ರಾಂತಿಯ ಶುಭಸಂದರ್ಭದಲ್ಲಿ ಸದ್ಗುರು ಅವರು ಮಹಾಶೂಲ ಮತ್ತು ನಂದಿಯನ್ನು ಪ್ರಾಣ ಪ್ರತಿಷ್ಠಾಪಿಸಿದರು. ಮುಂಬರುವ ದಿನಗಳಲ್ಲಿ ನವಗ್ರಹ ಮಂಟಪ, ಮಹಾಶೂಲ ಮಂದಿರ, ಲಿಂಗ ಭೈರವಿ ಮತ್ತು ತೀರ್ಥಕುಂಡಗಳು ಸದ್ಗುರು ಸನ್ನಿಧಿಯಲ್ಲಿ ಪ್ರತಿಷ್ಠಾಪನೆಗೊಳ್ಳಲಿವೆ. ಇದಲ್ಲದೆ, ಸದ್ಗುರು ಅಕಾಡಮಿ, ಇಶಾ ಹೋಂ ಸ್ಕೂಲ್, ಇಶಾ ಸಂಸ್ಕೃತಿ, ಇಶಾ ಹೆಲ್ತ್ ಸೊಲ್ಯೂಶನ್ಸ್, ಅನುಭವ ಮಂಟಪ (6 ಸಾವಿರ ಆಸನ ಸಾಮರ್ಥ್ಯದ ಸಭಾಂಗಣ) ಸೇರಿದಂತೆ ಇನ್ನು ಹಲವು ವಿಶೇಷ ಸೌಲಭ್ಯದ ನಿರ್ಮಾಣಗಳು ತಲೆ ಎತ್ತಲಿವೆ.

ಆಸ್ತಿ ನೋಂದಣಿಗೂ ಆಧಾರ್ ಲಿಂಕ್; ಭಾನುವಾರವೂ ತೆರೆದಿರಲಿವೆ ಸಬ್ ರಿಜಿಸ್ಟ್ರಾರ್ ಕಚೇರಿ


ಬೆಂಗಳೂರು, ಮಾ.12: ನಕಲಿ ದಾಖಲೆಗಳನ್ನು ಸೃಷ್ಟಿಸಿ ಇತರರ ಆಸ್ತಿಯನ್ನು ಕಬಳಿಕೆ ಮಾಡುವ ಪ್ರಕರಣಗಳನ್ನು ತಡೆಯಲು ಆಸ್ತಿಗಳ ನೋಂದಣಿಗೆ ಆಧಾರ್ ದೃಢೀಕರಣ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.



ಈ ಬಗ್ಗೆ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, 'ನನ್ನ ಆಸ್ತಿ' ಯೋಜನೆಯನ್ನು 'ನನ್ನ ಭೂಮಿ, ನನ್ನ ಗುರುತು' ಎಂಬ ಶೀರ್ಷಿಕೆಯಡಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಆಸ್ತಿ ನೋಂದಣಿ ವೇಳೆ ಆಧಾರ್ ಪಡೆಯುವ ಸೇವೆ ಆರಂಭ ಮಾಡುತ್ತೇವೆ ಎಂದರು. ಕಡ್ಡಾಯ ಮಾಡುವುದಕ್ಕೆ ಆಗುವುದಿಲ್ಲ, ಆದರೆ ನೋಂದಣಿ ಮಾಡಬೇಕಾಗುತ್ತದೆ. ನೋಂದಣಿ ಸಮಯದಲ್ಲೂ ಆಧಾರ್ ನಂಬರ್ ಕೇಳುತ್ತೇವೆ. ಆಧಾರ್ ಜೋಡಣೆ ಮಾಡುವುದರಿಂದ ನಕಲು ತಡೆಯಬಹುದು. ಸುಪ್ರೀಂಕೋರ್ಟ್ ಪ್ರಕಾರ ಕಡ್ಡಾಯ ಮಾಡಲು ಆಗುವುದಿಲ್ಲ. ಜಾಗರೂಕತೆಯಿಂದ ರಿಜಿಸ್ಟರ್ ಮಾಡಲು ಅನುಕೂಲ ಆಗಲಿದೆ ಎಂದರು.

ಖಾತೆ ಮಾಡುವಾಗಲೂ ಆಧಾರ್ ಕಾರ್ಡ್ ಅಳವಡಿಸಿಕೊಳ್ಳುತ್ತೇವೆ. ಮಹಾನಗರಗಳಲ್ಲಿ ಕೆಲಸಕ್ಕೆ ಹೋಗುವವರು ಇದ್ದಾರೆ. ನೋಂದಣಿ ಮಾಡಿಕೊಳ್ಳಲು ಹಲವರಿಗೆ ಕಷ್ಟ ಆಗುತ್ತದೆ. ಜನರ ಅನುಕೂಲಕ್ಕಾಗಿಯೇ ಮತ್ತಷ್ಟು ಜನರ ಆಡಳಿತ ನೀಡಲಿದ್ದೇವೆ ಎಂದರು.

ಭಾನುವಾರವೂ ಸಬ್ ರಿಜಿಸ್ಟ್ರಾರ್ ಕಚೇರಿ ತೆರೆದಿರುತ್ತವೆ: ರಜಾದಿನ ಭಾನುವಾರವೂ ಸಬ್ ರಿಜಿಸ್ಟ್ರಾರ್ ಕಚೇರಿ ತೆರೆಯಲು ನಿರ್ಧಾರ ಮಾಡಲಾಗಿದೆ ಎಂದು ವಿಧಾನಸೌಧದಲ್ಲಿ ಕೃಷ್ಣ ಬೈರೇಗೌಡ ಹೇಳಿದ್ದಾರೆ. ಪ್ರತಿ ಜಿಲ್ಲೆಯಲ್ಲೂ ಭಾನುವಾರ ಒಂದೊಂದು ಸಬ್ ರಿಜಿಸ್ಟ್ರಾರ್ ಕಚೇರಿ ಓಪನ್ ಮಾಡಲಾಗುವುದು. ಸದ್ಯ ಕಾರ್ಪೊರೇಷನ್ ಇರುವ ಜಿಲ್ಲೆಗಳಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿ ಓಪನ್ ಇದೆ. ಏಪ್ರಿಲ್ ನಂತರ ಮಹಾನಗರಗಳ ವ್ಯಾಪ್ತಿಯಲ್ಲೂ ಯೋಜನೆ ಜಾರಿ ಮಾಡುತ್ತೇವೆ. ಭಾನುವಾರ ಕೆಲಸ ಮಾಡಿದವರಿಗೆ ಮಂಗಳವಾರ ರಜೆ ನೀಡುವ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದರು.



ಮೈಸೂರು–ಕೊಡಗು ಕ್ಷೇತ್ರದ ಸಂಸದ ಪ್ರತಾಪ್ ಸಿಂಹರವರ ಕಳೆದ ಹತ್ತು ವರ್ಷಗಳ ರಿಪೋರ್ಟ್ ಕಾರ್ಡ್ ಅನ್ನು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿಯವರಿಗೆ ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್ ತಲುಪಿಸಿದರು. ಈ ಸಂದರ್ಭದಲ್ಲಿ ವೆಂಕಟೇಶ್, ವಾದಿರಾಜ್ ಬಲ್ಲಾಳ್, ಎಂ.ವಿ.ರೇಖಾ, ಜ್ಯೋತಿ ಮತ್ತಿತರರಿದ್ದರು.

ಮುಂಬರುವ ಮೇನಲ್ಲಿ 'ಮೈಸೂರು ಕರಗ' ಶತಮಾನೋತ್ಸವ

ಇಂದು ಶ್ರೀ ರೇಣುಕಾದೇವಿ ಅಮ್ಮನವರ ಉತ್ಸವ ಮೂರ್ತಿ ಮೆರವಣಿಗೆ



ಮೈಸೂರಿನ ಇಟ್ಟಿಗೆಗೂಡಿನ ಶ್ರೀ ರೇಣುಕಾದೇವಿ ಅಮ್ಮನವರ ದೇವಸ್ಥಾನ.

ಮೈಸೂರು,ಮಾ.12(ಪಿಎಂ)– ಮೈಸೂರಿನ ಇಟ್ಟಿಗೆಗೂಡಿನ ಶ್ರೀ ರೇಣುಕಾದೇವಿ ಕರಗ ದೇವಸ್ಥಾನದಲ್ಲಿ ಶ್ರೀ ರೇಣುಕಾದೇವಿ ಅಮ್ಮನವರ 38ನೇ ವಾರ್ಷಿಕೋತ್ಸವ ಹಾಗೂ ದೇವಸ್ಥಾನ ಜೀರ್ಣೋದ್ಧಾರ ಮಹಾ ಕುಂಬಾಭಿಷೇಕ ಮಹೋತ್ಸವ ಸೋಮವಾರ ಆರಂಭಗೊಂಡಿದೆ. ದೇವಸ್ಥಾನದ ವತಿಯಿಂದ ಮುಂಬರುವ ಮೇ ತಿಂಗಳಲ್ಲಿ ಮೈಸೂರು ಕರಗ ಶತಮಾನೋತ್ಸವ ಆಚರಣೆಗೂ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕುಂಬಾಭಿಷೇಕ ಮಹೋತ್ಸವದ ವಿವಿಧ ಪೂಜಾ ಕೈಂಕರ್ಯಗಳು ಸೋಮವಾರ ಹಾಗೂ ಮಂಗಳವಾರ ದೇವಸ್ಥಾನದಲ್ಲಿ ನಡೆಯಿತು. ಅಂತೆಯೇ ನಾಳೆ (ಮಾ.13) ಬೆಳಗ್ಗೆಯಿಂದ ಅಮ್ಮನವರ ವರ್ಧಂತಿ ಪ್ರಯುಕ್ತ ಪುಣ್ಯಾಹ ಮೂಲಮಂತ್ರ ಹೋಮ ಸೇರಿದಂತೆ ವಿವಿಧ ಪೂಜಾ ವಿಧಿ ವಿಧಾನಗಳು ನಡೆಯಲಿವೆ. ಬಳಿಕ ಸಂಜೆ 7ಕ್ಕೆ ಶ್ರೀ ರೇಣುಕಾದೇವಿ ಅಮ್ಮನವರ ಉತ್ಸವ ಮೂರ್ತಿಯ ಮೆರವಣಿಗೆಯು ಇಟ್ಟಿಗೆಗೂಡಿನ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ.

ಪ್ರತಿವರ್ಷ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮೈಸೂರು ಕರಗ ಮಹೋತ್ಸವ ನಡೆದು ಬಂದಿದೆ. ಅಂತೆಯೇ ಈ ಬಾರಿ ಮೇ 15ರಂದು ಕರಗ ಮಹೋತ್ಸವ ಆರಂಭವಾಗಲಿದೆ. ಪ್ರತಿವರ್ಷ ಐದು ದಿನ ಕರಗ ಮಹೋತ್ಸವ ನಡೆಯಲಿದ್ದು, ನಾಲ್ಕನೇ ದಿನದಂದು ಕರಗದ ಮೆರವಣಿಗೆ ನಡೆಯಲಿದೆ. ಈ ಬಾರಿಯ ಕರಗ ಮಹೋತ್ಸವಕ್ಕೆ 100 ವರ್ಷಗಳು ತುಂಬಲಿದ್ದು, ಹಾಗಾಗಿ ಶತಮಾನೋತ್ಸವವಾಗಿ ಆಚರಿಸಲು ಸಿದ್ಧತೆ ನಡೆಯುತ್ತಿದೆ.

ಇಂದು 'ಸಹಕಾರ ಮಿತ್ರ' ಸ್ಮರಣ ಸಂಚಿಕೆ ಬಿಡುಗಡೆ

ಮೈಸೂರು, ಮಾ. 12(ಆರ್‌ಕೆ)– ಮೈಸೂರಿನ ಪೈವಿಸ್ಟಾ ಹೋಟೆಲು ಸಭಾಂಗಣದಲ್ಲಿ ನಾಳೆ (ಮಾ.13) ಸಂಜೆ 5 ಗಂಟೆಗೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ ಹೊರತಂದಿರುವ 'ಸಹಕಾರ ಮಿತ್ರ' ರಜತ ಮಹೋತ್ಸವದ ಸ್ಮರಣ ಸಂಚಿಕೆಯನ್ನು ಕನ್ನಡಪ್ರಭ ಕಾರ್ಯ ನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನ ಕುಮಾರ್ ಬಿಡುಗಡೆ ಮಾಡುವರು.

ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಮುಖ್ಯಸ್ಥ ಡಾ.ಪ್ರೊ.ಭಾಷ್ಯಂ ಸ್ವಾಮೀಜಿ ಸಾನ್ನಿಧ್ಯ ವಹಿಸುವ ಸಮಾರಂಭವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸುವರು. ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ದಿವಾಕರ ಜಿ. ಹೆಗಡೆ, ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲು ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.



ಮೈಸೂರು ಜಿಲ್ಲಾ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಗ್ರಾಮ ಪರಿಕ್ರಮ ಯಾತ್ರೆಯ ಸಮಾರೋಪ ಸಮಾರಂಭವನ್ನು ಚಾಮುಂಡೇಶ್ವರಿ ಕ್ಷೇತ್ರದ ದೂರ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಮೈಸೂರು ಮಹಾನಗರ ಜಿಲ್ಲಾಧ್ಯಕ್ಷ ಹೂಟಗಳ್ಳಿ ದೇವರಾಜು, ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಕುಮಾರ್, ಮುಖಂಡರಾದ ಜಾಬಗೆರೆ ರಮೇಶ್, ಮಹೇಶ್ ಮಡವಾಡಿ, ಕೆ.ಜಿ.ಕೊಪ್ಪಲು ದೇವರಾಜು, ಕೇಬಲ್ ಮಹೇಶ್, ಕಾಮನಕೆರೆ ಹುಂಡಿ ನಾರಾಯಣ್, ಪೈ.ಟಿ.ರವಿ, ಶಿವಕುಮಾರ್ ಚಿಕ್ಕಕಾನ್ಯ, ಇಲವಾಲ ಗೋವಿಂದಸ್ವಾಮಿ, ದೂರ ವೃಷಬೇಂದ್ರ ಮತ್ತಿತರರಿದ್ದರು.

ಚಾಮರಾಜನಗರದಲ್ಲಿ ಐದು ಗ್ಯಾರಂಟಿ ಫಲಾನುಭವಿಗಳ ಸಮಾವೇಶ

ರಾಜ್ಯದಲ್ಲಿ ಗ್ಯಾರಂಟಿಯಿಂದ ಶೇ.18ರಷ್ಟು ಅಧಿಕ ಜಿಎಸ್‌ಟಿ ಸಂಗ್ರಹ

●ನುಡಿದಂತೆ ಐದು ಗ್ಯಾರಂಟಿ ಜಾರಿ ●ಚಾಮರಾಜನಗರ ಅಭಿವೃದ್ಧಿಗೆ ಆದ್ಯತೆ ●ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಗ್ಯಾರಂಟಿ ಫಲಾನುಭವಿಗಳ ಸಭೆ

ಚಾಮರಾಜನಗರ, ಮಾ.12– ಗ್ಯಾರಂಟಿ ಯೋಜನೆಗಳು ಜಾರಿಗೊಂಡ ಬಳಿಕ ರಾಜ್ಯದಲ್ಲಿ ಶೇ.18ರಷ್ಟು ಜಿಎಸ್‌ಟಿ ಸಂಗ್ರಹ ಹೆಚ್ಚಳವಾಗಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶವದಲ್ಲಿ ಮಾತನಾಡಿದ ಅವರು, ಗ್ಯಾರಂಟಿಯಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ವಿರೋಧ ಪಕ್ಷದವರು ಟೀಕೆ ಮಾಡುತ್ತಿದ್ದರು. ಆದರೆ, ಗ್ಯಾರಂಟಿ ಯೋಜನೆ ಜಾರಿಗೊಂಡ ಬಳಿಕ ರಾಜ್ಯದಲ್ಲಿ ವ್ಯಾಪಾರ–ವಹಿವಾಟು ಉತ್ತಮವಾಗಿದ್ದು, ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ ರಾಜ್ಯ ಮೊದಲ ಸ್ಥಾನ ಪಡೆದಿದೆ ಎಂದು ತಿಳಿಸಿದರು.

4 ರಿಂದ 5 ಸಾವಿರ ವರಮಾನ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಜಾರಿಗೊಂಡ ಬಳಿಕ ರಾಜ್ಯದ 1.20 ಕೋಟಿ ಕುಟುಂಬಗಳಿಗೆ ತಿಂಗಳಿಗೆ 4 ರಿಂದ 5 ಸಾವಿರದಷ್ಟು ವರಮಾನ ದೊರೆಯುತ್ತಿದೆ. ಇದರಿಂದ ಬಡವರು, ಮಧ್ಯಮವರ್ಗದ ಕುಟುಂಬಗಳಿಗೆ ಅನುಕೂಲವಾಗಿದೆ. ಈ ಎಲ್ಲಾ ಯೋಜನೆಗಳು ಮುಂದುವರಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಚಾಮರಾಜನಗರದ ಅಭಿವೃದ್ಧಿಗೆ ಬದ್ಧ: 2013–18ನೇ ಸಾಲಿನಲ್ಲಿ ಅಧಿಕಾರದಲ್ಲಿದ್ದ ಅವಧಿಯಲ್ಲಿಯೂ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೊಡುಗೆಯನ್ನು ನೀಡಲಾಗಿತ್ತು. ಈ ಬಾರಿಯೂ ಜಿಲ್ಲೆಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಜಿಲ್ಲೆಯ ಜನರು ಮುಂದೆಯೂ ಕೂಡ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.


367 ಕೋಟಿ ರೂ. ಅನುದಾನಕ್ಕೆ ಮನವಿ: ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗಾಗಿ 367 ಕೋಟಿ ರೂ. ಅನುದಾನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಲಾಭವನ್ನು ಜಿಲ್ಲೆಯ ಶೇ.98ರಷ್ಟು ಜನರು ಪಡೆದಿದ್ದಾರೆ. ಇದು ಹೆಮ್ಮೆಯ ಸಂಗತಿ. ಕುಡಿಯುವ ನೀರು, ಕೆರೆಗಳನ್ನು ತುಂಬಿಸುವ ಯೋಜನೆ, ರಸ್ತೆಗಳು ಸೇರಿದಂತೆ ಜಿಲ್ಲೆಯ ಮೂಲಸೌಕರ್ಯಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್ಚಿನ ಒತ್ತು ನೀಡಿದ್ದಾರೆ. ಪ್ರಸ್ತುತ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗಾಗಿ 367 ಕೋಟಿ ರೂ. ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಜನಸಾಮಾನ್ಯರ ಸಬಲೀಕರಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲಾ ವರ್ಗಗಳ ಜನರಿಗೂ ಸಮತೋಲಿತ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜನಮನ್ನಣೆ ಗಳಿಸಿದ್ದಾರೆ. ಸರ್ಕಾರದ ಬಗ್ಗೆ ಜನರು ವಿಶ್ವಾಸ ಹೊಂದಿದ್ದಾರೆ ಎಂದು ತಿಳಿಸಿದರು.

ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಮಾತನಾಡಿ, ಸರ್ಕಾರ ಅಧಿಕಾರಕ್ಕೆ ಬಂದ ನಂತರ ತ್ವರಿತವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ ನುಡಿದಂತೆ ನಡೆದಿದೆ. ಜಿಲ್ಲೆಯ ಪ್ರಗತಿಗೆ ಮಾಜಿ ಸಚಿವ ದಿ.ಎಚ್.ಎಸ್.ಮಹದೇವ ಪ್ರಸಾದ್ ಅವರು ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ಇನ್ನಿತರ ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಎಂದರು.

ಎಲ್ಲಿಗೆ ಹೋಗ್ತಿದ್ದೀರಾ ಕೂರ್‍ರಿ... ಕೂರ್‍ರಿ...!



ಚಾಮರಾಜನಗರದಲ್ಲಿ ಮಂಗಳವಾರ ನಡೆದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದ ಆರಂಭದಲ್ಲೇ ಎದ್ದು ಹೋಗುತ್ತಿದ್ದ ಜನರನ್ನು ಕೂರ್‍ರಿ.... ಕೂರ್‍ರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದು ಕೂರಿಸುವ ಪ್ರಯತ್ನ ಮಾಡಿದರು.

ಸಮಾವೇಶದ ಆರಂಭದಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡುತ್ತಿದ್ದರು. ಈ ವೇಳೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಸಂಖ್ಯಾತ ಜನರಲ್ಲಿ ಕೆಲವರು ಎದ್ದು ಹೋಗುತ್ತಿದ್ದರು. ಇದನ್ನು ಗಮನಿಸಿದ ಸಿದ್ದರಾಮಯ್ಯ ನೇರವಾಗಿ ಮೈಕ್‌ನ ಬಳಿಗೆ ಬಂದು ಯಾರ್‍ರಿ ಅವರು ಹೋಗುತ್ತಿರುವುದು ಕೂರ್‍ರಿ... ಕೂರ್‍ರಿ.... ಇನ್ನೊಂದು ಗಂಟೆಯೊಳಗೆ ಕಾರ್ಯಕ್ರಮ ಮುಗಿಯುತ್ತದೆ. ಅಲ್ಲಿಯವರೆಗೆ ಯಾರೊಬ್ಬರೂ ಹೋಗಬೇಡಿ ಎಂದು ವಿನಂತಿಸಿದರು.

ಸಂಸದ ಪ್ರತಾಪ್‌ಸಿಂಹಗೆ ಹೆಸರು ಕೆಡಿಸಿಕೊಂಡಿರುವುದರಿಂದ ಟಿಕೆಟ್ ಕೈ ತಪ್ಪಬಹುದು

ಚಾಮರಾಜನಗರ, ಮಾ.12–ಸಂಸದ ಪ್ರತಾಪ್‌ಸಿಂಹ ಹೆಸರು ಕೆಡಿಸಿಕೊಂಡಿದ್ದು, ಅವರು ಗೆಲ್ಲುವುದಿಲ್ಲ ಎಂಬ ಕಾರಣಕ್ಕೆ ಯದುವೀರ್ ಅವರನ್ನು ಅಭ್ಯರ್ಥಿ ಮಾಡುವ ನಿರ್ಧಾರಕ್ಕೆ ಬಿಜೆಪಿ ಬಂದಿರಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಿದ ನಂತರ, ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಟಿಕೆಟ್ ಕುರಿತ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಅಭ್ಯರ್ಥಿ ಯಾರಾಗುತ್ತಾರೆ ಎನ್ನುವುದಕ್ಕಿಂತ ಬಿಜೆಪಿಯನ್ನು ಸೋಲಿಸುವುದು ನಮ್ಮ ಗುರಿ ಎಂದರು.

ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ ಎಂಬುದು ಶುದ್ಧ ಸುಳ್ಳು. ನಮಗೆ ನೀರಿಲ್ಲದಿರುವಾಗ ತಮಿಳುನಾಡಿಗೆ ಒಂದು ತೊಟ್ಟು ನೀರು ಬಿಡಲು ಸಾಧ್ಯವೇ ಇಲ್ಲ. ನಮ್ಮ ನಾಡಿನ ಜನರಿಗೆ ಕುಡಿಯುವ ನೀರು ಪೂರೈಕೆ ಮಾಡುವುದು ನಮ್ಮ ಜವಾಬ್ದಾರಿ ಎಂದು ತಿಳಿಸಿದರು.

ಚುನಾವಣೆಯ ಕರ್ತವ್ಯಕ್ಕೆ ನಿಯೋಜನೆ: ಪಿಡಿಒಗಳಿಗೆ ವಿನಾಯ್ತಿ



ಬೆಂಗಳೂರು, ಮಾ.12– ರಾಜ್ಯದಲ್ಲಿ ತೀವ್ರ ಬರಗಾಲ ಇರುವುದರಿಂದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು (ಪಿ.ಡಿ.ಒ) ಕಾಯಂ ಸ್ವರೂಪದ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಬಾರದು ಎಂಬ ಪಂಚಾಯತ್‌ರಾಜ್ ಇಲಾಖೆಯ ಮನವಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳಿಗೆ ರವಾನಿಸಿರುವ ರಾಜ್ಯ ಮುಖ್ಯ ಚುನಾವಣಾಧಿಕಾರಿ, ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ಫೆಬ್ರವರಿ 16ರಂದು ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಅವರಿಗೆ ಪತ್ರ ಬರೆದಿದ್ದ ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ತನಿಖಾ ಠಾಣೆಗಳಲ್ಲಿ ನಿಯೋಜನೆ ಸೇರಿದಂತೆ ಪಿ.ಡಿ.ಒಗಳನ್ನು ಕಾಯಂ ಸ್ವರೂಪದ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದರೆ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಕಷ್ಟವಾಗುತ್ತದೆ ಎಂದು ತಿಳಿಸಿದ್ದರು.

ಪೂರ್ಣ ಪ್ರಮಾಣದ ಚುನಾವಣಾ ಕೆಲಸದಲ್ಲಿ ಪಿ.ಡಿ.ಒಗಳು ತಲ್ಲೀನರಾದರೆ ಕುಡಿಯುವ ನೀರು ಪೂರೈಕೆ ಸೇರಿದಂತೆ ಬರ ನಿರ್ವಹಣೆಯ ಕೆಲಸಗಳಿಗೆ ಅಡ್ಡಿಯಾಗುತ್ತದೆ. ಆದ್ದರಿಂದ ಅಲ್ಪಾವಧಿಯ ಚುನಾವಣಾ ಕೆಲಸಗಳಿಗೆ ಮಾತ್ರ ನಿಯೋಜಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಬೇಕು ಎಂದು ಕೋರಿದ್ದರು.

ಮಾರ್ಚ್ 2ರಂದು ಎಲ್ಲ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಪತ್ರ ಬರೆದಿರುವ ಮುಖ್ಯ ಚುನಾವಣಾಧಿಕಾರಿ ಕಚೇರಿಯು, ಪಿಡಿಒಗಳಿಗೆ ದೀರ್ಘಾವಧಿಯ ಚುನಾವಣಾ ಕರ್ತವ್ಯದಿಂದ ವಿನಾಯ್ತಿ ನೀಡಿ, ಸಾಂದರ್ಭಿಕ/ಅಲ್ಪಾವಧಿಯ ಕೆಲಸಗಳಿಗೆ ಮಾತ್ರ ನಿಯೋಜನೆ ಮಾಡಬೇಕೆಂಬ ಕೋರಿಕೆಯನ್ನು ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದೆ.

ಪಿಡಿಒಗಳು ಬರ ನಿರ್ವಹಣೆ ಕೆಲಸ ಮತ್ತು ಚುನಾವಣಾ ಕರ್ತವ್ಯವನ್ನು ಏಕಕಾಲಕ್ಕೆ ಮಾಡುವುದು ಕಷ್ಟ, ಎರಡೂ ಜವಾಬ್ದಾರಿ ವಹಿಸಿದರೆ ಜನರಿಗೆ ತೊಂದರೆ ಆಗುತ್ತದೆ. ಮುಖ್ಯ ಚುನಾವಣಾ ಅಧಿಕಾರಿಯವರ ನಿರ್ದೇಶನದಂತೆ ಪಿ.ಡಿ.ಒಗಳನ್ನು ಕಾಯಂ ಚುನಾವಣಾ ಕರ್ತವ್ಯದಿಂದ ಮುಕ್ತಗೊಳಿಸಬೇಕು ಎಂದು ರಾಜ್ಯ ಪಿ.ಡಿ.ಒಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜು ವಾರದ ಆಗ್ರಹಿಸಿದ್ದಾರೆ.

ಬಿಜೆಪಿಯ ಅಭ್ಯರ್ಥಿಗಳನ್ನೇ ಸೋಲಿಸುವುದು ಅಪ್ಪ, ಮಗನ ದಂಧೆ

● ಬಿಎಸ್‌ವೈ ವಿರುದ್ಧ ಯತ್ನಾಳ್ ಗರಂ
● ಯಡಿಯೂರಪ್ಪ ಲಿಂಗಾಯತನೇ ಅಲ್ಲ



ಕಲಬುರಗಿ, ಮಾ.12– ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸುವುದು ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಅವರ ಮಗ ಬಿ.ವೈ ವಿಜಯೇಂದ್ರ ಅವರ ದಂಧೆಯಾಗಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಹಾಲಿ ಮೂವರು ಸಂಸದರಿಗೆ ಟಿಕೆಟ್ ಕೈ ತಪ್ಪುವ ವಿಚಾರಕ್ಕೆ ಪ್ರತಿಕ್ರಿಯಿಸಿದ್ದಾರೆ. ಪೂಜ್ಯ ತಂದೆ–ಮಗ ಇಬ್ಬರೂ ಸೇರಿ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸುವುದು ಅವರ ಗುರಿಯಾಗಿದೆ. ಈ ಹಿಂದೆ ನನ್ನನ್ನು ಸೋಲಿಸಲು ಬಿ.ವೈ ವಿಜಯೇಂದ್ರ ಹಣ ಕಳುಹಿಸಿದ್ದ ಎಂದು ಕಿಡಿಕಾರಿದ್ದಾರೆ.

ಯಡಿಯೂರಪ್ಪ ಕುಟುಂಬದಲ್ಲಿ ಒಬ್ಬ ಮಗ ಕ್ಯಾಬಿನೆಟ್ ಮಂತ್ರಿಯಾಗಬೇಕು, ಇನ್ನೊಬ್ಬ ಮಗ ಮುಖ್ಯಮಂತ್ರಿಯಾಗಬೇಕು. ಇನ್ನೂ ಅವರ ಮನೆಯ ಕೆಲವು ಚಿಳ್ಳಿ ಮಿಳ್ಳಿ ಸದಸ್ಯರು ವಿಧಾನ ಪರಿಷತ್ ಹಾಗೂ ರಾಜ್ಯಸಭಾ ಸದಸ್ಯರಾಗಬೇಕು. ಇದು ಯಡಿಯೂರಪ್ಪ ಅವರ ಕೊನೆಯ ಕನಸು ಎಂದು ವ್ಯಂಗ್ಯವಾಡಿದರು.

ಯಡಿಯೂರಪ್ಪ ಯಾವೊಬ್ಬ ಲಿಂಗಾಯತರನ್ನು ಉದ್ಧಾರ ಮಾಡಿಲ್ಲ. ಯಡಿಯೂರಪ್ಪ ಲಿಂಗಾಯತನೇ ಅಲ್ಲ. ಅವರ ಹಿಂದೆ ಕೆಲವು ಸ್ವಾಮೀಜಿಗಳಿದ್ದಾರೆ. ಹಣ ಕೊಡ್ತಾನೆ ಅಂತ ಸ್ವಾಮೀಜಿಗಳು ಅವರಿಗೆ ತಥಾಸ್ತು ಅಂತಾರೆ. ಈ ಲೋಕಸಭಾ ಚುನಾವಣೆ ಬಳಿಕ ಯಡಿಯೂರಪ್ಪನವರ ಇನ್ನಷ್ಟು ಬಂಡವಾಳ ಬಯಲು ಮಾಡುತ್ತೇನೆ ಎಂದು ಅವರು ಹೊಸ ಬಾಂಬ್ ಸಿಡಿಸಿದ್ದಾರೆ.

ಸಿದ್ದಲಿಂಗಯ್ಯ, ಪ್ರವೀಣ್ ದತ್ ಸ್ಟೀಫನ್‌ಗೆ 'ಕಸಾಪ ದತ್ತಿ ಪ್ರಶಸ್ತಿ'

ಬೆಂಗಳೂರು, ಮಾ.12– ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ'ಗೆ ಸಾಹಿತಿ ಜಿ.ಎಸ್.ಸಿದ್ದಲಿಂಗಯ್ಯ ಹಾಗೂ ಸಂಗೀತ ನಿರ್ದೇಶಕ ಪ್ರವೀಣ್ ದತ್ ಸ್ಟೀಫನ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ 10 ಸಾವಿರ ನಗದು ಒಳಗೊಂಡಿದೆ. ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಈ ಪ್ರಶಸ್ತಿಯನ್ನು ಪ್ರತಿ ವರ್ಷ ಕನ್ನಡ ಕ್ರೈಸ್ತ ಸಾಧಕರೊಬ್ಬರು ಹಾಗೂ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಇರುವ ಒಬ್ಬರಿಗೆ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 16ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಆಯೋಜಿಸಲಾಗಿದೆ. ಎಸ್.ಎಂ.ಎಂ.ಐ ಧಾರ್ಮಿಕ ಸಭೆಯ ಕರ್ನಾಟಕ ಪ್ರಾಂತ್ಯಾಧಿಕಾರಿ ಜೆಸ್ಸಿ ಮರ್ಲಿನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪರಿಷತ್ತಿನ ಅಧ್ಯಕ್ಷರಾದ ಮಹೇಶ ಜೋಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಸಾಪ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರಮೂರ್ತಿ ತಿಳಿಸಿದ್ದಾರೆ.

—— ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ——

ಬಿಜೆಪಿ ಟಿಕೆಟ್‌ಗೆ ಪಕ್ಷದ ಮುಖಂಡ ಜಯಪ್ರಕಾಶ್ ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಜೆಪಿ ಮುಖಂಡ ಜಯಪ್ರಕಾಶ್ ಮಾತನಾಡಿದರು.

ಮೈಸೂರು,ಮಾ.12(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ತಮಗೆ ಟಿಕೆಟ್ ನೀಡಬೇಕೆಂದು ಪಕ್ಷದ ವರಿಷ್ಠರಲ್ಲಿ ಪಕ್ಷದ ಮುಖಂಡ ಹಾಗೂ ನಟ ಎಸ್.ಜಯಪ್ರಕಾಶ್ (ಜೆಪಿ) ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ಪ್ರಕಟಿಸುವಂತೆ ಕಳೆದ 6 ತಿಂಗಳಿಂದ ನಮ್ಮ ಪಕ್ಷದ ಹಿತೈಷಿಗಳು ಹಾಗೂ ಅನೇಕರು ಸಲಹೆ ನೀಡುತ್ತಲೇ ಇದ್ದಾರೆ. ಆದರೆ ಕಾವೇರಿ ಕ್ರಿಯಾ ಸಮಿತಿ ಹೋರಾಟದ ಒತ್ತಡದಲ್ಲಿ ಅದು ಸಾಧ್ಯವಾಗಿರಲಿಲ್ಲ ಎಂದರು.

ಬಿಜೆಪಿ ನಗರಾಧ್ಯಕ್ಷರಾಗಿ ಎಲ್.ನಾಗೇಂದ್ರ ಹಾಗೂ ಜಿಲ್ಲಾಧ್ಯಕ್ಷರಾಗಿ ಎಲ್.ಆರ್.ಮಹದೇವಸ್ವಾಮಿ ಅವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲೇ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದೇನೆ. ಕ್ಷೇತ್ರದ ಹಾಲಿ ಸಂಸದ ಪ್ರತಾಪ್ ಸಿಂಹ ಅವರು ತಮ್ಮನ್ನು ಬಿಟ್ಟರೆ ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ಯಾರಿಗೆ ಅರ್ಹತೆ ಇದೆ ಎನ್ನುವಂತಹ ಹೇಳಿಕೆಗಳನ್ನು ಪದೇ ಪದೆ ಕೊಡುತ್ತಿದ್ದಾಗ ನನ್ನಂತಹ ಹಿರಿಯ ಮುಖಂಡರಿಗೆ ಅತ್ಯಂತ ನೋವಾಗಿದೆ. ಮೈಸೂರು ನಗರದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆಗಾಗಿ ದುಡಿದಿದ್ದೇನೆ. ನನಗೆ ಈ ಕ್ಷೇತ್ರದಲ್ಲಿ ಟಿಕೆಟ್ ನೀಡಬೇಕೆಂದು ಪಕ್ಷದ ರಾಜ್ಯ ಮತ್ತು ರಾಷ್ಟ್ರದ ವರಿಷ್ಠರಲ್ಲಿ ಮನವಿ ಮಾಡುತ್ತೇನೆಂದು ತಿಳಿಸಿದರು.

ನಿಷ್ಠಾವಂತರಿಗೆ ಸ್ಥಾನಮಾನ ನೀಡುವ ಯಾವುದಾದರೂ ಪಕ್ಷ ದೇಶದಲ್ಲಿದ್ದರೆ ಅದು ಬಿಜೆಪಿ. ಹಾಗಾಗಿ ನಮ್ಮ ಪಕ್ಷ ನನ್ನನ್ನು ಗುರುತಿಸುವ ವಿಶ್ವಾಸವಿದೆ. ನಮ್ಮ ಸಮಾಜಕ್ಕೆ ಮೈಸೂರು ಮಹಾರಾಜರ ಕೊಡುಗೆ ಅಪಾರ. ಹಾಗಾಗಿ ಅವರ ವಂಶಸ್ಥರ ಬಗ್ಗೆ ಗೌರವದಿಂದ ಮಾತನಾಡಬೇಕು. ಯಾರೂ ಅಗೌರವದಿಂದ ಮಾತನಾಡಬಾರದೆಂದು ಮನವಿ ಮಾಡಿದರು.

ನರೇಂದ್ರ ಮೋದಿಯವರು ದೇಶವನ್ನು ಈಗ ಪ್ರಪಂಚದಲ್ಲಿ ಎರಡನೇ ಸ್ಥಾನಕ್ಕೆ ತಂದು ನಿಲ್ಲಿಸಿದ್ದಾರೆ. ಜೊತೆಗೆ ವಿಶ್ವ ಗುರು ಮಟ್ಟಕ್ಕೇರಿಸಲು ಅವರು ಮತ್ತೊಮ್ಮೆ ಪ್ರಧಾನಿಯಾಗಬೇಕೆಂಬ ಒಂದೇ ದೃಷ್ಟಿಯಿಂದ ಒಂದು ವೇಳೆ ನನಗೆ ಟಿಕೆಟ್ ತಪ್ಪಿ, ಯಾರಿಗೇ ನೀಡಿದರೂ ಸಂತೋಷದಿಂದ ಕೆಲಸ ಮಾಡುತ್ತೇನೆ. ಎಲ್.ನಾಗೇಂದ್ರ, ಎಸ್.ಎ.ರಾಮದಾಸ್, ಮಾರುತಿರಾವ್ ಪವಾರ್ ಸೇರಿದಂತೆ ಎಲ್ಲಾ ಮುಖಂಡರು ಟಿಕೆಟ್ ವಿಚಾರದಲ್ಲಿ ನನಗೆ ಬೆಂಬಲ ನೀಡಬೇಕೆಂದು ಕೋರಿದರು. ಮುಖಂಡರಾದ ಶಿವಕುಮಾರ್, ನಾಗರಾಜು, ಹೇಮಾವತಿ, ಭಾಗ್ಯಮ್ಮ, ಮಂಜುಳಾ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೇಕೆದಾಟು ಅಣೆಕಟ್ಟೆಗೆ ಅನುಮತಿ ದೊರೆತರೆ ಮಾತ್ರ ಮತದಾನ!



ಬೆಂಗಳೂರು, ಮಾ.12– ಮೇಕೆದಾಟು ಅಣೆಕಟ್ಟು ಕಟ್ಟಲು ಅನುಮತಿ ದೊರೆತರೆ ಮಾತ್ರ ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಮನಗರ ಜಿಲ್ಲಾ ಶಾಖೆಯ ಕನಕಪುರ ಘಟಕ ಎಚ್ಚರಿಕೆ ನೀಡಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಘಟಕದ ಅಧ್ಯಕ್ಷ ಮಂಜೇಗೌಡ, ಮೇಕೆದಾಟು ಅಣೆಕಟ್ಟನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಈಗ ಸುಮ್ಮನಾಗಿದೆ. ಇದರಿಂದ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ನಮಗೆ ನಿಮ್ಮ ಯಾವುದೇ ಗ್ಯಾರಂಟಿಗಳು ಬೇಕಿಲ್ಲ. ಬದಲಾಗಿ ನೀರನ್ನು ಒದಗಿಸಿ ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕೆ ಬರುವ ಮೊದಲು ಮೇಕೆದಾಟು ಪಾದಯಾತ್ರೆ ನಡೆಸಿದರು. ಆ ವೇಳೆ ಅಧಿಕಾರಕ್ಕೆ ಬಂದರೆ ಅಣೆಕಟ್ಟನ್ನು ಕಟ್ಟುತ್ತೇವೆ ಎಂದು ಭರವಸೆ ನೀಡಿದರು. ಆದರೆ, ಅಧಿಕಾರಕ್ಕೆ ಬರುತ್ತಿದ್ದಂತೆ ನೀಡಿದ್ದ ಭರವಸೆಯನ್ನು ಮರೆತಿದ್ದಾರೆ. ಈಗ ಬೆಂಗಳೂರು ಸೇರಿ ವಿವಿಧೆಡೆ ನೀರಿನ ಸಮಸ್ಯೆ ಉಲ್ಬಣಿಸಿದೆ. ಇನ್ನಾದರೂ ಎಚ್ಚೆತ್ತುಕೊಂಡು ಅಣೆಕಟ್ಟನ್ನು ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಕಾರ್ಪೋರೇಟರ್ ಸಹೋದರ

ಅಕ್ಮಲ್ ಹತ್ಯೆಗೈದಿದ್ದ ನಾಲ್ವರ ಸೆರೆ

7 ದಿನಗಳ ಕಾಲ ಆರೋಪಿಗಳು ಪೊಲೀಸ್ ವಶಕ್ಕೆ

ಮೈಸೂರು, ಮಾ. 12(ಆರ್‌ಕೆ)– ಬೈಕ್‌ನಲ್ಲಿ ಹೋಗುತ್ತಿದ್ದಾಗ ಅಡ್ಡಗಟ್ಟಿ ರಾಜೀವ್‌ನಗರ 2ನೇ ಹಂತದ ಆರ್ಯ ಬೇಕರಿ ಬಳಿ ಅಫೀಜ್ ಮೊಹಮದ್ ಅಕ್ಮಲ್‌ನನ್ನು ಹತ್ಯೆಗೈದು ತಲೆಮರೆಸಿಕೊಂಡಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಇಂದು ಬಂಧಿಸಿದ್ದಾರೆ.


ಉದಯಗಿರಿಯ ಬಷೀರ್ ಅಹಮದ್, ಇಲಿಯಾಸ್, ಪರ್ವಿಜ್ ಹಾಗೂ ಇಮ್ರಾನ್ ಬಂಧಿತ ಕೊಲೆ ಆರೋಪಿಗಳು, ಫ್ಲೆಕ್ಸ್ ತೆರವುಗೊಳಿಸುವ ವಿಚಾರದಲ್ಲಿ ಉಂಟಾಗಿದ್ದ ಘರ್ಷಣೆ ಹಾಗೂ ಹಳೇ ದ್ವೇಷದ ಹಿನ್ನೆಲೆಯಲ್ಲಿ ಮಾರ್ಚ್ 8ರಂದು ಅಕ್ಮಲ್‌ನನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಹತ್ಯೆಗೈದು ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಉದಯಗಿರಿ ಠಾಣೆ ಪೊಲೀಸರು, ತನಿಖೆಯನ್ನು ಸಿಸಿಬಿಗೆ ವಹಿಸಿದ್ದರು. ಎಸಿಪಿ ಎಸ್. ಸಂದೇಶ್‌ಕುಮಾರ್ ನೇತೃತ್ವದಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಇನ್ಸ್‌ಪೆಕ್ಟರ್ ಕೆ.ಸಿ. ಪೂವಯ್ಯ, ಸಬ್ ಇನ್ಸ್‌ಪೆಕ್ಟರ್‌ಗಳಾದ ಕೆ. ಲೇಪಾಕ್ಷ, ಮಾರುತಿ ಹಾಗೂ ಸಿಬ್ಬಂದಿ ಇಂದು ಮೈಸೂರಿನ ವರುಣ ನಾಲೆ ಬಳಿ ರಿಂಗ್ ರೋಡ್ ಸಮೀಪ ಬಂಧಿಸುವಲ್ಲಿ ಯಶಸ್ವಿಯಾದರು.

ಸಿಸಿಬಿ ಘಟಕದಲ್ಲಿ ವಿಚಾರಣೆ ನಡೆಸಿದ ಬಳಿಕ ಇಂದು ಮಧ್ಯಾಹ್ನ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ತಮ್ಮ ವಶಕ್ಕೆ ಒಪ್ಪಿಸುವಂತೆ ಕೋರಿದ ಹಿನ್ನೆಲೆಯಲ್ಲಿ ನಾಲ್ವರು ಆರೋಪಿಗಳನ್ನೂ 7 ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಯಿತು.

ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನಿರ್ದೇಶನದಂತೆ ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ ಮಾರ್ಗದರ್ಶನದಲ್ಲಿ ತನಿಖಾ ತಂಡದ ಸಿಸಿಬಿ ಪೊಲೀಸರು ಹತ್ಯೆ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಿದ್ದಾರೆ.

ಬಿಜೆಪಿ ಮೌನಿ ಬಾಬಾಗಳು ತುಟಿ ಬಿಚ್ಚುತ್ತಿದ್ದಾರೆ!



ಎಂ.ಕೆ.ಸೋಮಶೇಖರ್

ಮೈಸೂರು, ಮಾ.12(ಬಿಎಲ್‌ಯು)– ಲೋಕಸಭಾ ಚುನಾವಣೆಗೆ ದಿನಗಣನೆ ಆರಂಭವಾಗಿರುವ ಕಾರಣ ಬಿಜೆಪಿಯ ಮೌನಿ ಬಾಬಾಗಳು ತುಟಿ ಬಿಚ್ಚಲು ಆರಂಭಿಸಿದ್ದಾರೆ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಕಿಡಿಕಾರಿದ್ದಾರೆ.


ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾವೇರಿ ನದಿ ನೀರು ವಿವಾದ ಸೇರಿದಂತೆ ನಾಡಿನ ಜಲ,ನೆಲ ರಕ್ಷಣೆ ವಿಚಾರದಲ್ಲಿ ನ್ಯಾಯ ಕೊಡಿಸುವಲ್ಲಿ ರಾಜ್ಯದಿಂದ ಆಯ್ಕೆಯಾಗಿರುವ 25 ಬಿಜೆಪಿ ಸಂಸದರು ಸಂಪೂರ್ಣ ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದಾರೆ.

ವಿಶೇಷವಾಗಿ ಸಂಸದ ಅನಂತಕುಮಾರ್ ಹೆಗಡೆ ಕಳೆದ ಐದು ವರ್ಷಗಳ ಕಾಲ ಬೀದಿಗೆ ಬರದೆ ಈಗ ಚುನಾವಣೆ ಬಂತೆಂದು ಬಿಜೆಪಿ ಹೈಕಮಾಂಡ್ ಗಮನ ಸೆಳೆಯಲು ಸಂವಿಧಾನ ವಿರೋಧಿ ಮಾತನಾಡುತ್ತಿದ್ದಾರೆ. ಕನಿಷ್ಠ 400 ಸಂಸದರನ್ನು ಗೆಲ್ಲಿಸಿದರೆ ಮಾತ್ರ ಸಂವಿಧಾನ ಬದಲಾಯಿಸಲು ಸಾಧ್ಯ ಎಂದು ಹೇಳಿಕೆ ನೀಡಿದ್ದಾರೆ. ಇಂತಹ ಜನ ವಿರೋಧಿ ಸಂಸದನಿಗೆ ಬುದ್ಧಿ ಭ್ರಮಣೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂತಹ ಹೇಳಿಕೆ ನೀಡಿರುವ ಸಂಸದರನ್ನು ಗಡಿಪಾರು ಮಾಡಬೇಕು ಎಂದು ಆಗ್ರಹಿಸಿರುವ ಸೋಮಶೇಖರ್, ಬಿಜೆಪಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಇವರನ್ನು ಪಕ್ಷದಿಂದ ಉಚ್ಚಾಟಿಸಬೇಕು. ಇಲ್ಲದಿದ್ದರೆ ಬಿಜೆಪಿಯೇ ದೇಶ ದ್ರೋಹದ ಕೆಲಸದಲ್ಲಿ ನೇರವಾಗಿ ತೊಡಗಿದಂತಾಗುತ್ತದೆ ಎಂದು ಹೇಳಿದ್ದಾರೆ.

ಪ್ರಕೃತಿಯ ಪ್ರತಿಯೊಂದು ವಸ್ತುವಿನಲ್ಲೂ ದೇವರು ನೆಲೆಸಿರುತ್ತಾನೆ ಎಂದು ಪರಮಹಂಸ ಬಲವಾಗಿ ನಂಬಿದ್ದರು

ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅಭಿಮತ



ಮೈಸೂರು, ಮಾ.12(ಎಸ್‌ಪಿಎನ್)–ಪ್ರತಿ ಮಹಿಳೆ ಮತ್ತು ಪುರುಷರು ಪವಿತ್ರರು. ಪ್ರಕೃತಿಯ ಪ್ರತಿಯೊಂದು ವಸ್ತುವಿನಲ್ಲೂ ದೇವರು ನೆಲೆಸಿರುತ್ತಾನೆ ಎಂದು ರಾಮಕೃಷ್ಣ ಪರಮಹಂಸರು ಬಲವಾಗಿ ನಂಬಿದ್ದರು. ಆದರೆ ಎಂದಿಗೂ ತಾವು(ಶ್ರೀ ರಾಮಕೃಷ್ಣ ಪರಮಹಂಸರು) ಶ್ರೇಷ್ಠರೆಂದು ಹೇಳಿಕೊಳ್ಳಲಿಲ್ಲ ಎಂದು ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅಭಿಪ್ರಾಯಪಟ್ಟರು.

ಮೈಸೂರು–ಕೆಆರ್‌ಎಸ್ ರಸ್ತೆಯ ಯಾದವಗಿರಿಯ ಶ್ರೀ ರಾಮಕೃಷ್ಣಾಶ್ರಮದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ 189ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ 'ಭಗವಾನ್ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶ' ಕುರಿತು ವಿಶೇಷ ಉಪನ್ಯಾಸ ನೀಡುತ್ತಾ, ಕಾಳಿಮಾತೆಯನ್ನು ಸಾಮಾನ್ಯ ಮಹಿಳೆಯಂತೆ ಕಂಡು ಪೂಜಿಸಿದ ಶ್ರೀರಾಮಕೃಷ್ಣ ಪರಮಹಂಸರ ಶ್ರೇಷ್ಠತೆ, ಸರಳತೆಗೊಂದು ಸಾಕ್ಷಿ ಎಂದರು.

ದೇವರ ದರ್ಶನ ಪಡೆಯುವುದು ಮೋಕ್ಷ ಅಥವಾ ಪೂಜೆಗಳಿಂದಲ್ಲ ಅದರ ಬದಲು ನಿತ್ಯ ಕೆಲಸದ ಮೂಲಕ ದೇವರನ್ನು ಕಾಣಬೇಕು. ನಾವು ಸಮಾಜದ ಸಾಮಾನ್ಯ ಮನುಷ್ಯರಿಗೆ ತೋರುವ ದಯೆಯೇ ದೇವರಿಗೆ ತೋರುವ ಭಕ್ತಿ. ಏಕೆಂದರೆ, ದೇವರು ಎಲ್ಲರ ಹೃದಯ, ಪ್ರಕೃತಿಯಲ್ಲಿ ನೆಲೆಸಿರುತ್ತಾನೆ ಎಂದು ಬಲವಾಗಿ ನಂಬಿದ್ದರು ಹಾಗೂ ಬೇರೆಯವರಿಗೂ ಇದೇ ಸಂದೇಶ ನೀಡುತ್ತಿದ್ದರು ಎಂದು ತಿಳಿಸಿದರು.

ಅಲ್ಲದೆ, ಶಾರದಾಮಾತೆಯನ್ನೇ ಸಾಕ್ಷಾತ್ ದೇವಿ ಸ್ವರೂಪಿಣಿ ಎಂದು ಭಾವಿಸಿ, ಅವರನ್ನು ದೇವಿಯ ಸ್ಥಾನದಲ್ಲಿ ಕೂರಿಸಿ, ಪೂಜೆ ಸಲ್ಲಿಸಿ, ಇಡೀ ಜಗತ್ತಿಗೆ ಕ್ರಾಂತಿಕಾರಿ ಸಂದೇಶವನ್ನು ಸಾರಿದ ಕೀರ್ತಿ ಪರಮಹಂಸರಿಗೆ ಸಲ್ಲುತ್ತದೆ. ಎಲ್ಲಾ ಧರ್ಮಗಳೂ ಭಗವಂತನ ಸಾಕ್ಷಾತ್ಕಾರ ಪಡೆಯುವ ಮಾರ್ಗವನ್ನು ತೋರುತ್ತವೆ. ಅವು ವಿಭಿನ್ನ ಮಾರ್ಗ ಹೊಂದಿದ್ದರೂ ಕೊನೆಗೆ ದೇವರನ್ನು ಕಾಣುವುದೇ ಆಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ತಮ್ಮ ಜೀವಿತಾವಧಿಯಲ್ಲಿ ಎಲ್ಲಾ ಜೀವಿಗಳು ದೈವಿಕವಾಗಿವೆ. ದೇವರು ಎಲ್ಲಾ ಪುರುಷ, ಮಹಿಳೆ ಸೇರಿದಂತೆ ಎಲ್ಲಾ ಕಡೆ ಇದ್ದಾನೆ. ದೇವರನ್ನು ಕೆಲಸದ ಮೂಲಕ ಕಾಣಬೇಕು. ಎಲ್ಲಾ ಮಾನವರು ಸಮಾನರು ಮತ್ತು ಅಸ್ತಿತ್ವದ ಏಕತೆ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದರು. ಮನುಷ್ಯರು ಮೋಕ್ಷ ಪಡೆಯಬೇಕಾದರೆ, ಪಂಚೇಂದ್ರಿಯಗಳನ್ನು ನಿಗ್ರಹಿಸಬೇಕೆಂದು ಸ್ಪಷ್ಟ ನಿಲುವು ಹೊಂದಿದ್ದರು. ಅಂತೆಯೇ ಸ್ವಾಮಿ ವಿವೇಕಾನಂದರು ಸದಾ ಪ್ರಶ್ನಿಸುವ ಸ್ವಭಾವದವರಾಗಿದ್ದರೂ ಪರಮಹಂಸರ ತತ್ತ್ವಾದರ್ಶಗಳನ್ನು ಕಡೆಗೆ ಒಪ್ಪಿಕೊಂಡಿದ್ದರು. ಅಲ್ಲದೆ, ರಾಷ್ಟ್ರಕವಿ ಕುವೆಂಪು ಸಹ ಶ್ರೀರಾಮಕೃಷ್ಣ ಪರಮಹಂಸರ ಸಾಧನಾ ಮಾರ್ಗವನ್ನು ಒಪ್ಪಿಕೊಂಡಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು.

ಈ ವೇಳೆ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯವರು ಹಲವು ಭಕ್ತಿಗೀತೆಗಳನ್ನು ಹಾಡಿದರು. ಮಂಗಳವಾರ ಬೆಳಗ್ಗೆಯಿಂದಲೇ ಶ್ರೀರಾಮಕೃಷ್ಣ ಪರಮಹಂಸ ಜಯಂತಿ ಅಂಗವಾಗಿ ವೇದಮಂತ್ರಗಳ ಪಠಣೆ, ವಿಶೇಷ ಪೂಜೆ ನೆರವೇರಿಸಿ, ವಿಷ್ಣು ಸಹಸ್ರನಾಮ ಪಾರಾಯಣ ಮಾಡಲಾಯಿತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಮಾ.15ರಂದು ಸಂಜೆ 5.45ರಿಂದ6.45ರವರೆಗೆ ದಾವಣಗೆರೆಯ ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿ ಶ್ರೀ ತ್ಯಾಗೀಶ್ವರಾನಂದಜೀ ಅವರು 'ವಾತ್ಸಲ್ಯಮಯಿ ಶ್ರೀಮಾತೆ ಶಾರದಾದೇವಿ' ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. 6.45ರಿಂದ 8.15ರವರೆಗೆ ವಿದ್ವಾನ್ ಸುಮನ ಮತ್ತು ಶಿವರಾಮ ಅವರಿಂದ 'ಕೊಳಲು ಮತ್ತು ಮಾಂಡೊಲಿನ್' ವಾದನ ನಡೆಸಿಕೊಡಲಿದ್ದಾರೆ.

ಮಾ.16ರಂದು ಸಂಜೆ 5.45ರಿಂದ 6.45ರವರೆಗೆ 'ಆಧ್ಯಾತ್ಮಿಕ ಪರಂಪರೆಯ ವಿಶ್ವಗುರು–ಶ್ರೀರಾಮಕೃಷ್ಣ ಪರಮಹಂಸರು' ಕುರಿತು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಅಧ್ಯಾಪಕ ಎಸ್.ಎಸ್.ರಮೇಶ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. 6.45ರಿಂದ 8.15ರವರೆಗೆ ವಿದ್ವಾನ್ ಕಿಕ್ಕೇರಿ ಕೃಷ್ಣಮೂರ್ತಿ ತಂಡದಿಂದ ಭಕ್ತಿಗೀತೆ ಗಾಯನ ನಡೆಸಿಕೊಡಲಿದ್ದಾರೆ.

ಮಾ.17ರಂದು ಸಂಜೆ 5.45ರಿಂದ 6.45ರವರೆಗೆ ವಿದ್ವಾನ್ ಗುರುರಾಜ್ ತಂಡದವರಿಂದ ದಿವ್ಯತ್ರಯರ ಗಾನರಸಾಮೃತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. 6.45ರಿಂದ 8.15ರವರೆಗೆ 'ಕುವೆಂಪು ರಚಿತ ಶ್ರೀರಾಮಾಯಣ ದರ್ಶನಂ' ವಾಚನ ಮತ್ತು ವ್ಯಾಖ್ಯಾನವನ್ನು ನಂದೀಶ್ ನಡೆಸಿಕೊಡಲಿದ್ದಾರೆ.

ಮೈಸೂರು ಮಿತ್ರ ಬುಧವಾರ 13 ಮಾರ್ಚ್ 2024

ಬತ್ತುತ್ತಿರುವ ಕಾಡಿನ ಕೆರೆಗಳು

ಹನಿ ನೀರಿಗಾಗಿ ಮೂಕ ಪ್ರಾಣಿಗಳ ಪರದಾಟ



ಕೊಡಗು ಜಿಲ್ಲೆಯ ದೇವಮಚ್ಚಿ ಹಾಗೂ ನಾಗರಹೊಳೆ ವ್ಯಾಪ್ತಿಯ ಕೆರೆಗಳಿಗೆ ಟ್ಯಾಂಕರ್‌ನಿಂದ ನೀರು ತುಂಬಿಸುತ್ತಿರುವುದು.

ಮಡಿಕೇರಿ, ಮಾ.12– ಸುಡು ಬಿಸಿಲಿನ ತಾಪದಿಂದ ಮನುಷ್ಯರು ಮಾತ್ರವಲ್ಲ, ಪ್ರಾಣಿ–ಪಕ್ಷಿಗಳು ಹಾಗೂ ಜೀವ–ಸಂಕುಲಗಳು ಜೀವಜಲಕ್ಕಾಗಿ ಪರ ದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮನುಷ್ಯರೇನೋ ಧಣಿವಾರಿಸಿಕೊಳ್ಳಲು ಹಣದ ಮೂಲಕ ಇಲ್ಲವೆ, ಜಲಮೂಲ ಹುಡುಕಿ ನೀರು ಪಡೆಯಬಹುದು. ಆದರೆ, ಮೂಕ ಪ್ರಾಣಿಗಳು ಹನಿ ನೀರಿಗಾಗಿ ಜೀವವನ್ನೇ ಕಳೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗುತ್ತಿದೆ.

ಕಳೆದೊಂದು ತಿಂಗಳಿಂದ ಬಿಸಿಲಿನ ತಾಪ ತೀವ್ರವಾಗಿ ಏರತೊಡಗಿದೆ. ಅಲ್ಲದೇ, ಎಲ್ಲೆಡೆ ನೀರಿನ ಸೆಲೆಗಳು ಬತ್ತುತ್ತಿದ್ದು, ಹನಿ ನೀರಿಗೂ ಪರಿತಪಿಸಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಕಾಡಿನಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿ ಗಿಡ–ಮರಗಳು ಒಣಗಿ ಕೆರೆಗಳು ಬತ್ತಿ ಹೋಗಿವೆ. ಕಾಡನ್ನೇ ನಂಬಿ ಬದುಕು ಸಾಗಿಸುತ್ತಿರುವ ಜಲಚರಗಳು, ಕಾಡುಪ್ರಾಣಿಗಳು ಆಹಾರ ಹಾಗೂ ನೀರಿನ ಭರ್ಮೆಯಿಂದ ಹೈರಾಣಾಗಿವೆ. ಸುಮಾರು 84 ಸಾವಿರ ಹೆಕ್ಟೇರ್‌ನಲ್ಲಿರುವ ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸುಮಾರು 269 ಕೆರೆಗಳಿದ್ದು, ಹಡ್ಲು ವ್ಯಾಪ್ತಿಯಲ್ಲಿ 93 ಕೆರೆಗಳಿವೆ. ಒಟ್ಟು 362 ಕೆರೆಗಳ ಪೈಕಿ ಶೇ.40ರಷ್ಟು ಕೆರೆಗಳು ಬಿಸಿಲಿನ ತಾಪಮಾನಕ್ಕೆ ಬತ್ತಿ ಹೋಗುತ್ತಿವೆ. ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ದೇವಮಚ್ಚಿ ಹಾಗೂ ನಾಗರಹೊಳೆ ವ್ಯಾಪ್ತಿಯಲ್ಲಿ ಬತ್ತಿ ಹೋದ ಕೆರೆಗಳಿಗೆ ಸುಮಾರು 25ಕ್ಕೂ ಹೆಚ್ಚು ಟ್ಯಾಂಕರ್‌ಗಳನ್ನು ಬಳಸಿಕೊಂಡು ನೀರನ್ನು ತುಂಬಿಸಲಾಗುತ್ತಿದೆ.

> ಈ ಬಾರಿ ಕಳೆದ 4 ತಿಂಗಳಿಂದ ಮಳೆ ಬಿದ್ದಿಲ್ಲ. ಇದರಿಂದ ಹಸಿರು ಮೇವನ್ನೇ ನೆಚ್ಚಿಕೊಂಡಿರುವ ಪ್ರಾಣಿಗಳಿಗೆ ಆಹಾರಕ್ಕೆ ಕೊರತೆ ಉಂಟಾಗಿದೆ. ಬೇಸಿಗೆಯಲ್ಲಿ ಕಾಡಿನಲ್ಲಿ ಬೆಂಕಿ ಅನಾಹುತವಾಗದಿರಲೆಂದು ನಾಗರಹೊಳೆ ಹಾಗೂ ದೇವಮಚ್ಚಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ 400ಕ್ಕೂ ಹೆಚ್ಚು ಸಿಬ್ಬಂದಿಯನ್ನು ನೇಮಿಸಲಾಗಿದೆ. ಕಾಡಿನ ಬಗ್ಗೆ ನಿಗಾ ವಹಿಸಲು ಒಂದು ಥರ್ಮಲ್ ಡ್ರೋನ್ ಕ್ಯಾಮರಾ ಹಾಗೂ ಇತರ ಮೂರು ಕ್ಯಾಮರಾ ಅಳವಡಿಸಲಾಗಿದೆ.
>
> -ಹರ್ಷಕುಮಾರ್, ನಿರ್ದೇಶಕ, ನಾಗರಹೊಳೆ

ಕೂಡುಮಂಗಳೂರು ಗ್ರಾಪಂನಲ್ಲಿ ನೀರಿನ ಸಮಸ್ಯೆ

ಮಡಿಕೇರಿ, ಮಾ.12–ಕುಶಾಲನಗರ ತಾಲೂಕಿನ ಕೂಡುಮಂಗಳೂರು ಗ್ರಾಪಂ ಕೆಲ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ.

ಸುಂದರನಗರ ವ್ಯಾಪ್ತಿಯಲ್ಲಿ ಒಂದು ತಿಂಗಳಿಂದಲೂ ನೀರಿನ ಸಮಸ್ಯೆಯಿಂದ ನಿವಾಸಿಗಳು ಕಂಗಾಲಾಗಿದ್ದರು. ಸ್ಥಳೀಯ ನಿವಾಸಿಗಳು ಎದುರಿಸುತ್ತಿರುವ ನೀರಿನ ಸಮಸ್ಯೆಗೆ ಸ್ಪಂದಿಸಿದ ಕೋರೆ ನಾಗರಾಜ್ ತಮ್ಮ ಮನೆಯ ಕೊಳವೆ ಬಾವಿಯಿಂದ ಅಕ್ಕಪಕ್ಕದ ನಿವಾಸಿಗಳಿಗೆ ಉಚಿತವಾಗಿ ನೀರು ಪೂರೈಸುತ್ತಿದ್ದಾರೆ.

ಬೇಸಿಗೆಯ ಧಗೆ ದಿನೇ ದಿನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜಲಮೂಲಗಳು ಬತ್ತಿ ಹೋಗುತ್ತಿವೆ. ಅನೇಕ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ. ಕೆಲವು ಕೊಳವೆ ಬಾವಿಗಳಲ್ಲಿ ಕುಡಿಯುವ ನೀರನ್ನು ಬೇರೊಬ್ಬರಿಗೆ ನೀಡಲು ಮೀನಾಮೇಷ ಎಣಿಸುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಕೋರೆ ನಾಗರಾಜ್ ತಮ್ಮ ವ್ಯಾಪ್ತಿಗೆ ಒಳಪಡದ ಪಂಚಾಯಿತಿಯ ನಿವಾಸಿಗಳಿಗೆ ಅನೇಕ ದಿನಗಳಿಂದ ಕುಡಿಯುವ ನೀರು ಪೂರೈಸುತ್ತಿರುವುದಕ್ಕೆ ಕೂಡುಮಂಗಳೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂತೋಷ್ ಹಾಗೂ ಸ್ಥಳೀಯ ನಿವಾಸಿ ಮಂಜುನಾಥ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ವಿರಾಜಪೇಟೆ ಪುರಸಭೆಗೆ 50.33 ಲಕ್ಷ ಉಳಿತಾಯ ಬಜೆಟ್



ವಿರಾಜಪೇಟೆ ಪುರಸಭೆ ಆಡಳಿತಾಧಿಕಾರಿ ನರ್ವಾಡೆ ವಿನಾಯಕ ಕಾರ್ಭಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯಾಧಿಕಾರಿ ಚಂದ್ರುಕುಮಾರ್ ಬಜೆಟ್ ಮಂಡಿಸಿದರು.

ವಿರಾಜಪೇಟೆ, ಮಾ.12–ವಿರಾಜಪೇಟೆ ಪುರಸಭೆಯ 2024–25ನೇ ಸಾಲಿನ 50.33 ಲಕ್ಷ ರೂ. ಉಳಿತಾಯ ಬಜೆಟ್ ಅನ್ನು ಮುಖ್ಯಾಧಿಕಾರಿ ಚಂದ್ರಕುಮಾರ್ ಮಂಡಿಸಿದರು.

ಪುರಸಭೆ ಆಡಳಿತಾಧಿಕಾರಿಯಾದ ಉಪವಿಭಾಗಾಧಿಕಾರಿ ನರ್ವಾಡೆ ವಿನಾಯಕ ಕಾರ್ಭಾರಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ 2024–25ನೇ ಸಾಲಿಗೆ ಒಟ್ಟು 1352.93 ಲಕ್ಷ ರೂ. ನಿರೀಕ್ಷಿತ ಬಜೆಟ್ ಮಂಡಿಸಲಾಗಿದ್ದು, ಇದರಲ್ಲಿ ನಿರೀಕ್ಷಿತ ವೆಚ್ಚ 1302.60 ಲಕ್ಷ ರೂ. ಗಳಾಗಿವೆ.

ಪುರಸಭೆ ಸದಸ್ಯರಾದ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ನೀರಿನ ಕರ ತಿಂಗಳಿಗೆ 130 ರೂ. ಅನ್ನು ಜನರಿಂದ ಪಡೆಯಲಾಗುತ್ತಿದೆ. ವಿಶೇಷವಾಗಿ ಈ ಬಾರಿಯ ಬಜೆಟ್‌ನಲ್ಲಿ ನೀರಿನ ದರ 10 ರೂ. ಕಡಿತಗೊಳಿಸಿ, ಸರ್ಕಾರದ ಆರನೇ ಭಾಗ್ಯವಾಗಿ ಪಟ್ಟಣದ ಜನತೆಗೆ ಕುಡಿಯುವ ನೀರು ನೀಡುವಂತೆ ಒತ್ತಾಯಿಸಿದರು.

ಸದಸ್ಯ ಅಗಸ್ಟಿನ್ ಬೆನ್ನಿ ಮಾತನಾಡಿ, ನೆಹರು ನಗರ ಬಡಾವಣೆಯಲ್ಲಿ ಐದು ದಿನಕ್ಕೊಮ್ಮೆ ನೀರು ಬರುತ್ತಿದೆ. ನಾವು ಜನರಿಂದ ಹೇಗೆ ನೀರಿನ ಕರ ವಸೂಲಿ ಮಾಡುವುದು. ಕುಡಿಯುವ ನೀರಿನ ಹೊಸ ವ್ಯವಸ್ಥೆಯನ್ನು ಕೂಡಲೇ ಚಾಲನೆ ನೀಡಿ ಎಂದರು. ಮತ್ತೊಬ್ಬ ಸದಸ್ಯ ರಂಜಿ ಪೂಣಚ್ಚ ಧ್ವನಿಗೂಡಿಸಿ, ಪಟ್ಟಣಕ್ಕೆ ಸಮಗ್ರ ನೀರು ಪೂರೈಕೆಗೆ ಈಗಿನ ಯೋಜನೆಯ 58 ಕೋಟಿ ರೂ. ವೆಚ್ಚದ ಕಾಮಗಾರಿ ಮುಗಿಯಲು ಒಂದು ವರ್ಷಬೇಕು. ಅಲ್ಲಿವರೆಗೆ ನೀರಿನ ಕರ ತಗ್ಗಿಸಿ ಎಂದರು.

ನಂತರ ಸದಸ್ಯರಾದ ಮಹ್ಮದ್ ರಫಿ, ಎಸ್.ಹೆಚ್.ಮತ್ತೀನ್, ರಜನಿಕಾಂತ್, ಫಸಿಹಾ ತಬಸಮ್ ನೀರಿನ ಕರ ಸಂಬಂಧ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮುಖ್ಯಾಧಿಕಾರಿ ಚಂದ್ರಕುಮಾರ್, ನೀರಿನ ನಿರ್ವಾಹಣೆ ವೆಚ್ಚ ಅಧಿಕವಾಗಿದೆ. ವಿದ್ಯುತ್ ಶುಲ್ಕ 15 ಲಕ್ಷ ರೂ. ಆಗುತ್ತದೆ. ಆದ್ದರಿಂದ ನೀರಿನ ವೆಚ್ಚ ಕಡಿಮೆ ಮಾಡಲು ಸಾಧ್ಯವಿಲ್ಲ ಎಂದಾಗ ಬಹುತೇಕ ಸದಸ್ಯರು, 10 ರೂ. ಕಡಿತಕ್ಕೆ ಪಟ್ಟು ಹಿಡಿದ ಕಾರಣ ಆಡಳಿತಾಧಿಕಾರಿ ಒಪ್ಪಿಗೆ ನೀಡಿದರು.

ನಗರ ವ್ಯಾಪ್ತಿಯಲ್ಲಿ ಮೃತಪಟ್ಟ ಕಡುಬಡ ಕಾರ್ಮಿಕರ ಅಂತ್ಯಕ್ರಿಯೆ ನಡೆಸಲು ಇದುವರೆಗೂ ಪುರಸಭೆಯಿಂದ 2000 ರೂ. ನೀಡುತ್ತಿದೆ. ಅದು ಸಾಲದು, 3000 ರೂ. ನೀಡುವಂತೆ ಸದಸ್ಯ ಸಿ.ಕೆ.ಪೃಥ್ವಿನಾಥ್ ಒತ್ತಾಯಿಸಿದಾಗ ಸಭೆ ಒಪ್ಪಿಗೆ ನೀಡಿತು.

ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿದರು. ಸಭೆಯಲ್ಲಿ ನಗರದ ಜೈನ ಬೀದಿಯ ನಿವಾಸಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ವಿರಾಜಪೇಟೆಯ ಕೊಡಗು ಮಹಿಳಾ ಸಮಾಜದ ಮಾಜಿ ಅಧ್ಯಕ್ಷೆ ವಸಂತದೇವಿ ನೇಮಿರಾಜ್ ಅವರಿಗೆ ಸಂತಾಪ ಸೂಚಿಸಲಾಯಿತು.

ವಿದ್ಯುತ್ ಉಪಕೇಂದ್ರ ಸ್ಥಾಪನೆಯ ಟೆಂಡರ್‌ಗೆ ಸೂಚನೆ



ಭಾಗಮಂಡಲದಲ್ಲಿ ವಿದ್ಯುತ್ ಉಪಕೇಂದ್ರದ ಮೀಸಲು ಜಾಗವನ್ನು ಶಾಸಕ ಎ.ಎಸ್.ಪೊನ್ನಣ್ಣ ಪರಿಶೀಲಿಸಿದರು.

ಮಡಿಕೇರಿ, ಮಾ.12– ಭಾಗ ಮಂಡಲದ ಜನರ ಹಲವು ವರ್ಷಗಳ ಬೇಡಿಕೆಗೆ ಶಾಸಕ ಎ.ಎಸ್.ಪೊನ್ನಣ್ಣ ಸ್ಪಂದನೆ ನೀಡಿದ್ದು, ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಟೆಂಡರ್ ಪ್ರಕ್ರಿಯೆ ನಡೆಸುವಂತೆ ಸೆಸ್ಕ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭಾಗಮಂಡಲದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವ ವೇಳೆ ವಿದ್ಯುತ್ ಉಪಕೇಂದ್ರಕ್ಕಾಗಿ ಮೀಸಲಿಟ್ಟಿರುವ ಜಾಗವನ್ನು ಪರಿಶೀಲಿಸಿದರು. ಪದಕಲ್ಲು ಗ್ರಾಮದಲ್ಲಿ 3 ಎಕರೆ ಪ್ರದೇಶದಲ್ಲಿ 66/11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಯಾಗಲಿದ್ದು, ಸ್ಥಳ ಪರಿಶೀಲಿಸಿದ ಶಾಸಕರು, ಟೆಂಡರ್ ಪ್ರಕ್ರಿಯೆಗೆ ಸೂಚಿಸಿದರು. ಈ ಸಂದರ್ಭ ಶಾಸಕರ ಆಪ್ತ ಸಹಾಯಕ ಮುತ್ತಣ್ಣ ಹಾಗೂ ಕುಂದ ಚೇರಿ ಗ್ರಾಪಂ ಸದಸ್ಯ ಕೆ.ಯು. ಹಾರಿಸ್ ಪದಕಲ್ಲು ಅವರು ಯೋಜನೆ ಕುರಿತು ಮಾಹಿತಿ ನೀಡಿದರು.

ಸ್ವಿಚಿಂಗ್ ಸ್ಟೇಷನ್ ಸ್ಥಾಪನೆ ಮತ್ತು ಮುಖ್ಯ ವಿದ್ಯುತ್ ಮಾರ್ಗ ಕಾಮಗಾರಿ ಆಗುವವರೆಗೆ ಸೋಲಾರ್ ಘಟಕ ನಿರ್ಮಾಣಗೊಳ್ಳಲಿದೆ. ಹಲವು ವರ್ಷಗಳ ಬೇಡಿಕೆಯನ್ನು ಈಡೇರಿಸುತ್ತಿರುವ ಬಗ್ಗೆ ಗ್ರಾಮಸ್ಥರು ಶಾಸಕ ಪೊನ್ನಣ್ಣ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ವಿವಿಧ ಕಾಮಗಾರಿಗೆ ಚಾಲನೆ

ಮಡಿಕೇರಿ, ಮಾ.12–ನಾಪೋಕ್ಲು ವ್ಯಾಪ್ತಿಯ ಬಲ್ಲಮಾವಟಿ ಗ್ರಾಮ ಪಂಚಾಯಿತಿಯಲ್ಲಿ 1.70 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಮಂಗಳವಾರ ಚಾಲನೆ ನೀಡಿದರು.

ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ನೆರವಂಡ ಉಮೇಶ್, ಪ್ರಮುಖರಾದ ಇಸ್ಮಾಯಿಲ್, ತೆನ್ನಿರಾ ಮೈನಾ, ಬಾಚಮಂಡ ಲವಚಿನ್ನಪ್ಪ, ಅಪ್ಪಣ್ಣ, ಚೋಕಿರ ಬಾಬಿ ಭೀಮಯ್ಯ, ಮಚ್ಚುರ ರವೀಂದ್ರ, ಕೋಣಿಯಂಡ ರಾಜೀವಿ, ಮುಕ್ಕಾಟ್ಟೀರ ಸುತ ಸುಬ್ಬಯ್ಯ, ಮಣವಟ್ಟಿರ ಹರೀಶ್, ಬಾಳೆಯಡ ದೀನಾ ಪೂವಮ್ಮ, ಪಿಡಿಓ ಪೂಣಚ್ಚ, ಚೆಂಗೆಟೀರ ಕುಶಾಲಪ್ಪ, ಮಿಥುನ್, ಮಣವಟ್ಟಿರ ದಯಾ ಇದ್ದರು.

ಯುವಜನತೆ ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು



ಮಡಿಕೇರಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ಜಿಲ್ಲಾ ಮಟ್ಟದ ನೆರೆಹೊರೆಯ ಯುವ ಸಂಸತ್ತು' ಕಾರ್ಯಕ್ರಮವನ್ನು ಪ್ರಾಂಶುಪಾಲ ಪ್ರೊ.ಮೇ.ರಾಘವ ಉದ್ಘಾಟಿಸಿದರು.

ಮಡಿಕೇರಿ, ಮಾ.12– ಸುಸ್ಥಿರ ಅಭಿವೃದ್ಧಿಗೆ ಯುವ ಜನರ ಪಾತ್ರ ಪ್ರಮುಖವಾದದ್ದು. ಆ ನಿಟ್ಟಿನಲ್ಲಿ ಯುವಜನರು ನಾಯಕತ್ವ ಗುಣ ಬೆಳೆಸಿಕೊಳ್ಳು ವಂತಾಗಬೇಕು ಎಂದು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಪ್ರೊ.ಮೇ.ರಾಘವ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ಮಡಿಕೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕ, ಜಿಲ್ಲಾ ಹಾಗೂ ತಾಲೂಕು ಯುವ ಒಕ್ಕೂಟ, ಮಡಿಕೇರಿಯ ಸ್ಫೂರ್ತಿ ಯುವ ಸಂಘದ ವತಿಯಿಂದ ಮಂಗಳವಾರ ನಡೆದ 'ಜಿಲ್ಲಾ ಮಟ್ಟದ ನೆರೆಹೊರೆಯ ಯುವ ಸಂಸತ್ತು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವ ಜನರು ಭವಿಷ್ಯದ ಪ್ರಜೆಗಳು, ಜೊತೆಗೆ ಸೈನಿಕರಂತೆ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.


ಸಾಮಾಜಿಕ ಪರಿವರ್ತನೆಯಲ್ಲಿ ಯುವ ಜನರ ಪಾತ್ರ ಮಹತ್ತರವಾಗಿದೆ. ಆ ನಿಟ್ಟಿನಲ್ಲಿ ಸಮಾಜದ ಅಭಿವೃದ್ಧಿ ಮತ್ತು ಬದಲಾವಣೆಯಲ್ಲಿ ಯುವಜನತೆ ತಮ್ಮದೇ ಆದ ಪಾತ್ರ ವಹಿಸುತ್ತಾರೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವಿರಾಜಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಸಿ.ದಯಾನಂದ ಮಹಿಳಾ ಸಬಲೀಕರಣ ಕುರಿತು ಮಾತನಾಡಿ, ರಾಜ್ಯ ಸರ್ಕಾರ ಶಕ್ತಿ, ಗೃಹಲಕ್ಷ್ಮಿ, ಕೇಂದ್ರ ಸರ್ಕಾರ ನಾರಿಶಕ್ತಿ ಸ್ವ ಆಧಾರ್, ಒನ್ ಸ್ಟಾಪ್ ಸೆಂಟರ್, ಭ್ರೂಣಹತ್ಯೆ ನಿಷೇಧ, ಮಹಿಳಾ ಸಹಾಯವಾಣಿ, ಆಶ್ರಯ ಆಧಾರ, ಸುಕನ್ಯಾ ಸಮೃದ್ಧಿ ಮತ್ತಿತರ ಯೋಜನೆಗಳನ್ನು ಜಾರಿಗೊಳಿಸಿದೆ ಭಾರತ ಸಂವಿಧಾನ ಮಹಿಳೆಯರಿಗೆ ಸಮಾನತೆ ಹಾಗೂ ಸಮಾನ ಅವಕಾಶ ನೀಡಿದೆ ಎಂದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ ಮಾತನಾಡಿ, ರಾಷ್ಟ್ರದಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಯುವ ಜನರು ತಮ್ಮದೇ ಆದ ಪಾತ್ರ ವಹಿಸುತ್ತಾರೆ ಎಂದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಗಣಕಯಂತ್ರ ವಿಭಾಗದ ಉಪನ್ಯಾಸಕಿ ಡಿ.ಎಸ್. ಮಾನಸ, 'ನನ್ನ ಭಾರತ' ಕುರಿತು ಮಾತನಾಡಿದರು. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವೆಂಕಟೇಶ್ ಪ್ರಸನ್ನ, ಉಪನ್ಯಾಸಕ ಎವರೆಸ್ಟ್ ರಾಡ್ರಿಗಸ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಪಿ.ಪಿ.ಸುಕುಮಾರ್, ತಾಲೂಕು ಯುವ ಘಟಕದ ಅಧ್ಯಕ್ಷ ಬಾಳಾಡಿ ದಿಲೀಪ್ ಕುಮಾರ್, ತ್ರಿವೇಣಿ, ದೀಪ್ತಿ, ರಿಷಿತಾ ಇತರರು ಇದ್ದರು.

ಆರ್.ಧ್ರುವನಾರಾಯಣ್ ಮಾದರಿ ಜನನಾಯಕ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಣೆ
- ಹೆಗ್ಗವಾಡಿಯಲ್ಲಿ ಮೊದಲ ವರ್ಷದ ಪುಣ್ಯಸ್ಮರಣೆ



ಚಾಮರಾಜನಗರ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ನಡೆದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಧ್ರುವನಾರಾಯಣ್ ಅವರ ಸಮಾಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪ ನಮನ ಸಲ್ಲಿಸಿದರು. ಸಚಿವರಾದ ಕೆ.ವೆಂಕಟೇಶ್, ಡಾ.ಎಚ್.ಸಿ.ಮಹದೇವಪ್ಪ ಇದ್ದರು.

ಚಾಮರಾಜನಗರ, ಮಾ.12– ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಮಾದರಿ ಜನನಾಯಕರಾಗಿದ್ದರು. ಕಾಲಾನಂತರವೂ ಅವರ ಜನಪ್ರಿಯತೆ ಬೆಳೆಯುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಧ್ರುವನಾರಾಯಣ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಧ್ರುವನಾರಾಯಣ್ ಸಮಾಧಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿ ಮತ್ತು ಚಾಮರಾಜನಗರ ಜಿಲ್ಲೆಯ ಪ್ರಗತಿಗೆ ನಿರಂತರ ಪ್ರಯತ್ನ ಮಾಡಿದ್ದ ಧ್ರುವನಾರಾಯಣ್ ಜನರ ಮಧ್ಯೆ ಓಡಾಡುತ್ತಿದ್ದರು. ಇವರದ್ದು ಜನಪರ ರಾಜಕಾರಣಕ್ಕೆ ಮಾದರಿ ವ್ಯಕ್ತಿತ್ವ ಎಂದರು.

ಕಾಂಗ್ರೆಸ್ ಸಿದ್ಧಾಂತ ಮತ್ತು ಪಕ್ಷದ ಆಸ್ತಿಯಾಗಿದ್ದ ಅವರು ವಿದ್ಯಾರ್ಥಿ ಕಾಂಗ್ರೆಸ್ ಅವಧಿಯಿಂದ ಪಕ್ಷದ ಕಾರ್ಯಾಧ್ಯಕ್ಷರಾಗುವವರೆಗೂ ಬೆಳೆದರು. ಶಾಸಕರಾಗಿ, ಸಂಸದರಾಗಿ ಕ್ಷೇತ್ರದ ಅಭಿವೃದ್ಧಿಗೆ ನಿರಂತರ ಶ್ರಮಿಸಿದವರು. ಹೀಗಾಗಿ ಇವರ ಅಗಲಿಕೆ ಕೇವಲ ಕಾಂಗ್ರೆಸ್‌ಗೆ ಮಾತ್ರವಲ್ಲ, ಕನ್ನಡ ನಾಡಿಗೆ ತುಂಬಲಾರದ ನಷ್ಟವಾಗಿದೆ ಎಂದು ಭಾವುಕರಾದರು.

ರಾಜಕಾರಣಿಗೆ ಸೈದ್ಧಾಂತಿಕ ಸ್ಪಷ್ಟತೆ ಮತ್ತು ಬದ್ಧತೆ ಅತ್ಯಗತ್ಯ. ಧ್ರುವನಾರಾಯಣ್ ಅವರಿಗೆ ಇವೆರಡೂ ಇತ್ತು. ಸಮಾಜದ ಅಸಮಾನತೆ ಅಳಿಸಲು, ದುರ್ಬಲರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಕೆಲಸವನ್ನು ಅವರು ಮಾಡುತ್ತಿದ್ದರು ಎಂದರು.

ಅಂಬೇಡ್ಕರ್ ಅವರ ಸಂವಿಧಾನದ ಬಗ್ಗೆ ಧ್ರುವನಾರಾಯಣ್ ಅಪಾರವಾದ ನಂಬಿಕೆ, ಗೌರವ ಹೊಂದಿದ್ದರು. ಈಗ ಸಂವಿಧಾನವನ್ನು ಬದಲಾಯಿಸುವ ಪ್ರಯತ್ನಗಳು ನಡೆಯುತ್ತಿವೆ. ಸಂವಿಧಾನ ಉಳಿದರೆ ಮಾತ್ರ ನಾವೂ, ನೀವೂ ಉಳಿಯಲು ಸಾಧ್ಯ ಎಂದು ತಿಳಿಸಿದರು.

> ಧ್ರುವನಾರಾಯಣ್ ಅವರು ಇದ್ದಿದ್ದರೇ ವಿಧಾನಸಭೆ, ಲೋಕಸಭೆಗೆ ಆಯ್ಕೆ ಆಗುತ್ತಿದ್ದರು. ಧ್ರುವನಾರಾಯಣ್ ಜಾಗವನ್ನು ಅವರ ಪುತ್ರ ದರ್ಶನ್ ತುಂಬುತ್ತಿದ್ದಾರೆ. ಅವರಿಗೆ ನಾನು ಎಲ್ಲಾ ಸಹಕಾರ, ಬೆಂಬಲ ನೀಡುತ್ತೇನೆ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಮಾತನಾಡಿ, ಧ್ರುವನಾರಾಯಣ್ ಸಜ್ಜನ ರಾಜಕಾರಣಿಯಾಗಿದ್ದು, ಅವರು ಎಲ್ಲಾ ಪಕ್ಷದ ಕಾರ್ಯಕರ್ತರು, ಮುಖಂಡರೊಂದಿಗೆ ಸ್ನೇಹಮಯ ಸಂಬಂಧವನ್ನು ಹೊಂದಿದ್ದರು. ಅಲ್ಲದೇ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಅವರ ಕೊಡುಗೆ ಅಪಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಗಣೇಶ ಪ್ರಸಾದ್, ರವಿಶಂಕರ್, ಮಾಜಿ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಮೈಸೂರು, ಚಾಮರಾಜನಗರ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು. ನಂತರ ಎಲ್ಲಾ ಗಣ್ಯರು ಧ್ರುವನಾರಾಯಣ್ ಅವರ ಸಮಾಧಿ ಹಾಗೂ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕಾರ್ಯಕ್ರಮಕ್ಕೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಧ್ರುವನಾರಾಯಣ್ ಅವರ ಅಭಿಮಾನಿಗಳು ನೆಚ್ಚಿನ ನಾಯಕನ ಸ್ಮರಿಸಿದರು. ನಂತರ ಸಾವಿರಾರು ಜನರಿಗೆ ಅನ್ನಸಂತರ್ಪಣೆ ನಡೆಯಿತು.

ಚಾಮರಾಜನಗರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ
- ಮುಂಬರುವ ಚುನಾವಣೆಯಲ್ಲಿ ಪಕ್ಷ ಬೆಂಬಲಿಸಲು ಮನವಿ

> ಚುನಾವಣೆಗೂ ಪೂರ್ವ ನೀಡಿದ ಭರವಸೆಗಳನ್ನು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಆರಂಭದಲ್ಲೇ ಈಡೇರಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ. ಮಹಿಳೆಯರು, ಬಡವರು, ರೈತರ ಪರವಾಗಿ ಕೆಲಸ ಮಾಡಲು ರಾಜ್ಯ ಸರ್ಕಾರ ಬದ್ಧವಾಗಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಚಾಮರಾಜನಗರ ಜಿಲ್ಲೆ ರಾಜ್ಯದಲ್ಲಿ 2ನೇ ಸ್ಥಾನದಲ್ಲಿದ್ದು, ಸರಾಸರಿಯಲ್ಲಿ ಮೊದಲ ಸ್ಥಾನ ಪಡೆದಿದೆ.
>
> -ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ

> ಜಿಲ್ಲೆಯ ಇತಿಹಾಸದಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಅಭೂತಪೂರ್ವ ಕಾರ್ಯಕ್ರಮವಾಗಿದೆ. ದೇಶದಲ್ಲೇ ನುಡಿದಂತೆ ನಡೆದ ಸರ್ಕಾರ ನಮ್ಮದು. ಸಂವಿಧಾನದ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಕೆಲಸ ಮಾಡುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಇಡೀ ರಾಜ್ಯದ ಜನರಿಗೆ ತಲುಪಿಸುವ ದಿಸೆಯಲ್ಲಿ ಸರ್ಕಾರ ಯಶಸ್ವಿಯಾಗಿದೆ.
>
> -ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ



ಚಾಮರಾಜನಗರದ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವರಾದ ಕೆ.ವೆಂಕಟೇಶ್, ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ ಇದ್ದರು.

ಚಾಮರಾಜನಗರ, ಮಾ.12– ಚಾಮರಾಜನಗರ ಜಿಲ್ಲೆ ಅಭಿವೃದ್ಧಿಗೆ ರಾಜ್ಯ ಸರ್ಕಾರ ಹೆಚ್ಚಿನ ಆದ್ಯತೆ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಸಿರಿಧಾನ್ಯಗಳ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿನ ಅವಧಿಯಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದೇನೆ. ಮುಂದಿನ ದಿನಗಳಲ್ಲೂ ಜಿಲ್ಲೆಯ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದು ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ಜನರು ನಮಗೆ ಹಿಂದಿನಿಂದಲೂ ಬೆಂಬಲ ನೀಡುತ್ತಾ ಬಂದಿದ್ದಾರೆ. ಜಿಲ್ಲಾ ಕೇಂದ್ರಕ್ಕೆ ಬಂದರೆ ಅಧಿಕಾರ ಹೋಗುತ್ತದೆ ಎಂದು ಬಿಜೆಪಿಯವರು ಹೇಳುತ್ತಾರೆ. ಆದರೆ, ನಾನು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ 17 ಬಾರಿ ಭೇಟಿ ನೀಡಿದ್ದೇ, ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ 2ನೇ ಬಾರಿಗೆ ಭೇಟಿ ನೀಡುತ್ತಿದ್ದೇನೆ. ನಾನು ಇಲ್ಲಿಗೆ ಬಂದಷ್ಟು ನನ್ನ ಕುರ್ಚಿ ಗಟ್ಟಿಯಾಗುತ್ತಿದೆ ಎಂದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಮೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಅನ್ನು ಜನರು ಗೆಲ್ಲಿಸಿದ್ದಾರೆ. ಇದೇ ರೀತಿ ಜಿಲ್ಲೆಯ ಜನರು ಮುಂದೆಯೂ ಬೆಂಬಲಿಸಬೇಕು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಯಾರಾದರೂ ಆಗಲಿ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಭರವಸೆ ಈಡೇರಿಸಿದ್ದೇವೆ: ಜನರಿಗೆ ನೀಡಿದ ಭರವಸೆಯನ್ನು ಈಡೇರಿಸಿ ನುಡಿದಂತೆ ನಡೆದ ಸರ್ಕಾರ ನಮ್ಮದಾಗಿದೆ. ರಾಜ್ಯದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಬಡವರ, ದೀನ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಸಬಲೀಕರಣದ ಜೊತೆಗೆ ಹಲವಾರು ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇವೆ. ಸಾಮಾಜಿಕ ಅಸಮಾನತೆ ಹೋಗಲಾಡಿಸಿ ಬುದ್ಧ, ಬಸವ, ಅಂಬೇಡ್ಕರ್ ಅವರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಿದೆ ಎಂದರು.

ರಾಜ್ಯದಲ್ಲಿ 1.20 ಕೋಟಿ ಕುಟುಂಬಗಳ 4.5 ಕೋಟಿ ಜನರಿಗೆ ಗ್ಯಾರಂಟಿ ಯೋಜನೆಗಳಿಗಾಗಿ ಈ ವರ್ಷ 36,000 ಕೋಟಿ ರೂ. ಕೊಟ್ಟಿದ್ದೇವೆ. ಮುಂದಿನ ವರ್ಷಕ್ಕೆ 59,000 ಕೋಟಿ ರೂ. ಅನ್ನು ಗ್ಯಾರಂಟಿಗಳಿಗೆ ಮೀಸಲಿಟ್ಟಿದ್ದೇವೆ. ರಾಜ್ಯದ ಜನರ ಅಭಿವೃದ್ಧಿ ಕಾರ್ಯಗಳಿಗೆ ಒಂದು ಲಕ್ಷದ ಇಪ್ಪತ್ತು ಕೋಟಿ ರೂ. ಅನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದು ತಿಳಿಸಿದರು. ಸಮಾವೇಶದಲ್ಲಿ ಗ್ಯಾರಂಟಿ ಯೋಜನೆಯ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲಾಯಿತು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶಪ್ರಸಾದ್, ಎಂ.ಆರ್.ಮಂಜುನಾಥ್, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮರಿಗೌಡ, ಮಾಜಿ ಸಂಸದ ಶಿವಣ್ಣ, ಮಾಜಿ ಸಚಿವ ಬಿ.ಸೋಮಶೇಖರ್, ಮಾಜಿ ಶಾಸಕರಾದ ಆರ್.ನರೇಂದ್ರ, ಎಸ್.ಜಯಣ್ಣ, ಜಿ.ಎನ್.ನಂಜುಂಡಸ್ವಾಮಿ, ನಗರಸಭೆ ಸದಸ್ಯ ಸಿ.ಜಿ.ಚಂದ್ರಶೇಖರ್, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಧಾನಪರಿಷತ್ ಸದಸ್ಯರ ಕಚೇರಿ ಉದ್ಘಾಟನೆ



ಚಾಮರಾಜನಗರದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಕಚೇರಿಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಚಾಮರಾಜನಗರ, ಮಾ.12–ನಗರದ ಜಿಲ್ಲಾಡಳಿತ ಭವನದ ಮೊದಲ ಅಂತಸ್ತಿನ ಕೊಠಡಿ ಸಂಖ್ಯೆ 112ರಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಕಚೇರಿಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಇದೇ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಮೈಸೂರು–ಚಾಮರಾಜನಗರ ಜಿಲ್ಲೆಯ ಸಾರ್ವಜನಿಕರ ಅಹವಾಲು ಸ್ವೀಕರಿಸಲು ಆಗುತ್ತಿರಲಿಲ್ಲ. ಜಿಲ್ಲೆಯಲ್ಲಿ ಮೊದಲ ಬಾರಿಗೆ ಕಚೇರಿ ಆರಂಭವಾಗಿರುವುದರಿಂದ ಸಾರ್ವಜನಿಕರ ಸೇವೆಗೆ ಮತ್ತಷ್ಟು ಅನುಕೂಲವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಜಿಲ್ಲಾಡಳಿತ ಭವನದಲ್ಲಿ ಕಚೇರಿಗೆ ಜಾಗ ನೀಡಿದ್ದಾರೆ. ಇದರಿಂದ ಕಚೇರಿಗೆ ಆಗಮಿಸಿ ಸಾರ್ವಜನಿಕರು ಅಹವಾಲು ಸಲ್ಲಿಸಬಹುದು ಎಂದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್.ಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹೊಂಗನೂರು ಚಂದ್ರು, ತೋಟೇಶ್, ಮಹಮ್ಮದ್ ಅಸ್ಕರ್, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎಂ.ಶಿವಮೂರ್ತಿ, ನಂಜದೇವನಪುರ ಗ್ರಾಪಂ ಅಧ್ಯಕ್ಷ ಪಿ.ಶೇಖರ್, ಹೆಡತಲೆ ಲಿಂಗರಾಜು, ಕುಮಾರ್, ನಿಟ್ರೆ ಮಹದೇವು, ಸಿದ್ದು, ರಾಚಯ್ಯ, ಶಂಕರ್, ರಾಚಯ್ಯ, ವರಸಿಂಹ, ನಾಗಯ್ಯ, ಮಟ್ಟಲಿಂಗಯ್ಯ ಸೋಮು, ಬಾಲರಾಜ್ ಇನ್ನಿತರರಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಕುಲಗಾಣ ಗ್ರಾಮದ ಪರಿಶಿಷ್ಟ ಪಂಗಡ ಬಡಾವಣೆಯ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು. ಗ್ರಾಪಂ ಉಪಾಧ್ಯಕ್ಷೆ ಶೋಭಲತಾ, ಸದಸ್ಯರಾದ ಮಧುಚಂದ್ರ ಪ್ರಭುಸ್ವಾಮಿ, ಕಾಂಗ್ರೆಸ್ ಮುಖಂಡರಾದ ಕೆರೆಹಳ್ಳಿ ನವೀನ್, ಕಬ್ಬಹಳ್ಳಿ ಮಹೇಶ್, ಶಿವಸ್ವಾಮಿ, ದಾಸನಾಯ್ಕ, ನಾರಾಯಣನಾಯ್ಕ, ಕುಲಗಾಣ ಮಹೇಶ್ ಇದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.12–ಸಂತೇಮರಹಳ್ಳಿ ವಿದ್ಯುತ್ ಮಾರ್ಗವನ್ನು ಲಿಲೋ ಮಾರ್ಗವಾಗಿ ಮಾರ್ಪಾಡಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.14ರಂದು ಬೆಳಗ್ಗೆ 6.30 ರಿಂದ ಸಂಜೆ 5.30ರವರೆಗೆ ಸಂತೇಮರಹಳ್ಳಿ, ಮೋಳೆ, ಹೊಸಮೋಳೆ, ಕೆಂಪನಪುರ, ಚುಂಗಡಿಪುರ, ಮಹಂತಾಳಪುರ, ಹುಲ್ಲೇಪುರ, ನಡುಕಲಮೋಳೆ, ಬಸವಟ್ಟಿ, ತೆಳ್ಳನೂರು, ಕಾವುದವಾಡಿ, ಬಾಣಹಳ್ಳಿ, ಹೆಗ್ಗವಾಡಿ, ಮೂಡಲ ಅಗ್ರಹಾರ, ವಿವೇಕಾನಂದ ಕಾಲೋನಿ, ಹೆಗ್ಗವಾಡಿಪುರ, ದೇಶವಳ್ಳಿ, ಕುದೇರು, ದೇಮಹಳ್ಳಿ, ಕಮರವಾಡಿ, ಹೆಬಚಹಳ್ಳಿ, ಅಂಕಶೆಟ್ಟಿಮೋಳೆ, ದೇಮಹಳ್ಳಿಮೋಳೆ, ಕೊನ್ನುಂಡಿ ಯಲಕ್ಕೂರು, ತೆಂಕಲಮೋಳೆ, ಬಡಗಲ ಮೋಳೆ, ಅಂಬಳೆ, ಕಂದಹಳ್ಳಿ, ದುಗ್ಗಹಟ್ಟಿ, ಹೊನ್ನೂರು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್‌ನ ಚಾಮರಾಜನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಸುಪ್ರೀಂಕೋರ್ಟ್ ಛೀಮಾರಿ; ಚುನಾವಣಾ ಬಾಂಡ್‌ಗಳ ಡೇಟಾವನ್ನು ಆಯೋಗಕ್ಕೆ ಸಲ್ಲಿಸಿದ ಎಸ್‌ಬಿಐ

ನವದೆಹಲಿ, ಮಾ.12– ಸುಪ್ರೀಂಕೋರ್ಟ್‌ನ ಕಟ್ಟುನಿಟ್ಟಿನ ಆದೇಶಕ್ಕೆ ಅನುಗುಣವಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಂದು ಮುಚ್ಚಿದ ಲಕೋಟೆಯಲ್ಲಿ ಚುನಾವಣಾ ಆಯೋಗಕ್ಕೆ ಚುನಾವಣಾ ಬಾಂಡ್‌ಗಳ ಡೇಟಾ ಸಲ್ಲಿಸಿದೆ. ಬ್ಯಾಂಕ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು ನ್ಯಾಯಾಲಯದ ಆದೇಶವನ್ನು ದೃಢೀಕರಿಸುವ ಅಫಿಡವಿಟ್ ಅನ್ನು ಸಹ ಸಲ್ಲಿಸಿದ್ದಾರೆ. ನ್ಯಾಯಾಲಯದ ಆದೇಶದಂತೆ ಶುಕ್ರವಾರ ಸಂಜೆ 5 ಗಂಟೆಗೆ ಚುನಾವಣಾ ಸಮಿತಿಯು ಡೇಟಾವನ್ನು ಬಿಡುಗಡೆ ಮಾಡಲಿದೆ.

ಮೂರನೇ ಪುಟದಿಂದ

ಪೇಂಟ್ಸ್ ಬ್ರಾಂಡ್ ಆಗಿ ಪರಿವರ್ತನೆ

ಅಂತೆಯೇ ಸ್ಪರ್ಧಾತ್ಮಕ ಮಾರುಕಟ್ಟೆಗೆ ಹೊಂದಿಕೆಯಾಗುವಂತೆ ಉದ್ಯಮವನ್ನು ಮೇಲ್ದರ್ಜೆಗೆ ಏರಿಸಲಾಗುವುದು. ಕಾರ್ಖಾನೆಯು ಮನೆಗೆ ಅಗತ್ಯವಿರುವ ಬಣ್ಣಗಳ ತಯಾರಿಕೆಗೆ ಶೀಘ್ರದಲ್ಲೇ ಆರಂಭಿಸಲಿದೆ. ಇದಲ್ಲದೆ, ಕಾರ್ಖಾನೆಯಲ್ಲಿ ಶಾಲಾ ಕಾಲೇಜುಗಳು, ಹಾಸ್ಟೆಲ್‌ಗಳು ಸೇರಿದಂತೆ ಸರ್ಕಾರಿ ಕಟ್ಟಡಗಳಿಗೆ ಅಗತ್ಯವಿರುವ ಬಣ್ಣಗಳು, ಎಮಲ್ಷನ್‌ಗಳನ್ನು ತಯಾರಿಸಲು ಚಿಂತನೆ ನಡೆಸಲಾಗಿದೆ. ಇದನ್ನು ಪರಿಗಣಿಸಿ ಬಣ್ಣ ಉದ್ಯಮದ ತಜ್ಞರನ್ನು ಸಲಹೆಗಾರರನ್ನಾಗಿ ನೇಮಿಸಲು ಅನುಮತಿ ನೀಡಲಾಗಿದೆ ಎಂದು ಸಚಿವರು ಹೇಳಿದರು.

ಮನೆ ಗೋಡೆ ಬಣ್ಣ ತಯಾರಿಕೆ: ನಾನು ಮನೆಯ ಗೋಡೆಯ ಬಣ್ಣಗಳನ್ನು ತಯಾರಿಸಲು ಸಲಹೆ ನೀಡಿದ್ದೇನೆ. ಮುಕ್ತ ಮಾರುಕಟ್ಟೆಯ ಹೊರತಾಗಿ, ನಿರ್ದಿಷ್ಟವಾಗಿ ಸರ್ಕಾರಿ ಕಟ್ಟಡಗಳು, ಶಾಲೆಗಳು, ಕಾಲೇಜುಗಳು ಮತ್ತು ಹಾಸ್ಟೆಲ್‌ಗಳಿಗೆ ಬಣ್ಣ, ಎಮಲ್ಷನ್ ಇತ್ಯಾದಿಗಳನ್ನು ತಯಾರಿಸುವುದನ್ನು ಪರಿಗಣಿಸಲಾಗುತ್ತದೆ. ಈ ವಿಸ್ತರಣಾ ಯೋಜನೆಯನ್ನು ಕಾರ್ಯಗತಗೊಳಿಸಲು ಪೇಂಟ್ ಉದ್ಯಮದಲ್ಲಿ ಪರಿಣಿತ ಸಲಹೆಗಾರರನ್ನು ನೇಮಿಸಲಾಗುವುದು, MPVL ಅನ್ನು ಪ್ರಮುಖ ಬ್ರಾಂಡ್ ಆಗಿ ಸ್ಥಾಪಿಸುವ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಪ್ರಯತ್ನಗಳೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ ಎಂದರು. 'ಮೈಸೂರು ಪೇಂಟ್ಸ್' ಅನ್ನು ಬ್ರಾಂಡ್ ಆಗಿ ಅಭಿವೃದ್ಧಿಪಡಿಸುವ ಉದ್ದೇಶವನ್ನು ಸರ್ಕಾರ ಹೊಂದಿದ್ದು, ಖಾಸಗಿ ಕಂಪನಿಗಳೊಂದಿಗೆ ಪೈಪೋಟಿ ನಡೆಸುವ ಉದ್ದೇಶ ಹೊಂದಿದೆ. ಮಾರುಕಟ್ಟೆಯನ್ನು ತರ್ಕಬದ್ಧವಾಗಿ ವಿಸ್ತರಿಸಲಾಗುವುದು ಮತ್ತು ಸ್ಪರ್ಧಾತ್ಮಕ ಬೆಲೆಯಲ್ಲಿ ಬಣ್ಣಗಳನ್ನು ಲಭ್ಯವಾಗುವಂತೆ ಮಾಡಲಾಗುವುದು. KSDL ಉತ್ಪನ್ನಗಳ ಯಶಸ್ವಿ ವಿಸ್ತರಣೆಯಂತೆಯೇ MPVL ಅನ್ನು ಎತ್ತರಕ್ಕೆ ಏರಿಸಲು ಸಿದ್ಧತೆಗಳು ನಡೆಯುತ್ತಿವೆ ಎಂದು ಪಾಟೀಲ್ ವಿವರಿಸಿದರು.

ಆಧುನೀಕರಣ, ವೈವಿಧ್ಯೀಕರಣಕ್ಕೆ ನಿರ್ಣಯ

“ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಾದ ಎಂ.ಬಿ.ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಪೇಂಯಿಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ (ಮೈಲ್ಯಾಕ್)ನ ಆಡಳಿತ ಮಂಡಳಿ ಸಭೆಯಲ್ಲಿ ಸಂಸ್ಥೆಯ ಆಧುನೀಕರಣ ಹಾಗೂ ವೈವಿಧ್ಯೀಕರಣ ಸಂಬಂಧ ನಿರ್ಣಯ ಕೈಗೊಳ್ಳಲಾಗಿದೆ. ಅತ್ಯಾಧುನಿಕ ಯಂತ್ರೋಪಕರಣ ಅಳವಡಿಸುವುದು ಸೇರಿದಂತೆ ಮೊದಲು ಆಧುನೀಕರಣಕ್ಕೆ ಡಿಪಿಆರ್ ಸಿದ್ಧಪಡಿ ಸಲಾಗುತ್ತಿದೆ. ನಂತರ ಮೈಸೂರು ಪೇಂಟ್ಸ್ ಬ್ರಾಂಡ್‌ನಲ್ಲಿ ವಿವಿಧ ಉತ್ಪನ್ನಗಳನ್ನು ಪರಿಚಯಿಸಲಾಗುತ್ತದೆ. ಆರಂಭಿಕವಾಗಿ ಕಡಿಮೆ ಪ್ರಮಾಣದ ಡೆಕೊರೇಟಿವ್ ಹಾಗೂ ಎಮಲ್ಷನ್ ಪೇಂಟ್ಸ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು. ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾದರೆ ಲಭ್ಯವಿರುವ ಮೂರ್‍ನಾಲ್ಕು ಎಕರೆ ಜಾಗದಲ್ಲಿ ಸುಮಾರು 10 ಕೋಟಿ ವೆಚ್ಚದಲ್ಲಿ ಹೊಸ ಘಟಕ ಆರಂಭಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. –ಕೆ.ಮೊಹಮ್ಮದ್ ಇರ್ಫಾನ್, ವ್ಯವಸ್ಥಾಪಕ ನಿರ್ದೇಶಕ, ಮೈಲ್ಯಾಕ್

ಲೋಕಸಭಾ ಚುನಾವಣಾ ಜವಾಬ್ದಾರಿ

ಟಿಕೆಟ್ ಹಂಚಿಕೆ ಕಾರ್ಯ ಕಷ್ಟಕರವಾಗಿತ್ತಾದರೂ ಅಂತಿಮವಾಗಿ ಯಡಿಯೂರಪ್ಪ ಅವರ ಮಾತಿಗೆ ಬಿಜೆಪಿ ವರಿಷ್ಠರು ಹೆಚ್ಚು ಮನ್ನಣೆ ನೀಡಿದ್ದಾರೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ತೇಜಸ್ವಿ ಸೂರ್ಯ, ಬೆಂಗಳೂರು ಸೆಂಟ್ರಲ್ ಕ್ಷೇತ್ರದಿಂದ ಪಿ.ಸಿ.ಮೋಹನ್. ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಶೋಭಾ ಕರಂದ್ಲಾಜೆ, ತುಮಕೂರು ಕ್ಷೇತ್ರದಿಂದ ವಿ.ಸೋಮಣ್ಣ, ಶಿವಮೊಗ್ಗ ಕ್ಷೇತ್ರದಿಂದ ಬಿ.ವೈ.ರಾಘವೇಂದ್ರ, ಧಾರವಾಡ ಕ್ಷೇತ್ರದಿಂದ ಪ್ರಹ್ಲಾದ್ ಜೋಷಿ ಕಣಕ್ಕೆ ಇಳಿಯಲಿದ್ದಾರೆ.

ದಾವಣಗೆರೆಯಿಂದ ಜಿ.ಎಂ.ಸಿದ್ದೇಶ್ವರ್, ವಿಜಯಪುರದಿಂದ ಗೋವಿಂದ ಕಾರಜೋಳ್, ಕಲಬುರಗಿಯಿಂದ ಉಮೇಶ್ ಜಾಧವ್, ಚಿಕ್ಕಬಳ್ಳಾಪುರ ಡಾ.ಸುಧಾಕರ್, ಬಳ್ಳಾರಿಯಿಂದ ಶ್ರೀರಾಮುಲು, ಬಾಗಲಕೋಟೆ ಪಿ.ಸಿ ಗದ್ದಿಗೌಡರ್, ಚಿಕ್ಕೋಡಿ ಅಣ್ಣಾಸಾಹೆಬ್ ಜೊಲ್ಲೆ, ಕೊಪ್ಪಳ ಸಂಗಣ್ಣ ಕರಡಿ ಕಣಕ್ಕಿಳಿಯಲಿದ್ದು, ರಾಯಚೂರು, ಕಾರವಾರ, ಮಂಗಳೂರು, ಬೆಂಗಳೂರು ಉತ್ತರ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ವರಿಷ್ಠರಿಗೆ ಬಿಡಲಾಗಿದೆ. ಕರ್ನಾಟಕದ ಅಭ್ಯರ್ಥಿಗಳ ಪಟ್ಟಿ ಆಯ್ಕೆ ವಿಷಯದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಹಾಗೂ ಯಡಿಯೂರಪ್ಪ ಬಣಗಳ ನಡುವಣ ಸಂಘರ್ಷದಿಂದ ಬಿಜೆಪಿ ವರಿಷ್ಠರಿಗೆ ತಲೆನೋವು ಶುರುವಾಗಿತ್ತಾದರೂ ಅಂತಿಮವಾಗಿ ಯಡಿಯೂರಪ್ಪ ಅವರ ಮಾತಿಗೆ ಹೆಚ್ಚು ಮನ್ನಣೆ ದೊರೆತಿದೆ.

ಈ ಸಂದರ್ಭದಲ್ಲೂ ವರಿಷ್ಠರು ಚುನಾವಣಾ ಪೂರ್ವ ಸಮೀಕ್ಷೆ ಹಾಗೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಅಭಿಪ್ರಾಯವನ್ನೂ ಪಡೆದಿದ್ದಾರೆ.

ದಾವಣಗೆರೆ, ಚಿಕ್ಕಬಳ್ಳಾಪುರ ಸೇರಿದಂತೆ ಮೂರ್‍ನಾಲ್ಕು ಕ್ಷೇತ್ರಗಳಲ್ಲಿ ಯಡಿಯೂರಪ್ಪ ಅವರು ಸೂಚಿಸಿದ ಅಭ್ಯರ್ಥಿಗಳಿಗೆ ಅವಕಾಶ ಸಿಕ್ಕಿಲ್ಲವಾದರೂ, ಉಳಿದಂತೆ ಬಹುತೇಕ ಕ್ಷೇತ್ರಗಳಲ್ಲಿ ಯಡಿಯೂರಪ್ಪ ಅವರು ಸೂಚಿಸಿದ ಹೆಸರುಗಳಿಗೆ ಮನ್ನಣೆ ನೀಡಲಾಗಿದೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿದ್ದ ನಾಯಕರು, ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಒಂದು ಹಂತಕ್ಕೆ ಬರುತ್ತಿದ್ದಂತೆ ಎಲ್ಲರೂ ಹಿಂತಿರುಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 15 ರಂದು ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಿಗೆ ಚಾಲನೆ ನೀಡಿ, ಚುನಾವಣಾ ಪ್ರಚಾರವನ್ನೂ ಆರಂಭಿಸಲಿದ್ದಾರೆ. ರಾಜ್ಯದಲ್ಲಿ ಮೋದಿ ಅವರ ಮೊದಲ ಚುನಾವಣಾ ಪ್ರಚಾರ ಈ ಕ್ಷೇತ್ರದ ದೇವನಹಳ್ಳಿಯಲ್ಲಿ ನಡೆಯಲಿದ್ದು, ಮಾಜಿ ಸಚಿವ ಹಾಗೂ ಸ್ಥಳೀಯ ಅಭ್ಯರ್ಥಿ ಡಾ.ಕೆ.ಸುಧಾಕರ್ ಅದ್ದೂರಿಯ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಲಾಜಿಸ್ಟಿಕ್ ಪಾರ್ಕ್ ಲೋಕಾರ್ಪಣೆ

ಅಭಿವೃದ್ಧಿಯಲ್ಲಿ ಕ್ರಾಂತಿ ಉಂಟು ಮಾಡಿದೆ. ಹತ್ತು ವರ್ಷದ ನಮ್ಮ ಸರ್ಕಾರದ ಅಭಿವೃದ್ಧಿ ಟ್ರೈಲರ್ ಅಷ್ಟೆ. ನಮ್ಮ ಅಭಿವೃದ್ಧಿಯ ಕನಸು ಮತ್ತಷ್ಟು ಇದ್ದು, ಅದನ್ನು ನನಸು ಮಾಡುತ್ತೇವೆ ಎಂದು ಹೇಳಿದರು. ದೇಶದ ಇತಿಹಾಸದಲ್ಲಿ ಇಂತಹ ದೊಡ್ಡ ಪ್ರಮಾಣದ ಕಾರ್ಯಕ್ರಮ ಎಂದೂ ನಡೆದಿರಲಿಲ್ಲ. ವಿಕಸಿತ ಭಾರತದಲ್ಲಿ ನವ ನಿರ್ಮಾಣದ ಪರಿಕಲ್ಪನೆ ಸಾಕಾರಗೊಂಡಿದೆ. ಇದರಿಂದ ದೇಶದ ಪ್ರತಿಯೊಂದು ಕುಟುಂಬಕ್ಕೂ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ರೈಲ್ವೆ ವಲಯದಲ್ಲಿ ಅಭೂತಪೂರ್ವ ಯೋಜನೆಗಳನ್ನು ನಮ್ಮ ಸರ್ಕಾರ ಅನುಷ್ಠಾನಗೊಳಿಸಿದೆ. ಕರ್ನಾಟಕ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಇಂದಿನಿಂದ ಹೊಸ ವಂದೇ ಭಾರತ್ ರೈಲು ಸಂಚರಿಸುತ್ತಿದ್ದು, ರೈಲು ವೇಗ ಪ್ರಗತಿಗೆ ಇದು ಕೈಗನ್ನಡಿ ಎಂದು ನರೇಂದ್ರ ಮೋದಿ ತಿಳಿಸಿದರು. ನರೇಂದ್ರ ಮೋದಿ ಅವರ ವರ್ಚುಯಲ್ ಕಾರ್ಯಕ್ರಮದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ನಿರ್ಮಾಣದಿಂದ ಮೈಸೂರು ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಕೈಗಾರಿಕಾ ಬೆಳವಣಿಗೆಗೆ ವೇಗ ದೊರೆಯಲಿದೆ. ಇದರಿಂದ ಹೆಚ್ಚು ಉದ್ಯೋಗಾವಕಾಶ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೈರುತ್ಯ ರೈಲ್ವೆಯ ವಿಭಾಗೀಯ ನಿಯಂತ್ರಣಾಧಿಕಾರಿ ರವಿಚಂದ್ರನ್, ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾದ ಮೈಸೂರು ಕ್ಲಸ್ಟರ್ ಮುಖ್ಯಸ್ಥೆ ಗಾಯತ್ರಿ, ಪ್ರಧಾನ ವ್ಯವಸ್ಥಾಪಕ ವಿಜಯಕುಮಾರ್, ಚೆನ್ನೈ ಕ್ಲಸ್ಟರ್ ಮುಖ್ಯಸ್ಥ ಕೆ.ಶ್ರೀನಿವಾಸನ್, ಇಂಡಿಯನ್ ರೈಲ್ವೆ ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾದ ನಿವೃತ್ತ ಪ್ರಧಾನ ವ್ಯವಸ್ಥಾಪಕ ಶಶಿಧರ್ ಮಠದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗೌರವ ವಂದನೆ ಸ್ವೀಕರಿಸಿ ಮೌನವಾಗಿ ತೆರಳಿದ ಸಿದ್ದರಾಮಯ್ಯ

ಚಾಮರಾಜನಗರ ಜಿಲ್ಲಾ ಪ್ರವಾಸಕ್ಕಾಗಿ ತೆರಳುವ ಮಾರ್ಗ ಮಧ್ಯೆ ಮೈಸೂರಿಗೆ ಇಂದು ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿ, ಮೌನವಾಗಿ ತೆರಳಿದರು. ಮೈಸೂರು ವಿಮಾನ ನಿಲ್ದಾಣಕ್ಕೆ ಎರಡು ಗಂಟೆ ತಡವಾಗಿ ಆಗಮಿಸಿದ ಸಿದ್ದರಾಮಯ್ಯ ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿದ ನಂತರ ಪತ್ರಕರ್ತರ ಗ್ಯಾಲರಿ ಬಳಿ ಬಾರದೆ ನೇರವಾಗಿ ಚಾಮರಾಜನಗರದತ್ತ ತೆರಳಿದರು. ಸಾಮಾನ್ಯವಾಗಿ ವಿಮಾನ ನಿಲ್ದಾಣದ ದ್ವಾರದಿಂದ ನೇರವಾಗಿ ಪತ್ರಕರ್ತರ ಗ್ಯಾಲರಿಗೆ ಬರುತ್ತಿದ್ದ ಸಿದ್ದರಾಮಯ್ಯ ಇಂದು ಪತ್ರಕರ್ತರತ್ತ ಸುಳಿಯಲೂ ಇಲ್ಲ, ಮಾತು ಆಡಲಿಲ್ಲ. ಗಂಭೀರವಾಗಿದ್ದ ಸಿದ್ದರಾಮಯ್ಯ ಅಲ್ಲಿ ಸೇರಿದ್ದ ಕಾಂಗ್ರೆಸ್ ಮುಖಂಡರ ಬಳಿಯು ಹೋಗದೆ ಕಾರು ಹತ್ತಿದರು. ಸಿದ್ದರಾಮಯ್ಯ ಹೀಗೇಕೆ ಮಾಡಿದರು ಎಂಬ ಪ್ರಶ್ನೆ ಸಹಜ ಕುತೂಹಲಕ್ಕೆಡೆ ಮಾಡಿತು.

ಶೀಘ್ರವೇ ಕಸ್ಟಮ್ಸ್ ಕಚೇರಿ ಆರಂಭ

ಉಳಿತಾಯವಾಗಲಿದೆ ಎಂದು ವಿಜಯಕುಮಾರ್ ತಿಳಿಸಿದರು. ಒಂದು ದಿನಕ್ಕೆ ಕನಿಷ್ಠ 300 ಕಂಟೈನರ್‌ಗಳ ಸಾಗಾಟ ಮಾಡಬಹುದು. ಅಂದರೆ ತಿಂಗಳಿಗೆ ಕನಿಷ್ಠ 12 ಸಾವಿರಕ್ಕೂ ಮೀರಿ ಕಂಟೈನರ್‌ಗಳನ್ನು ಕಳುಹಿಸಬಹುದು ಎಂದು ವಿವರಿಸಿದರು.

ಮೈಸೂರು ಮಾತ್ರವಲ್ಲದೆ ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಹಾಗೂ ಕೇರಳದ ಉತ್ತರ ಭಾಗದ ಜಿಲ್ಲೆಗಳ ಕೈಗಾರಿಕೋದ್ಯಮಿಗಳಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರಿನ ಲಾಜಿಸ್ಟಿಕ್ ಪಾರ್ಕ್‌ನಲ್ಲೆ ಕೆಲವೇ ತಿಂಗಳಲ್ಲಿ ಕೋಲ್ಡ್ ಸ್ಟೋರೇಜ್ ಕೂಡ ನಿರ್ಮಾಣ ಮಾಡಲಾಗುವುದು ಎಂದರು. ಬೆಂಗಳೂರಿನ ವೈಟ್ ಫೀಲ್ಡ್ ನಂತರ, ಕರ್ನಾಟಕದ ಎರಡನೇ ಲಾಜಿಸ್ಟಿಕ್ ಪಾರ್ಕ್ ಇದಾಗಿದೆ ಎಂದು ವಿಜಯಕುಮಾರ್ ತಿಳಿಸಿದರು.

ಕರ್ನಾಟಕವನ್ನು ಶ್ರವಣ ದೋಷ ಮುಕ್ತ ರಾಜ್ಯ ಮಾಡುತ್ತೇವೆ

ಕಾಕ್ಲಿಯರ್ ಇಂಪ್ಲಾಂಟ್ 'ಶ್ರವಣ ಸಂಜೀವಿನಿ' ಎಂದು ಮರುನಾಮಕರಣ ಮಾಡಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಮೈಸೂರು, ಮಾ. 12(ಆರ್‌ಕೆ)– ಕರ್ನಾಟಕವನ್ನು ಶ್ರವಣ ದೋಷ ಮುಕ್ತ ರಾಜ್ಯವನ್ನಾಗಿ ಮಾಡುವುದೇ ಸರ್ಕಾರದ ಉದ್ದೇಶವಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯಲ್ಲಿ ಇಂದು ಏರ್ಪಡಿಸಿದ್ದ ವಿಶ್ವ ಶ್ರವಣ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಬಳಿಕ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯನ್ನು 'ಶ್ರವಣ ಸಂಜೀವಿನಿ' ಎಂದು ಮರುನಾಮಕರಣ ಮಾಡಿ ಮಾತನಾಡಿದ ಅವರು, ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಮೂಲಕ ರಾಜ್ಯವನ್ನು ಶ್ರವಣ ದೋಷ ಮುಕ್ತಗೊಳಿಸುತ್ತೇವೆ ಎಂದರು.

ಹುಟ್ಟುವಾಗಲೇ ಕಿವುಡುತನ ಸಮಸ್ಯೆಯಾದಲ್ಲಿ ಅದರ ನಿವಾರಣೆಗೆ ವಿಶೇಷ ಚಿಕಿತ್ಸೆ ಬೇಕು. ಅದಕ್ಕೆ ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂ. ಖರ್ಚಾಗುತ್ತದೆ. ಅದಕ್ಕಾಗಿಯೇ ಮುಖ್ಯಮಂತ್ರಿಯವರು 2016ರಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯನ್ನು ಆರಂಭಿಸಿದ್ದರು. 2023–24ನೇ ಸಾಲಿನಲ್ಲಿ ರಾಜ್ಯಾದ್ಯಂತ 353 ಶಸ್ತ್ರಚಿಕಿತ್ಸೆ ಮಾಡಿದ್ದು, ದೇಶದಲ್ಲೇ ಕರ್ನಾಟಕ ಇಂಪ್ಲಾಂಟ್ ಸರ್ಜರಿಯಲ್ಲಿ ಮೊದಲ ಸ್ಥಾನದಲ್ಲಿದೆ ಎಂದರು.



ಮೈಸೂರಿನ ಆಯಿಷ್ ಸಂಸ್ಥೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ 'ಶ್ರವಣ ಸಂಜೀವಿನಿ' ಯೋಜನೆಯ ಮರುನಾಮಕರಣ ಫಲಕ ಅನಾವರಣಗೊಳಿಸಿ, ಕಿಟ್‌ಗಳನ್ನು ವಿತರಿಸಿದರು. ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಇಂಪ್ಲಾಂಟ್ ಸರ್ಜನ್ ಡಾ.ಶಂಕರ ಮಡಿಕೇರಿ, ಆಯಿಷ್ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ, ನೋಡಲ್ ಅಧಿಕಾರಿ ಡಾ.ನವೀನ್, ಆರೋಗ್ಯ ಇಲಾಖೆ ನಿರ್ದೇಶಕಿ ಡಾ.ಬಿ.ಎಸ್.ಪುಷ್ಪಲತಾ, ಉಪನಿರ್ದೇಶಕಿ ಡಾ.ಬಿ.ಆರ್.ಚಂದ್ರಿಕಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಆಯಿಷ್ ಸಂಸ್ಥೆ ಸಹಯೋಗದೊಂದಿಗೆ 12 ಸರ್ಕಾರಿ ಆಸ್ಪತ್ರೆ ಸೇರಿದಂತೆ ರಾಜ್ಯದ 27 ಆಸ್ಪತ್ರೆಗಳಲ್ಲಿ ಈ ಸರ್ಜರಿ ಮಾಡಲಾಗುತ್ತಿದೆ. ಸರಿಯಾಗಿ ತಪಾಸಣೆ ಮಾಡಿ, ಸಮಸ್ಯೆ ಕಂಡುಹಿಡಿದು ಚಿಕಿತ್ಸೆ ನೀಡಿದಲ್ಲಿ ಮಗು ಸಾಮಾನ್ಯರಂತೆ ಮಾತನಾಡುವ ಸ್ಥಿತಿಗೆ ತಲುಪಿ ಸಹಜ ಜೀವನ ನಡೆಸಬಹುದು. ಆ ಕಾರಣಕ್ಕಾಗಿಯೇ ಈ ಯೋಜನೆಗೆ 'ಶ್ರವಣ ಸಂಜೀವಿನಿ' ಎಂದು ಮರುನಾಮಕರಣ ಮಾಡಿದ್ದೇವೆ ಎಂದರು.

ಆಯ್ದ ಫಲಾನುಭವಿಗಳಿಗೆ ಹಿಯರಿಂಗ್ ಏಡ್ಸ್ ಮತ್ತು ಕಾಕ್ಲಿಯರ್ ಇಂಪ್ಲಾಂಟ್ ಕಿಟ್‌ಗಳನ್ನು ಸಚಿವರು ಕಾರ್ಯಕ್ರಮದಲ್ಲಿ ವಿತರಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.

“ ಎಂಟು ತಿಂಗಳಿಂದ ಆರು ವರ್ಷದೊಳಗಿನ ಮಕ್ಕಳಿಗೆ ತಜ್ಞರಿಂದ ತಪಾಸಣೆ ನಡೆಸಿ ಸಮಸ್ಯೆ ಗುರುತಿಸಿ ಈ ಯೋಜನೆಯಡಿ ಚಿಕಿತ್ಸೆ ನೀಡಿ, ಮಾತು ಬಾರದ ತೊಂದರೆ ಪರಿಹರಿಸಲಾಗುತ್ತಿದೆ. ಆದ್ದರಿಂದ ಪೋಷಕರು ಆತಂಕಪಡಬೇಕಾಗಿಲ್ಲ. –ದಿನೇಶ್ ಗುಂಡೂರಾವ್.

ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಆಯಿಷ್ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ, ಕಾಕ್ಲಿಯರ್ ಇಂಪ್ಲಾಂಟ್ ಯೋಜನೆ ನಿರ್ದೇಶಕಿ ಡಾ.ಬಿ.ಆರ್.ಚಂದ್ರಿಕಾ, ಆರೋಗ್ಯ ಇಲಾಖೆ ನಿರ್ದೇಶಕಿ ಡಾ.ಪುಷ್ಪಲತಾ, ನೋಡಲ್ ಅಧಿಕಾರಿ ಡಾ.ನವೀನ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ಕಾಕ್ಲಿಯರ್ ಇಂಪ್ಲಾಂಟ್ ಸರ್ಜರಿ ತಜ್ಞ ಡಾ. ಶಂಕರ ಮಡಿಕೇರಿ, ಡಾ.ರೂಪಾಗೌಡ, ಡಾ. ವಿ. ವೀಣಾ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾಕ್ಲಿಯರ್ ಇಂಪ್ಲಾಂಟ್ ಸ್ಕ್ರೀನಿಂಗ್, ಕೇರ್ ಅಂಡ್ ಮೇಂಟೆನೆನ್ಸ್, ಟ್ರಬಲ್ ಶೂಟಿಂಗ್, ಅಪ್‌ಗ್ರೇಡೇಷನ್ ಮಕ್ಕಳ ತರಬೇತಿಯಲ್ಲಿ ತಂದೆ–ತಾಯಿ, ಪೋಷಕರ ಪಾತ್ರ ಕುರಿತಂತೆ ಇದೇ ಸಂದರ್ಭ ತಜ್ಞರು ತರಬೇತಿ ನೀಡಿದರು.

ಕೇಂದ್ರ ಸರ್ಕಾರದ ವಿರುದ್ಧ ಭಾರತ ಕಮ್ಯೂನಿಸ್ಟ್ ಪಕ್ಷ ಪ್ರಚಾರಾಂದೋಲನ

ಮೈಸೂರು, ಮಾ.12(ಜಿಎ)–ಮೋದಿ ಸರ್ಕಾರ ರೈತ–ಕಾರ್ಮಿಕ ಜನ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ವತಿಯಿಂದ ಗಾಂಧಿವೃತ್ತದಲ್ಲಿ ಪ್ರಚಾರಾಂದೋಲನ ನಡೆಸಲಾಯಿತು.

ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಪ್ರಚಾರಾಂದೋಲನಕ್ಕೆ ಚಾಲನೆ ನೀಡಿ ಮಾತನಾಡಿ, ಜಾತ್ಯಾತೀತ, ಸೌಹಾರ್ದ, ಬಹುತ್ವದ ಭಾರತವನ್ನು ನಾಶ ಮಾಡಿದ್ದೇ ಮೋದಿಯವರ ಹತ್ತು ವರ್ಷದ ಸಾಧನೆ. ನಮ್ಮ ದೇಶದ ಸಂಪತ್ತು ಇಂದು ನಮ್ಮದಲ್ಲ. ಅವೆಲ್ಲವನ್ನೂ ಅವರ ಇಬ್ಬರು ಸ್ನೇಹಿತರಿಗೆ ಮಾರಾಟ ಮಾಡಿದ್ದಾರೆ. ಜನಪರವಾಗಿ ಕೆಲಸ ಮಾಡದೇ ಸುಳ್ಳು ಹೇಳಿಕೊಂಡು, ವಿವಿಧ ವೇಷ ಹಾಕಿಕೊಂಡು ನಟನೆಯಲ್ಲಿ ಮುಳುಗಿದ್ದಾರೆ ಎಂದು ಟೀಕಿಸಿದರು.



ಮೈಸೂರಿನ ಗಾಂಧಿ ವೃತ್ತದ ಬಳಿ ಕೇಂದ್ರ ಸರ್ಕಾರದ ವಿರುದ್ಧ ಭಾರತ ಕಮ್ಯೂನಿಸ್ಟ್ ಪಕ್ಷ ಮಂಗಳವಾರ ಪ್ರಚಾರಾಂದೋಲನ ನಡೆಸಿತು.

ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲ. ನಾವು ತಿನ್ನಲ್ಲ, ತಿನ್ನುವುದಕ್ಕೆ ಬಿಡುವುದಿಲ್ಲ ಎಂದು ಹೇಳಿ ಕೋಟ್ಯಾಧಿಪತಿಗಳ ಸಾಲಮನ್ನಾ ಮಾಡಿ ದೇಶ ಬಿಟ್ಟು ಓಡಿ ಹೋಗುವಂತೆ ಮಾಡಿದ್ದಾರೆ. ಇಂತಹ ಸಂಧರ್ಭದಲ್ಲಿ ಇವರಿಂದ ದೇಶ, ಸಂವಿಧಾನ, ಪ್ರಜಾಪ್ರಭುತ್ವ ಉಳಿಸಬೇಕಿದೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಸೋಲಿಸಿ ದೇಶವನ್ನು ರಕ್ಷಿಸಬೇಕಿದೆ ಎಂದರು.

ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ಮಾತನಾಡಿ, ಕೇಂದ್ರ ಸರ್ಕಾರದ ವಿಕಸಿತ ಭಾರತ ಎನ್ನುವ ಸುಳ್ಳು ಪ್ರಚಾರದಲ್ಲಿ ಮುಳುಗಿದೆ. ಆದರೆ, ಅವರ ವಿಕಸಿತ ಭಾರತದಲ್ಲಿ ಎರಡು ಕೋಟಿ ಉದ್ಯೋಗ ಎಲ್ಲಿದೆ? ಬೆಲೆ ಏರಿಕೆ ನಿಯಂತ್ರಣ ಎಲ್ಲಿದೆ? ರೈತರ ಬೆಳೆಗಳಿಗೆ ಸ್ವಾಮಿ ನಾಥನ್ ಆಯೋಗದ ವರದಿಯಂತೆ ಬೆಲೆ ನಿಗದಿ ಮಾಡುವ ಕಾನೂನು ಮಾಡಲು ಸಾಧ್ಯವಾಗದಿರುವಾಗ ವಿಕಸಿತ ಭಾರತ ಹೇಗೆ ಸಾಧ್ಯ? ಒಂದು ದೇಶ ಒಂದು ತೆರಿಗೆ ಎಂದು ಹೇಳಿ ಎಲ್ಲದಕ್ಕೂ ತೆರಿಗೆ ವಿಧಿಸಿ ಈಗ ನಮ್ಮ ತೆರಿಗೆ ಪಾಲನ್ನು ನೀಡದೇ ಸೇಡಿನ ರಾಜಕಾರಣ ಮಾಡುತ್ತಿದೆ. ಈ ಕುರಿತು ಜಾಗೃತಿ ಮೂಡಿಸಲು ಪ್ರಚಾರಾಂದೋಲನ ನಡೆಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಲ.ಜಗನ್ನಾಥ್, ಜಿ.ಜಯರಾಂ, ಎನ್.ವಿಜಯ್‌ಕುಮಾರ್, ಸ್ಥಳೀಯ ಸಮಿತಿ ಕಾರ್ಯದರ್ಶಿ ಜಿ.ರಾಜೇಂದ್ರ, ಸದಸ್ಯರಾದ ಸುಬ್ರಹ್ಮಣ್ಯ, ಬಾಲಾಜಿ, ಬಲರಾಂ, ಕೃಷ್ಣಪ್ಪ, ರಾಘವೇಂದ್ರ, ವರುಣಾ ನಾಗರಾಜ್, ಶಶಿಕುಮಾರ್ ಹಲವರು ಭಾಗವಹಿಸಿದ್ದರು.

ಕಾವೇರಿ ಕ್ರಿಯಾ ಸಮಿತಿಯಿಂದ ಮಾ.15ರಂದು ನೀರಾವರಿ ಕಚೇರಿಗೆ ಮುತ್ತಿಗೆ

ಮೈಸೂರು, ಮಾ.12(ಜಿಎ)–ಕಾವೇರಿ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದ್ದು, ಇದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ಹೋರಾಟ ನಡೆಸಲು ಸಿದ್ಧವಾಗದ ಹಿನ್ನೆಲೆಯಲ್ಲಿ ಮಾ.15ರಂದು ಶುಕ್ರವಾರ ಬೆಳಗ್ಗೆ 11 ಗಂಟೆಗೆ ನಗರದ ಕೆಆರ್‌ಎಸ್ ರಸ್ತೆಯಲ್ಲಿನ ನೀರಾವರಿ ಕಚೇರಿಗೆ ಮುತ್ತಿಗೆ ಹಾಕಿ ಅಂದು ಕಚೇರಿ ಬಂದ್ ಮಾಡಿಸುವುದಾಗಿ ಸಮಿತಿ ಅಧ್ಯಕ್ಷ ಜಯಪ್ರಕಾಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬರ ಪರಿಸ್ಥಿತಿ ಇದ್ದು, ನೀರಿನ ಕೊರತೆ ಇರುವುದರ ನಡುವೆಯೂ ತಮಿಳುನಾಡಿಗೆ ಕೆಆರ್‌ಎಸ್‌ನಿಂದ ನೀರು ಹರಿಸುತ್ತಿರುವ ಮಾಹಿತಿ ಬಂದಿರುವುದು ಆತಂಕದ ವಿಷಯವಾಗಿದೆ. ಈ ಮೊದಲು ತಮಿಳುನಾಡಿಗೆ ನೀರು ಹರಿಸುವುದರ ವಿರುದ್ಧ ನಡೆಸಿದ ಹೋರಾಟ, ಕರೆ ನೀಡಿದ್ದ ಬಂದ್ ಸಮಯದಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡಿದ್ದರೆ ಈಗಿನ ಕುಡಿಯುವ ನೀರಿಗೂ ತತ್ವಾರ ಪಡಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ. ಕೇಂದ್ರ ಸರ್ಕಾರ ಸಹಾ ಕೂಡಲೇ ಮಧ್ಯಪ್ರವೇಶಿಸಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವುದಕ್ಕೆ ತಡೆಯಬೇಕು ಎಂದು ಮನವಿ ಮಾಡಲಾಗುವುದು ಎಂದರು.

ಸುರೇಶ್‌ಗೌಡ ಮಾತನಾಡಿ, ಸಂಸದ ಪ್ರತಾಪ್‌ಸಿಂಹ ಮಾತೆತ್ತಿದರೆ ಕಾವೇರಿ ತಾಯಿಯ ಆಶೀರ್ವಾದ ತಮಗಿದೆ ಎನ್ನುತ್ತಾರೆ. ಆದರೆ, ಕಾವೇರಿ ನೀರಿಗಾಗಿ ನಡೆದಿರುವ ಹೋರಾಟದಲ್ಲಿ ಒಂದು ದಿನವೂ ಭಾಗವಹಿಸದಿರುವುದು ಬೇಸರದ ಸಂಗತಿಯಾಗಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಮೂಗೂರು ನಂಜುಂಡಸ್ವಾಮಿ, ವರಕೋಡು ಕೃಷ್ಣಪ್ಪ, ತೇಜೇಶ್ ಲೋಕೇಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಮಾ.12– ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ 2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸುವ ಅವಧಿಯನ್ನು ಮಾ.20ರವರೆಗೆ ವಿಸ್ತರಿಸಲಾಗಿದೆ. 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.ssp.postmatric.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು ಎನ್‌ಪಿಸಿಐ (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ರಲ್ಲಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯ. ಹೆಚ್ಚಿನ ಮಾಹಿತಿಗೆ ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1ರವರ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು.

ಇಬ್ಬರು ನಾಪತ್ತೆ



ಜಾಹಿದಾಬಿ



ಮುನಾವರ್

ಮೈಸೂರು,ಮಾ.12–ಪ್ರತ್ಯೇಕ ಪ್ರಕರಣಗಳಲ್ಲಿ ಮಹಿಳೆ ಸೇರಿದಂತೆ ಇಬ್ಬರು ನಾಪತ್ತೆಯಾಗಿರುವ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗೌಸಿಯಾನಗರ ನಿವಾಸಿ ಜಾಹಿದಾಬಿ (45) ಎಂಬುವರು ಕಳೆದ ಜ.27ರಿಂದ ನಾಪತ್ತೆಯಾಗಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಮುನಾವರ್ ಪಾಷ ಎಂಬುವರ ಪುತ್ರ ಮನ್ಸೂರ್ ಪಾಷ (26) ಕಳೆದ ಫೆ.23ರಿಂದ ನಾಪತ್ತೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ. 0821–2418309 ಸಂಪರ್ಕಿಸಲು ಉದಯಗಿರಿ ಠಾಣೆ ಪೊಲೀಸರು ಕೋರಿದ್ದಾರೆ.

ಆರೋಪಿ ಸೆರೆ: 2 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಮೈಸೂರು,ಮಾ.12(ಆರ್‌ಕೆ)–ಪ್ರಯಾಣಿಕರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಆಭರಣ ಕಳವು ಮಾಡಿದ್ದ ಮಹಿಳಾ ಆರೋಪಿಯನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ಉದಯಗಿರಿ ನಿವಾಸಿ ಆಸ್ಮಾ ಬಂಧಿತ ಆರೋಪಿಯಾಗಿದ್ದು, ಈಕೆಯಿಂದ ಎರಡು ಲಕ್ಷ ರೂ. ಮೌಲ್ಯದ 35 ಗ್ರಾಂ ಚಿನ್ನದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಾರ್ಚ್ 7ರಂದು ಹಾರ್ಡಿಂಜ್ ಸರ್ಕಲ್‌ನಲ್ಲಿರುವ ಬಸ್ ಪ್ರಯಾಣಿಕರ ತಂಗುದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ಮಹಿಳಾ ಪ್ರಯಾಣಿಕರ ವ್ಯಾನಿಟಿ ಬ್ಯಾಗ್‌ನಿಂದ ಆಭರಣ ಎಗರಿಸಿದ್ದ ಆರೋಪಿಯನ್ನು ಅಂದೇ ಬಂಧಿಸಿ, ಕಳವು ಮಾಡಿದ್ದ 35 ಗ್ರಾಂ ಆಭರಣವನ್ನು ನಜರ್‌ಬಾದ್ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಸಬ್‌ಇನ್ಸ್‌ಪೆಕ್ಟರ್ ಶ್ರೀನಿವಾಸ ಪಾಟೀಲ್ ಹಾಗೂ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಮಾ.20ರಿಂದ ರಂಗ, ಜಾನಪದ ನೃತ್ಯಗಳ ತರಬೇತಿ ಶಿಬಿರ

ಮೈಸೂರು: ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಮಾ.20ರಿಂದ 31ರವರೆಗೆ 11 ದಿನಗಳ ಕಾಲ ರಂಗಭೂಮಿ, ಜಾನಪದ ನೃತ್ಯಗಳ ತರಬೇತಿ ಶಿಬಿರ (ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಮಾರಿ ಕುಣಿತ, ಕೋಲಾಟ)ವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಪ್ರತಿದಿನ ಸಂಜೆ 4.30 ರಿಂದ 6ರವರೆಗೆ ನಡೆಯಲಿದೆ. ಮಾಹಿತಿಗೆ ಮೊ.7019441509 ಸಂಪರ್ಕಿಸಬಹುದು.

ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ

ಮೈಸೂರು,ಮಾ.12–ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ಮತ್ತು ಶ್ರೀ ಸತ್ಯನಾರಾಯಣ ಸನ್ನಿಧಿ ಶ್ರೀ ಅಮೃತೇಶ್ವರ ದೇವಸ್ಥಾನದ ಆಶ್ರಯದಲ್ಲಿ ಮಾ.14 ರಿಂದ 21 ದಿನಗಳ ಕಾಲ ಅಕ್ಯೂಪ್ರೆಶರ್, ಸುಜೋಕ್ ಮತ್ತು ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 10.30 ರಿಂದ ಸಂಜೆ 6.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9845182716, 7892798768 ಸಂಪರ್ಕಿಸಬಹುದು.

ಗದಗದಲ್ಲಿ ಕಾಂಗ್ರೆಸ್ ಕಾರ್ಯಕರ್ತನನ್ನು ಅಟ್ಟಾಡಿಸಿ ಕೊಂದು ಮರಕ್ಕೆ ನೇತು ಹಾಕಿದ ದುಷ್ಕರ್ಮಿಗಳು

ಗದಗ: ಕಾಂಗ್ರೆಸ್ ಕಾರ್ಯಕರ್ತನೊಬ್ಬನನ್ನು ದುಷ್ಕರ್ಮಿಗಳು ಅಟ್ಟಾಡಿಸಿ ಕೊಂದು ಮರಕ್ಕೆ ನೇತು ಹಾಕಿರುವ ಭೀಕರ ಘಟನೆ ನಡೆದಿದೆ. ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ಬಳಿ ಜಮೀನೊಂದರಲ್ಲಿ ಮರಕ್ಕೆ ನೇತು ಹಾಕಿದ ಸ್ಥಿತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಶವ ಪತ್ತೆಯಾಗಿದೆ. ಕೊಲೆಯಾದ ವ್ಯಕ್ತಿಯನ್ನು ಕಾಂಗ್ರೆಸ್ ಪಕ್ಷದ ಸಾಮಾಜಿಕ ಜಾಲತಾಣದ ಪ್ರಮುಖ ಕಾರ್ಯಕರ್ತ ಡೋಣಿ ಗ್ರಾಮದ ಶರಣಪ್ಪ ಸಂದಿಗೌಡ್ರ ಎಂದು ತಿಳಿದುಬಂದಿದೆ. ಕೊಲೆಗೂ ಮುನ್ನ ಶರಣಪ್ಪ ಸಂದಿಗೌಡ್ರರನ್ನು ಅಟ್ಟಾಡಿಸಿಕೊಂಡು ಹೋಗಿ ಕಣ್ಣಿಗೆ ಖಾರದ ಪುಡಿ ಎರಚಿ ಕೊಲೆ ಮಾಡಿ ನಂತರ ಮರಕ್ಕೆ ನೇತು ಹಾಕಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಮುಂಡರಗಿ ಠಾಣೆಯ ಇನ್ಸ್‌ಪೆಕ್ಟರ್ ಮಂಜುನಾಥ್ ಕುಸುಗಲ್ಲ ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇಂದು ಡಂಬಳದಲ್ಲಿ ಕಾಂಗ್ರೆಸ್ ಪಕ್ಷದಿಂದ ಗ್ಯಾರಂಟಿ ಫಲಾನುಭವಿಗಳ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಈ ಮಧ್ಯೆ ಕಾಂಗ್ರೆಸ್ ಕಾರ್ಯಕರ್ತರನ ಹತ್ಯೆ ಕಾರ್ಯಕರ್ತರಲ್ಲಿ ಆತಂಕ ಮನೆ ಮಾಡಿದೆ.

ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಐಎಎಫ್ ವಿಮಾನ ಪತನ; ಪೈಲಟ್ ಪ್ರಾಣಾಪಾಯದಿಂದ ಪಾರು

ಜೈಸಲ್ಮೇರ್: ರಾಜಸ್ಥಾನದ ಜೈಸಲ್ಮೇರ್‌ನ ಮರುಭೂಮಿ ವಲಯದಲ್ಲಿ ಭಾರತೀಯ ವಾಯುಪಡೆ(ಐಎಎಫ್)ಯ ಯುದ್ಧ ವಿಮಾನವೊಂದು ಮಂಗಳವಾರ ಪತನವಾಗಿದ್ದು, ಅದೃಷ್ಟವಶಾತ್ ಪೈಲಟ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭಾರತೀಯ ವಾಯುಪಡೆಯ ಲಘು ಯುದ್ಧ ವಿಮಾನ(ಎಲ್‌ಸಿಎ) ತೇಜಸ್ ಇಂದು ತರಬೇತಿ ಕಾರ್ಯಾಚರಣೆಯ ಸಮಯದಲ್ಲಿ ಜೈಸಲ್ಮೇರ್ ಬಳಿ ಪತನಗೊಂಡಿದೆ. ಪೈಲಟ್ ಸುರಕ್ಷಿತವಾಗಿ ಹೊರ ಬಂದಿದ್ದಾರೆ. ಅಪಘಾತದ ಕಾರಣವನ್ನು ಕಂಡುಹಿಡಿಯಲು ಉನ್ನತ ಮಟ್ಟದ ತನಿಖೆಗೆ ಐಎಎಫ್ ಆದೇಶಿಸಿದೆ.

ಸೇಫಿಯಂಟ್ ಕಾಲೇಜಲ್ಲಿ ದಯಾ ಗೋಡೆ ಅನಾವರಣ; ವಾರ್ತಾ ಪತ್ರಿಕೆ ಬಿಡುಗಡೆ

ಯುವ ಸಮೂಹದಲ್ಲಿ ಇನ್ನೊಬ್ಬರಿಗೆ ನೆರವಾಗುವ ಗುಣ ಬೆಳೆಸಲು ಸಹಕಾರಿ

ಮೈಸೂರು,ಮಾ.12–ವಿದ್ಯಾರ್ಥಿಗಳಲ್ಲಿ ಈಗಿನಿಂದಲೇ ಮಾನವೀಯತೆಯ ನೆಲೆಯಲ್ಲಿ ಬೇರೆಯವರಿಗೆ ನೆರವಾಗುವ ಗುಣಗಳನ್ನು ಬೆಳೆಸುವ ಸಲುವಾಗಿ ನಗರದ ಮೇಟಗಳ್ಳಿಯ ಸೇಫಿಯಂಟ್ ಕಾಲೇಜಿನಲ್ಲಿ ದಯಾ ಗೋಡೆಯನ್ನು (ವಾಲ್ ಆಫ್ ಕೈಂಡ್ ನೆಸ್) ಮಂಗಳವಾರ ನಿವೃತ್ತ ಕರ್ನಲ್ ಬಿ.ಎಸ್.ಗೋಕುಲ ಅನಾವರಣ ಮಾಡಿದರು.

ನಿಮಗೆ ಏನು ಬೇಕೋ ಅದನ್ನು ಕೊಡಿ, ನಿಮಗೆ ಏನು ಬೇಕೋ ಅದನ್ನು ತೆಗೆದುಕೋ ಎಂಬ ಘೋಷವಾಕ್ಯದಡಿ ಪ್ರೀತಿ, ಭರವಸೆ, ಮಾನವೀಯತೆ, ಆತ್ಮವಿಶ್ವಾಸ, ಶಾಂತಿ, ಸಹನೆ, ಸ್ವಯಂ ನಿಯಂತ್ರಣ, ನಂಬಿಕೆ, ದಯಾಪರತೆ, ಧೈರ್ಯ ಮತ್ತಿತರ ಗುಣಗಳನ್ನು ಅಳವಡಿಸಿಕೊಳ್ಳುವಂತೆ ತಿಳಿಸಲಾಗಿದೆ. ಇದರ ಪಕ್ಕದಲ್ಲಿ ನಾಲ್ಕು ದೊಡ್ಡ ದೊಡ್ಡ ಚೌಕಾಕಾರದ ಜಾಲರಿಯ ಪೆಟ್ಟಿಗೆಗಳನ್ನು ಇಡಲಾಗಿದೆ. ಬಟ್ಟೆ, ಆಹಾರ ಪದಾರ್ಥ ಸೇರಿದಂತೆ ಯಾವುದೇ ವಸ್ತುಗಳನ್ನು ಬೇಕಾದರೂ ವಿದ್ಯಾರ್ಥಿಗಳು ಹಾಕಬಹುದಾಗಿದೆ. ಇಲ್ಲಿ ಸಂಗ್ರಹವಾದ ವಸ್ತುಗಳನ್ನು ನಗರದ ಸುತ್ತಮುತ್ತ ಇರುವ ಅನಾಥಾಲಯ, ವೃದ್ಧಾಶ್ರಮ, ನಿರಾಶ್ರಿತರ ತಾಣಗಳಿಗೆ ತಲುಪಿಸಲು ಆಡಳಿತ ಮಂಡಳಿ ಆಲೋಚಿಸಿದೆ.



ಮೈಸೂರಿನ ಸೇಫಿಯಂಟ್ ಕಾಲೇಜಿನ ವಾರ್ತಾ ಪತ್ರಿಕೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು. ನಿವೃತ್ತ ಕರ್ನಲ್ ಬಿ.ಎಸ್.ಗೋಕುಲ, ಕಾಲೇಜಿನ ಡೀನ್ ಡಾ.ಸುಜಾತಾ ಬೋಪಣ್ಣ, ನಿರ್ದೇಶಕಿ ಯಶ್ಮಿಕ್ ಪೊನ್ನಪ್ಪ ದಲ್ಜೀತ್, ಪ್ರಾಂಶುಪಾಲ ಡಾ.ಕೆ.ಗಣೇಶ್, ಅಂಬಳೆ ಮಹದೇವಸ್ವಾಮಿ, ಶೆಲ್ಡನ್ ವಿಲಿಯಮ್ಸ್ ಚಿತ್ರದಲ್ಲಿದ್ದಾರೆ.

ನಿವೃತ್ತ ಕರ್ನಲ್ ಬಿ.ಎಸ್. ಗೋಕುಲ ಮಾತನಾಡಿ, ನಾವು ಜ್ಞಾನ ಬೆಳವಣಿಗೆಗಾಗಿ ಕಲಿಯುತ್ತೇವೆ. ಆದರೆ ಮಾನವೀಯ ಗುಣಗಳನ್ನು ಬೆಳೆಸಿಕೊಂಡು, ಇದ್ದವರು ಇಲ್ಲದವರಿಗೆ ನೆರವಾಗುವುದು ಮುಖ್ಯ. ಈ ದಿಸೆಯಲ್ಲಿ ಮಕ್ಕಳಲ್ಲಿ ಈಗಿನಿಂದಲೇ ದಯಾಪರ ಗುಣಗಳನ್ನು ಬೆಳೆಸಲು ಈ ಕಾಲೇಜಿನ ಆಡಳಿತ ಮಂಡಳಿ ಮುಂದಾಗಿರುವುದು ಶ್ಲಾಘನೀಯ ಎಂದರು.

ಪ್ರತಿಯೊಬ್ಬರೂ ಚೆನ್ನಾಗಿ ಓದಿ, ಗುರು–ಹಿರಿಯರು, ಪೋಷಕರಿಗೆ ಗೌರವ ನೀಡಿ. ರಾಷ್ಟ್ರಪ್ರೇಮವನ್ನು ಬೆಳೆಸಿಕೊಳ್ಳಿ ಎಂದು ಅವರು ಕರೆ ನೀಡಿದರು.

ವಾರ್ತಾ ಪತ್ರಿಕೆ ಬಿಡುಗಡೆ ಮಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಈ ರೀತಿಯ ಚಟುವಟಿಕೆಗಳಿಂದ ಓದು ಮತ್ತು ಬರಹ ಕೌಶಲ್ಯ ಹೆಚ್ಚುತ್ತದೆ. ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿದುಕೊಂಡಲ್ಲಿ ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಹಾಯವಾಗುತ್ತದೆ ಎಂದು ಹೇಳಿದರು.

ಕಾಲೇಜಿನ ಡೀನ್ ಡಾ.ಸುಜಾತಾ ಬೋಪಣ್ಣ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕಿ ಯಶ್ಮಿಕ್ ಪೊನ್ನಪ್ಪ ದಲ್ಜೀತ್ ಇದ್ದರು. ಪ್ರಾಂಶುಪಾಲ ಡಾ.ಕೆ.ಗಣೇಶ್ ಮಾತನಾಡಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರು ಹಾಗೂ ಸಾಧಕ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ವಾರ್ತಾ ಪತ್ರಿಕೆ ರೂಪುಗೊಂಡ ಬಗೆಯನ್ನು ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಶೆಲ್ಡನ್ ವಿಲಿಯಮ್ಸ್ ವಿವರಿಸಿದರು. ಅತಿಥಿಗಳನ್ನು ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕಿ ಶಾಲಿನಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಅಂಬಳೆ ಮಹಾದೇವಸ್ವಾಮಿ ಪರಿಚಯಿಸಿದರು. ಮನಿಷಾ ಕಾಮತ್ ಪ್ರಾರ್ಥಿಸಿದರು. ಯಶಿಕಾ ಜೈನ್ ಸ್ವಾಗತಿಸಿದರು. ಲಿಯಾನ ಮಾಚಯ್ಯ ನಿರೂಪಿಸಿದರು. ಆರ್.ರಕ್ಷಿತಾ ವಂದಿಸಿದರು.

ಮೈಸೂರು ಮಿತ್ರ

ಅನ್ಯ ಉದ್ದೇಶಕ್ಕೆ ಕುಡಿಯುವ ನೀರು ಸಂಪರ್ಕದ ಮೇಲೆ ನಿರ್ಬಂಧ



ಫೈಲ್ ಚಿತ್ರ

ಮೈಸೂರು, ಮಾ.12(ಎಸ್‌ಪಿಎನ್)–ಪ್ರಸ್ತುತ ಬೇಸಿಗೆ ಕಾಲವಾಗಿದ್ದು, ಜನಸಂಖ್ಯೆಗೆ ಅನುಗುಣವಾಗಿ ನೀರಿನ ಬೇಡಿಕೆ ಹೆಚ್ಚಾಗಿದೆ. ನೀರಿನ ಕೊರತೆಯಿಂದಾಗಿ ಜಲ ಮೂಲಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ.

ಹಾಗಾಗಿ ಮೈಸೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ನಿರ್ವಹಣೆಯಲ್ಲಿ ಯಾವುದೇ ತೊಂದರೆ ಉಂಟಾಗದಂತೆ ನಿರ್ವಹಿಸುವ ದೃಷ್ಟಿಯಿಂದ ಮಾರ್ಚ್‌ನಿಂದ ಜೂನ್ ಅಂತ್ಯದವರೆಗೆ ಕಟ್ಟಡ ನಿರ್ಮಾಣಕ್ಕೆ, ಬಹುವಸತಿ ಕಟ್ಟಡಗಳಿಗೆ, ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ ಹೊಸದಾಗಿ ನೀರಿನ ಸಂಪರ್ಕ ಕಲ್ಪಿಸುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅಂತೆಯೇ ಮೈಸೂರು ಜನತೆ ನೀರನ್ನು ಮಿತವಾಗಿ ಬಳಸಿ ಹಾಗೂ ಕಡ್ಡಾಯವಾಗಿ ಮೀಟರ್‌ನ್ನು ಅಳವಡಿಸಿಕೊಂಡು ನೀರನ್ನು ಬಳಕೆ ಮಾಡಬೇಕು. ಅನಾವಶ್ಯಕವಾಗಿ ಕುಡಿಯುವ ನೀರನ್ನು ದುರ್ಬಳಕೆ ಮಾಡುವ ನಾಗರಿಕರ ವಿರುದ್ಧ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಆಕ್ಟ್–1976ರ ಪ್ರಕಾರ ನೀರಿನ ಸಂಪರ್ಕವನ್ನು ಕಡಿತಗೊಳಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ನೀರು ಪೋಲಾಗುತ್ತಿರುವುದು ಕಂಡುಬಂದಲ್ಲಿ ಅಥವಾ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾದಲ್ಲಿ ದೂ.. 0821–2418800/816 ಸಂಪರ್ಕಿಸುವಂತೆ ವೈನಪಾ ನೀರು ಸರಬರಾಜು ಮತ್ತು ಒಳಚರಂಡಿ ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರು ಮನವಿ ಮಾಡಿದ್ದಾರೆ.

ನೀರಿನ ಸಮಸ್ಯೆ: ಕಂಟ್ರೋಲ್ ರೂಮ್ ಸ್ಥಾಪನೆ

ಮೈಸೂರು,ಮಾ.12–ಮೈಸೂರು ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶದ ಜನರಿಗೆ ಬರ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಸ್ವೀಕೃತವಾಗುವ ದೂರುಗಳನ್ನು ದಾಖಲಿಸಲು ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ 24/7 ಕಂಟ್ರೋಲ್ ರೂಮ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ದೂರು ಇದ್ದಲ್ಲಿ ಸಹಾಯವಾಣಿ ಸಂಖ್ಯೆ: 0821–2526355ಗೆ ಕರೆಮಾಡಿ ದೂರು ದಾಖಲಿಸಬಹುದಾಗಿದೆ,

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಮರ್ಪಕ ಕುಡಿಯುವ ನೀರಿನ ಪೂರೈಕೆಯ ಮೇಲ್ವಿಚಾರಣೆಗಾಗಿ ಜಿಲ್ಲಾ ಪಂಚಾಯತಿ ವತಿಯಿಂದ ತಾಲೂಕಿಗೆ ಒಬ್ಬರಂತೆ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಮೈಸೂರು ಮತ್ತು ಪಿರಿಯಾಪಟ್ಟಣ ತಾಲೂಕಿಗೆ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಆಡಳಿತ) ಅವರ ದೂ.ಸಂ: 0821–2526321, 9480873002, ನಂಜನಗೂಡು, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿಗೆ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಅಭಿವೃದ್ಧಿ) ಅವರ ದೂ.ಸಂ: 0821–2526354, 9480673666, ತಿ.ನರಸೀಪುರ ತಾಲೂಕಿಗೆ ಜಿಲ್ಲಾ ಪಂಚಾಯಿತಿಯ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಅವರ ದೂ.ಸಂ: 0821–2526355, 9480873001, ಕೆ.ಆರ್ ನಗರ ಮತ್ತು ಸಾಲಿಗ್ರಾಮ ತಾಲೂಕಿಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಯೋಜನಾಧಿಕಾರಿ ಅವರ ದೂ.ಸಂ: 0821–2526308,9480873004 ಹಾಗೂ ಹುಣಸೂರು ತಾಲೂಕಿಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿಗಳ ದೂ.: 0821–2526302, 9480873003 ಅನ್ನು ಸಂಪರ್ಕಿಸಿ ದೂರು ದಾಖಲಿಸಬಹುದು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯ




ಮೈಸೂರು,ಮಾ.12 (ಎಸ್‌ಪಿಎನ್)–ಮೈಸೂರು ನಗರಕ್ಕೆ ನೀರು ಪೂರೈಕೆ ಮಾಡುವ ಹೊಂಗಳ್ಳಿ 2ನೇ ಹಂತದ ನೀರು ಸರಬರಾಜು ಯೋಜನೆಯಲ್ಲಿ ಮಾ.13ರಂದು ನೀರು ಸರಬರಾಜು ಲೀಕೇಜ್‌ಗಳನ್ನು ದುರಸ್ಥಿಪಡಿಸುವ ತುರ್ತು ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಪೂರ್ಣ ಪ್ರಮಾಣದಲ್ಲಿ ನೀರು ಪೂರೈಸಲು ಸಾಧ್ಯವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಮಾ.13 ಮತ್ತು 14ರಂದು ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗುವ ಪ್ರದೇಶಗಳಾದ ಹೆಚ್‌ಎಲ್‌ಆರ್ ಆಶ್ರಿತ ಪ್ರದೇಶಗಳು, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ, ಎಬಿಸಿ ಬಡಾವಣೆ, ಪುಲಿಕೇಶಿ ರಸ್ತೆ, ವೀರನಗೆರೆ, ಸಿದ್ಧಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂ ನಗರ, ದೇವರಾಜ ಮೊಹಲ್ಲಾ, ನಜರ್‌ಬಾದ್, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾ ಬಜಾರ್, ವಾರ್ಡ್ ಸಂಖ್ಯೆ: 8, 17, 18, 19, 23ರಿಂದ 27 ಹಾಗೂ 40, 41, 55, 60, 61, 62 ಹಾಗೂ ಸುತ್ತಮುತ್ತ ಬಡಾವಣೆಗಳಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಮಂಗಳವಾರ ರಾತ್ರಿ ಮೈಸೂರಲ್ಲಿ ಸರಣಿ ಅಪಘಾತ: ಐವರಿಗೆ ಗಾಯ





ಮೈಸೂರು, ಮಾ.12(ಎಸ್‌ಪಿಎನ್)–ಸರಣಿ ಅಪಘಾತ ಸಂಭವಿಸಿ ಐವರು ಗಾಯಗೊಂಡಿರುವ ಘಟನೆ ಮೈಸೂರಿನಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ.

ನಗರದ ಜೆಎಲ್‌ಬಿ ರಸ್ತೆ, ವೇದಾಂತ ಹೆಮ್ಮಿಗೆ ವೃತ್ತದಲ್ಲಿ ರಾತ್ರಿ 'ಕಾಂತರಾಜ ಅರಸ್' ರಸ್ತೆಯಲ್ಲಿ ಬರುತ್ತಿದ್ದ ಎರಡು ಬೈಕ್‌ಗಳಿಗೆ ಕಾರು ಡಿಕ್ಕಿ ಹೊಡೆದಿದ್ದು, ನಂತರ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ನಾಲ್ವರು ಬೈಕ್ ಸವಾರರು ಹಾಗೂ ಕಾರಿನಲ್ಲಿದ್ದ ಒಬ್ಬರು ಗಾಯಗೊಂಡಿದ್ದಾರೆ. ಓರ್ವನಿಗೆ ಪಾದ ತುಂಡಾಗಿದೆ. ಗಾಯಾಳುಗಳನ್ನು ಸಾರ್ವಜನಿಕರು ಹಾಗೂ ಪೊಲೀಸರು ಆಂಬುಲೆನ್ಸ್‌ನಲ್ಲಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತದಲ್ಲಿ ಸ್ಕೋಡಾ ಕಾರು(ಕೆಎ–22, ಝಡ್–1857), ಮಾರುತಿ ಕಾರು(ಕೆಎ–09, ಎಂಬಿ–8156), ಟಿವಿಎಸ್ ಸ್ಟಾರ್ ಸಿಟಿ ಬೈಕ್(ಕೆಎ–55, ಎಲ್–0478) ಹಾಗೂ ಪಲ್ಸರ್ ಬೈಕ್(ಕೆಎ–09, ಇಸಿ–3014) ಜಖಂಗೊಂಡಿವೆ. ಕೃಷ್ಣರಾಜ ಸಂಚಾರ ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಜಖಂಗೊಂಡಿದ್ದ ವಾಹನಗಳನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಲೋಕಸಭೆ ಚುನಾವಣೆ: ಕಾಂಗ್ರೆಸ್‌ನ ಎರಡನೇ ಪಟ್ಟಿ ಬಿಡುಗಡೆ

ಕಮಲ್‌ನಾಥ್, ಅಶೋಕ್ ಗೆಹ್ಲೋಟ್ ಪುತ್ರರಿಗೆ ಟಿಕೆಟ್!

ನವದೆಹಲಿ: 2024ರ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಪ್ರಕಟಿಸಿದೆ. ಈ ಪಟ್ಟಿಯಲ್ಲಿ 43 ಅಭ್ಯರ್ಥಿಗಳ ಹೆಸರು ಘೋಷಣೆಯಾಗಿದೆ. ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಅವರ ಪುತ್ರ ನಕುಲ್ ನಾಥ್ ಅವರಿಗೆ ಚಿಂದ್ವಾರದಿಂದ ಮತ್ತು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ಪುತ್ರ ವೈಭವ್ ಗೆಹ್ಲೋಟ್‌ಗೆ ಜಲೋರ್‌ನಿಂದ ಟಿಕೆಟ್ ನೀಡಲಾಗಿದೆ. ಈ ಹಿಂದೆ ಪಕ್ಷದ ಮೊದಲ ಪಟ್ಟಿಯಲ್ಲಿ 39 ಹೆಸರುಗಳನ್ನು ಪ್ರಕಟಿಸಲಾಗಿತ್ತು. ಈ ಮೂಲಕ ಕಾಂಗ್ರೆಸ್ ಇದುವರೆಗೆ 82 ಹೆಸರುಗಳನ್ನು ಪ್ರಕಟಿಸಿದೆ.

ಕಾಂಗ್ರೆಸ್ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ (ಸಿಇಸಿ) ಎರಡನೇ ಸಭೆ ನಿನ್ನೆ ಸಂಜೆ ನಡೆದಿತ್ತು. ದೆಹಲಿಯ ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಮತ್ತು ಸಿಇಸಿ ಸದಸ್ಯರು ಭಾಗವಹಿಸಿದ್ದರು. ರಾಜಸ್ಥಾನ ಮತ್ತು ಉತ್ತರಾಖಂಡದ ಹಿರಿಯ ಕಾಂಗ್ರೆಸ್ ನಾಯಕರು ಸಭೆಯಲ್ಲಿ ಉಪಸ್ಥಿತರಿದ್ದರು. ಸಿಇಸಿಯ ಮೊದಲ ಸಭೆ ಮಾ.7ರಂದು ನಡೆಯಿತು. 39 ಸ್ಥಾನಗಳ ಮೊದಲ ಪಟ್ಟಿಯನ್ನು ಮಾರ್ಚ್ 8ರಂದು ಬಿಡುಗಡೆ ಮಾಡಲಾಗಿತ್ತು. ಇದರಲ್ಲಿ ಛತ್ತೀಸ್‌ಗಢ, ಕರ್ನಾಟಕ, ಕೇರಳ, ಲಕ್ಷದ್ವೀಪ, ಮೇಘಾಲಯ, ನಾಗಾಲ್ಯಾಂಡ್, ಸಿಕ್ಕಿಂ, ತೆಲಂಗಾಣ ಮತ್ತು ತ್ರಿಪುರಾ ಲೋಕಸಭಾ ಸ್ಥಾನಗಳಿಗೆ ಹೆಸರುಗಳನ್ನು ಪ್ರಕಟಿಸಲಾಯಿತು. ಇವರಲ್ಲಿ ಕೇರಳದಿಂದ 16, ಕರ್ನಾಟಕದ 7, ಛತ್ತೀಸ್‌ಗಢದಿಂದ 6 ಮತ್ತು ತೆಲಂಗಾಣದಿಂದ 4 ಅಭ್ಯರ್ಥಿಗಳು ಸೇರಿದ್ದಾರೆ.

ಕೆಪಿಎಸ್‌ಸಿ ಸದಸ್ಯರಾಗಿ ಡಿಐಜಿ ಎಂ.ವಿ.ರಾಮಕೃಷ್ಣ ಪ್ರಸಾದ್ ನೇಮಕ



ಮೈಸೂರು, ಮಾ.12(ಎಸ್‌ಪಿಎನ್)–ಕರ್ನಾಟಕ ಲೋಕಾ ಸೇವಾ ಆಯೋಗದ ಸದಸ್ಯರಾಗಿ ಕೆಎಸ್‌ಆರ್‌ಪಿಡಿಐಜಿ ಎಂ.ವಿ.ರಾಮಕೃಷ್ಣ ಪ್ರಸಾದ್ ಅವರನ್ನು ನೇಮಿಸಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸೋಮವಾರ ಆದೇಶ ಹೊರಡಿಸಿದ್ದಾರೆ.

ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಪ್ರತಿಭಟನೆ

ಸಂವಿಧಾನ ಬದಲಾಯಿಸುವುದಾಗಿ ಹೇಳಿಕೆ ನೀಡಿದ್ದಕ್ಕೆ ಆಕ್ರೋಶ



ಮೈಸೂರಿನ ಪುರಭವನದ ಮುಂಭಾಗ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.12(ಜಿಎ)–ಸಂವಿಧಾನ ಬದಲಾಯಿಸುವುದಾಗಿ ಹೇಳಿಕೆ ನೀಡಿರುವ ಸಂಸದ ಅನಂತ ಕುಮಾರ್ ಹೆಗಡೆ ವಿರುದ್ಧ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ನಗರದ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆ ಬಳಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸಂಸದ ಅನಂತಕುಮಾರ್ ಹೆಗಡೆ ಕಾರ್ಯಕ್ರಮವೊಂದರಲ್ಲಿ ಸಂವಿಧಾನ ಬದಲಾವಣೆ ಮಾಡುವ ಮಾತುಗಳನ್ನಾಡಿದ್ದಾರೆ. ಸಂವಿಧಾನದಡಿ ಕೆಲಸ ಮಾಡುವುದಾಗಿ ಪ್ರಮಾಣವಚನ ಸ್ವೀಕರಿಸಿ ಸಂಸದರಾಗಿರುವವರೇ ಸಂವಿಧಾನ ವಿರೋಧಿ ಮಾತುಗಳನ್ನಾಡುತ್ತಿರುವುದು ಖಂಡನೀಯ. ಸಂವಿಧಾನದ ಮೇಲೆ ಇತ್ತೀಚಗೆ ಕ್ರೌರ್ಯಗಳು ಹೆಚ್ಚಾಗುತ್ತಿದ್ದು, ಸಂವಿಧಾನವನ್ನು ದುರ್ಬಲಗೊಳಿಸಿ, ಮಾನವೀಯ ಅಂತಃಕರಣ ನಾಶ ಮಾಡುವ ಜೀವ ವಿರೋಧಿ ಕೃತ್ಯಗಳು ಬಹಿರಂಗವಾಗುತ್ತಿವೆ ಎಂದು ಕಿಡಿಕಾರಿದರು.

ಪ್ರಧಾನಿ ಮೋದಿ ಅವರಿಗೆ ಸಂವಿಧಾನದ ಮೇಲೆ ಬದ್ದತೆ ಇದ್ದರೆ ಅನಂತಕುಮಾರ್ ಹೆಗ್ಗಡೆಯನ್ನು ಕೂಡಲೇ ಪಕ್ಷದಿಂದ ಉಚ್ಚಾಟಿಸಿ, ಅವರ ವಿರುದ್ಧ ಕ್ರಮ ಜರುಗಿಸಬೇಕು. ಆತ ಸಂವಿಧಾನ ವಿರೋಧಿ ಪ್ರಜಾಪ್ರಭುತ್ವ ವಿರೋಧಿ ದೇಶ ದ್ರೋಹಿ ಆಗಿರುವುದರಿಂದ ಅವರನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಗೋಪಾಲಕೃಷ್ಣ ಸೇರಿದಂತೆ ಹಲವು ಪಾಲ್ಗೊಂಡಿದ್ದರು.

ಪೌರತ್ವ ತಿದ್ದುಪಡಿ ಕಾಯ್ದೆಗೆ ತಮಿಳು ನಟ ವಿಜಯ್ ವಿರೋಧ; ತ.ನಾಡಿನಲ್ಲಿ ಜಾರಿಗೊಳಿಸದಂತೆ ಒತ್ತಾಯ



ಚೆನ್ನೈ: ಇತ್ತೀಚೆಗೆ ತಮ್ಮ ರಾಜಕೀಯ ಪಕ್ಷ 'ತಮಿಳಗ ವೆಟ್ರಿ ಕಳಗಂ' ಅನ್ನು ಪ್ರಾರಂಭಿಸಿದ ತಮಿಳು ನಟ ವಿಜಯ್ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು 'ವಿಭಜಕ' ಎಂದು ಕರೆದಿದ್ದಾರೆ ಮತ್ತು ಇದು ಸ್ವೀಕಾರಾರ್ಹವಲ್ಲ ಎಂದು ಹೇಳಿದ್ದಾರೆ.

ತಮಿಳುನಾಡಿನಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು (ಸಿಎಎ) ಜಾರಿಗೊಳಿಸುವುದಿಲ್ಲ ಎಂದು ಡಿಎಂಕೆ ಸರ್ಕಾರವು ಜನರಿಗೆ ಭರವಸೆ ನೀಡಬೇಕೆಂದು ಅವರು ಒತ್ತಾಯಿಸಿದ್ದಾರೆ. ಸಿಎಎ ಅನ್ನು ಜಾರಿಗೊಳಿಸಲು ಕೇಂದ್ರವು ನಿನ್ನೆ ಅಧಿಸೂಚನೆ ಹೊರಡಿಸಿತ್ತು. ಈ ಕುರಿತು ಪಕ್ಷದ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪೋಸ್ಟ್ ಮಾಡಿದ್ದು, 'ವಿಭಜಕ ರಾಜಕೀಯ' ಅನುಸರಿಸಿ ಜಾರಿಗೆ ತರುತ್ತಿರುವ ಸಿಎಎಯಂತಹ ಯಾವುದೇ ಕಾನೂನು ಸ್ವೀಕಾರಾರ್ಹವಲ್ಲ ಎಂದಿದ್ದಾರೆ.

ವಿಜಯ್ ಅವರ ಪಕ್ಷ ತಮಿಳಗ ವೆಟ್ರಿ ಕಳಗಂ 2024ರ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸದಿರಲು ತೀರ್ಮಾನಿಸಿದೆ. ಏಕೆಂದರೆ 2026ರ ವಿಧಾನಸಭಾ ಚುನಾವಣೆಯು ಅವರ ಗುರಿಯಾಗಿದೆ ಎಂದು ಅವರು ಈ ಮೊದಲೇ ಘೋಷಿಸಿದ್ದರು.

ಎಐಎಸ್‌ಎಂಕೆ–ಬಿಜೆಪಿಯೊಂದಿಗೆ ವಿಲೀನ

ಚೆನ್ನೈ: ಲೋಕಸಭೆ ಚುನಾವಣೆಗೆ ಮುನ್ನ, ಕನ್ನಡದಲ್ಲೂ ನಟಿಸಿರುವ ಹಿರಿಯ ತಮಿಳು ನಟ ಆರ್.ಶರತ್‌ಕುಮಾರ್ ಅವರು ತಮ್ಮ ಅಖಿಲ ಭಾರತ ಸಮತುವ ಮಕ್ಕಳ್ ಕಚ್ಚಿ(ಎಐಎಸ್‌ಎಂಕೆ) ಪಕ್ಷವನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಿದ್ದಾರೆ.

ಎಐಎಸ್‌ಎಂಕೆ ಪದಾಧಿಕಾರಿಗಳು ಮತ್ತು ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ ಕೆ ಅಣ್ಣಾಮಲೈ ಅವರ ಸಮ್ಮುಖದಲ್ಲಿ ಶರತ್‌ಕುಮಾರ್ ತಮ್ಮ ಪಕ್ಷವನ್ನು ಕೇಸರಿ ಪಕ್ಷದೊಂದಿಗೆ ವಿಲೀನಗೊಳಿಸಿದರು. ನಂತರ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಶರತ್ ಕುಮಾರ್, ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುತ್ತಾರೆ ಎಂದು ಹೇಳಿದರು.

ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ–ಎಜುಕೇಷನ್ ನ್ಯೂಜಿಲೆಂಡ್ ಒಡಂಬಡಿಕೆ

ಮೈಸೂರು,ಮಾ.12–ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಕೆಎಸ್‌ಎಚ್‌ಇಸಿ) ನ್ಯೂಜಿಲೆಂಡ್ ಶೈಕ್ಷಣಿಕ ಅನುಭವಗಳನ್ನು ವಿಶ್ವಕ್ಕೆ ಕೊಂಡೊಯ್ಯುವ ಸರ್ಕಾರಿ ಸಂಸ್ಥೆ ಎಜುಕೇಷನ್ ನ್ಯೂಜಿಲೆಂಡ್ ಜೊತೆಯಲ್ಲಿ ಎಜುಕೇಷನ್ ಕೋಆಪರೇಷನ್ ಅರೇಂಜ್‌ಮೆಂಟ್(ಇಸಿಎ)ಗೆ ಸಹಿ ಹಾಕಿದೆ.

ಈ ಕಾರ್ಯತಂತ್ರೀಯ ಸಹಯೋಗವು ಶೈಕ್ಷಣಿಕ ವಲಯವನ್ನು ಪರಿವರ್ತಿಸುವಲ್ಲಿ ಮಹತ್ತರ ಹೆಜ್ಜೆಯಾಗಿದ್ದು, ಸಹಯೋಗವನ್ನು ಉತ್ತೇಜಿಸುವ, ವಿದ್ಯಾರ್ಥಿ, ಸಿಬ್ಬಂದಿಯ ಚಲನೆ ರೂಪಿಸುವ ಮತ್ತು ಸಂಶೋಧನೆಯ ಪ್ರಯತ್ನಗಳಲ್ಲಿ ತೊಡಗುವ ಮತ್ತು ಅತ್ಯುತ್ತಮ ರೂಡಿಗಳು ಮತ್ತು ಶಿಕ್ಷಣದ ಉದಯೋನ್ಮುಖ ಪ್ರವೃತ್ತಿಗಳ ಹಂಚಿಕೊಳ್ಳುವುದರಲ್ಲಿ ಸಕ್ರಿಯವಾಗಿರುತ್ತದೆ. ಇಸಿಎಯನ್ನು ಕೆಎಸ್‌ಎಚ್‌ಸಿಯ ಎಕ್ಸಿಕ್ಯೂಟಿವ್ ಡೈರೆಕ್ಟರ್ ಡಾ.ಕೆ.ಜಿ.ಚಂದ್ರಶೇಖರ, ಎಜುಕೇಷನ್ ನ್ಯೂಜಿಲೆಂಡ್‌ನ ಜನರಲ್ ಮ್ಯಾನೇಜರ್–ಇಂಟರ್‌ನ್ಯಾಷನಲ್ ಲಿಸಾ ಫುಟ್ಬ್ರೆಕ್ ಸಹಿ ಹಾಕಿದರು.

ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕೆಎಸ್‌ಎಚ್‌ಇಸಿಯ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್, ಆಡಳಿತಾಧಿಕಾರಿ ಡಾ.ತಾಂಡವಗೌಡ, ರಾಜ್ಯ ವಿಶ್ವವಿದ್ಯಾಲಯಗಳ ಕುಲಪತಿಗಳು, ಪ್ರತಿನಿಧಿಗಳು, ನ್ಯೂಜಿಲೆಂಡ್‌ನ ಆಕ್ಲೆಂಡ್ ಯೂನಿವರ್ಸಿಟಿ ಆಫ್ ಟೆಕ್ನಾಲಜಿ ಕುಲಪತಿ ಡಮೊನ್ ಸಲೇಸಾ ಮತ್ತು ಅವರ ತಂಡ ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು,ಮಾ.12–ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಚಾಮರಾಜ ವಿಧಾನಸಭಾ ಕ್ಷೇತ್ರದ ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನಾಗಿ ಯು.ಎಸ್.ರಮೇಶ್ ಅವರನ್ನು ನೇಮಕ ಮಾಡಲಾಗಿದೆ.

ಅಸೋಸಿಯೇಷನ್ ಆಫ್ ಅಲಯನ್ಸ್ ಜಿಲ್ಲಾ ಘಟಕಗಳ ಉದ್ಘಾಟನೆ



ಮೈಸೂರು,ಮಾ.12–ಅಸೋಸಿಯೇಷನ್ ಆಫ್ ಅಲಯನ್ಸ್ ಸೇವಾ ಸಂಸ್ಥೆಯ ಮೈಸೂರು ಮತ್ತು ಮಂಡ್ಯ ಜಿಲ್ಲಾ ಘಟಕಗಳ ಉದ್ಘಾಟನಾ ಕಾರ್ಯಕ್ರಮ 'ಓಂಕಾರ' ನಗರದ ಖಾಸಗಿ ಹೋಟೇಲ್‌ನಲ್ಲಿ ಆಯೋಜಿಸಲಾಗಿತ್ತು.

ಮೈಸೂರಿನ ಪೊಲೀಸ್ ಆಯುಕ್ತ ಬಿ.ರಮೇಶ್ ಮತ್ತು ಅಲಯನ್ಸ್ ಇಂಟರ್‌ನ್ಯಾಷನಲ್ ಸೇವಾ ಸಂಸ್ಥೆಯ ಮಾಜಿ ಅಂತರರಾಷ್ಟ್ರೀಯ ಅಧ್ಯಕ್ಷ ಹಾಗೂ ಅಲಯನ್ಸ್ ಸಂಸ್ಥಾಪಕ ತಿರುಪತಿ ರಾಜು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಪೊಲೀಸ್ ಆಯುಕ್ತ ಬಿ.ರಮೇಶ್ ಮಾತನಾಡಿ, ಅಲಯನ್ಸ್ ಇಂಟರ್‌ನ್ಯಾಷನಲ್ ಸೇವಾ ಸಂಸ್ಥೆಯು ಭಾರತೀಯರಿಂದ, ಭಾರತೀಯರಿಗಾಗಿ, ಭಾರತದಲ್ಲಿ ಕೇಂದ್ರ ಸ್ಥಾನವನ್ನು ಹೊಂದಿ 32ಕ್ಕಿಂತಲೂ ಅಧಿಕ ರಾಷ್ಟ್ರಗಳಲ್ಲಿ ಕೇಂದ್ರಗಳನ್ನು ಹೊಂದಿ ಅಂತರರಾಷ್ಟ್ರೀಯ ಮಟ್ಟದಲ್ಲಿ 15 ವರ್ಷಗಳಿಂದ ನಿರಂತರವಾಗಿ ತನ್ನ ಸೇವೆಯನ್ನು ಮುಂದುವರೆಸುತ್ತಿದೆ. ಸಾಂಸ್ಕೃತಿಕ ರಾಜಧಾನಿ ಮೈಸೂರು ಹಾಗೂ ಸಕ್ಕರೆ ನಾಡು ಮಂಡ್ಯದಲ್ಲಿ ಸ್ವದೇಶಿ ಅಂತರರಾಷ್ಟ್ರೀಯ ಸೇವಾ ಸಂಸ್ಥೆ ಇಂದು ಅದ್ಧೂರಿಯಾಗಿ 600ಕ್ಕೂ ಅಧಿಕ ಜನರ ಸಮ್ಮುಖದಲ್ಲಿ ಪ್ರಾರಂಭಿಸಿರುವುದು ಹೆಮ್ಮೆಯ ಸಂಗತಿ ಎಂದು ಸಂತಸ ವ್ಯಕ್ತಪಡಿಸಿದರು.

ಅಲೈಯನ್ಸ್ ಸಂಸ್ಥಾಪಕ ತಿರುಪತಿ ರಾಜು ಮಾತನಾಡಿ, ಈ ಸಂಸ್ಥೆ ಸುಮಾರು 50 ಸಾವಿರ ಸದಸ್ಯರನ್ನು ಹಾಗೂ 1800 ಶಾಖೆಗಳನ್ನು ಹೊಂದಿದ್ದು, ಅತೀ ವೇಗದಲ್ಲಿ ದೇಶದ ಪ್ರತಿ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸಿದೆ. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆ 255ರ ರಾಜ್ಯಪಾಲರಾಗಿ ಅಲೈ ನಂಜುಂಡಸ್ವಾಮಿ ಹಾಗೂ ಮಂಡ್ಯ ಜಿಲ್ಲೆ 268ರ ರಾಜ್ಯಪಾಲರಾಗಿ ಅಲೈ ಕೆ.ಟಿ.ಹನುಮಂತು ಅಧಿಕಾರ ವಹಿಸಿಕೊಂಡರು. ಅಲೈ ಬಾಲಕೃಷ್ಣರಾಜು (ಸಿರಿಬಾಲು) ಹಾಗೂ ಮಾದೇಗೌಡರು ಒಂದನೇ ಉಪರಾಜ್ಯಪಾಲರಾಗಿ ಹಾಗೂ ಅಲೈ ವೆಂಕಟೇಶ್ ಮತ್ತು ಕೆ.ಆರ್.ಶಶಿಧರ್ ಈಚಗೆರೆ ಎರಡನೇ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡರು. ವೇದಿಕೆಯಲ್ಲಿ ಸಂತೋಷ್‌ಕುಮಾರ್, ಗಂಗಾಧರಪ್ಪ, ರವೀಂದ್ರನಾಥ್, ರಮೇಶ್, ಚಂದ್ರಶೇಖರ್, ಅಪ್ಪಾಜಿ, ಅತಿಥೇಯ ಸಮಿತಿ ಅಧ್ಯಕ್ಷ ಮಹಾಬಲೇಶ್ವರ ಭೈರಿ, ಕಾರ್ಯದರ್ಶಿ ಶ್ರೀಶೈಲ, ಉಪಾಧ್ಯಕ್ಷ ಕೃಷ್ಣಾಜಿರಾಯ್, ಕೋ–ಛೇರ್ಮನ್ ಶೋಭಾ ಸಿರಿಬಾಲು, ಖಜಾಂಚಿ ಸಂಪತ್‌ಕುಮಾರ್ ಶೆಟ್ಟಿ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

ವಿವಿಧ ತರಬೇತಿಗಳಿಗೆ ಅರ್ಜಿ ಆಹ್ವಾನ

ಮೈಸೂರು,ಮಾ.12– 2023–24ನೇ ಸಾಲಿನ ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ ಅಥವಾ ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯಡಿ ಅರ್ಹ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಸ್‌ಇಡಿಪಿ ಸ್ವಯಂ ಉದ್ಯೋಗಿ ಟೈಲರ್ 60 ದಿನ, ಎಸ್‌ಇಡಿಪಿ ಅಂಗಡಿ 30 ದಿನ, ಸಹಾಯಕ ಹೇರ್ ಥೆರಪಿಸ್ಟ್ 30 ದಿನ, ಫ್ಯಾಷನ್ ಡಿಸೈನರ್ 30 ದಿನ, ಹಾರ್ಡ್ವೇರ್ ರಿಪೇರಿ ತಂತ್ರಜ್ಞ 30 ದಿನ, ಹೇರ್ ಸ್ಟೈಲಿಸ್ಟ್ 30 ದಿನ, ಬ್ಯೂಟಿ ಥೆರಪಿಸ್ಟ್ 30 ದಿನ, ದೇಶೀಯ ಡೇಟಾ ಎಂಟ್ರಿ ಆಪರೇಟರ್ 60 ದಿನ, ಸೋಲಾರ್ ಪ್ಯಾನಲ್ ಅಳವಡಿಕೆ ಮತ್ತು ಸೇವೆ 30 ದಿನ ಮುಂತಾದ ತರಬೇತಿಗಳಿಗೆ ಅರ್ಜಿ ಆಹ್ವಾನಿಸಿದ್ದು, ಅರ್ಜಿಯನ್ನು ಜಿಲ್ಲಾ ಕಚೇರಿಗಳಲ್ಲಿ ಪಡೆಯಬಹುದು. ಮಾಹಿತಿಗೆ ದೂ.ಸಂ: 0821–2430022 ಅನ್ನು ಸಂಪರ್ಕಿಸಿ

ನಾಲ್ವಡಿಯವರ ಆಶಯಕ್ಕೆ ವಿರುದ್ಧವಾಗಿ ಮುಡಾ ಕಾರ್ಯ ವೈಖರಿ

ಮಾಜಿ ಮೇಯರ್ ಸಂದೇಶ್‌ಸ್ವಾಮಿ ಬೇಸರ



ಮೈಸೂರು,ಮಾ.12–ಅಂದಿನ ಸಿಐಟಿಬಿ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಆಶಯಕ್ಕೆ ವಿರುದ್ಧವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತಿದೆ ಎಂದು ಮುಡಾ ಮಾಜಿ ಸದಸ್ಯ, ಬಿಜೆಪಿ ಮುಖಂಡ ಸಂದೇಶ್ ಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

ಬಡವರಿಗೆ ಸೂರು ಕಲ್ಪಿಸುವುದರೊಂದಿಗೆ ನಗರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಮಹಾರಾಜರು ಸಿಐಟಿಬಿ (ಇಂದಿನ ಮುಡಾ) ಸ್ಥಾಪಿಸಿದರು. ಆದರೆ ಮಹಾರಾಜರ ಆಶಯಗಳೆಲ್ಲವನ್ನೂ ಗಾಳಿಗೆ ತೂರಿ ಮುಡಾ ಕಾರ್ಯನಿರ್ವಹಿಸುತ್ತಿದೆ. ತ್ಯಾಜ್ಯ ನಿರ್ವಹಣೆ ಹಾಗೂ ಒಳಚರಂಡಿ ನೀರನ್ನು ಪುನರ್ ಬಳಕೆ ಮಾಡುವುದಕ್ಕೂ ಹೊಸ ಸ್ಥಳ ಮೀಸಲಿಡಲಾಗದಷ್ಟು ಮುಡಾ ನಿಶ್ಯಕ್ತವಾಗಿದೆ ಎಂದು ದೂರಿದ್ದಾರೆ.



ನಗರಾಭಿವೃದ್ಧಿ ಕಾಯ್ದೆ ಪ್ರಕಾರ ಬಡಾವಣೆಯ ನಿವೇಶನದಾರರಿಂದ ಮುಡಾ ಯಾವುದೇ ಕಂದಾಯ ವಸೂಲಿ ಮಾಡುವಂತಿಲ್ಲ. ಅದರೂ ಕಂದಾಯ ಮತ್ತು ವರ್ಗಾವಣೆ ಶುಲ್ಕ ವಸೂಲಿ ಮಾಡಿ, ಬಜೆಟ್ ಮಂಡಿಸಿ ಸರ್ಕಾರದ ಅನುಮತಿಗೆ ಕಳುಹಿಸುವ ಸಂಪ್ರದಾಯ ಮುಂದುವರೆದಿದೆ. ಆದರೆ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸೇರಿದಂತೆ ಹಿರಿಯ ಐಎಎಸ್ ಅಧಿಕಾರಿಗಳು ಇದಕ್ಕೆ ಯಾವ ರೀತಿ ಅನುಮೋದನೆ ನೀಡುತ್ತಿದ್ದಾರೆ ಎಂಬುದು ಆಶ್ಚರ್ಯ ಮೂಡಿಸಿದೆ ಎಂದಿದ್ದಾರೆ.

ಜಮೀನು ಖರೀದಿಸಿ, ಬಡಾವಣೆ ಅಭಿವೃದ್ಧಿಪಡಿಸಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಕೈಗೆಟಕುವ ದರದಲ್ಲಿ ನಿವೇಶನ ಅಥವಾ ಮನೆ ನಿರ್ಮಿಸಿ ಕೊಡುವುದು ಮುಡಾದ ಪ್ರಮುಖ ಕಾರ್ಯ. ನಂತರ ಆ ಬಡಾವಣೆಗಳನ್ನು ಹಸ್ತಾಂತರ ಮಾಡಿ



ಕೊಳ್ಳುವ ಸ್ಥಳೀಯ ಸಂಸ್ಥೆಗಳೇ ಕಂದಾಯ ವಸೂಲಿ ಮಾಡಿ ನಿರ್ವಹಣೆ ಮಾಡುವುದು ನಿಯಮ. ಆದರೆ ಮುಡಾ ಮೂಲ ಉದ್ದೇಶ ಮರೆತು ರಿಯಲ್ ಎಸ್ಟೇಟ್ ಏಜೆನ್ಸಿಯಂತೆ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಮುಡಾದಿಂದ ನಿವೇಶನ ಪಡೆಯುವ ಮಾಲೀಕರು ಹತ್ತು ವರ್ಷದೊಳಗೆ ಮನೆ ನಿರ್ಮಿಸಬೇಕೆಂಬ ನಿಯಮವಿದೆ. ಆದರೆ 15–20 ವರ್ಷಗಳಾದರೂ ಇನ್ನು ಮನೆ ನಿರ್ಮಿಸಿಲ್ಲ. ಅಂತಹ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳದೆ ಅಧಿಕಾರಿಗಳು ಅದಕ್ಷತೆ ತೋರುತ್ತಿದ್ದಾರೆ. ಜತೆಗೆ ಅಂತಹ ನಿವೇಶನ ಹೊಂದಿರುವ ಮಾಲೀಕರಿಂದ ಶೇ.25 ದಂಡ ಶುಲ್ಕ ಪಾವತಿಸಿಕೊಂಡು ಟೈಟಲ್ ಡೀಡ್ ನೀಡುತ್ತಿರುವುದು ನಿಯಮದ ಸ್ಪಷ್ಟ ಉಲ್ಲಂಘನೆ ಮತ್ತು ಕಾನೂನುಬಾಹಿರ ಕ್ರಮವಾಗಿದೆ ಎಂದಿದ್ದಾರೆ.

ಎನ್.ಆರ್. ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಆದ್ಯತೆ: ತನ್ವೀರ್ ಸೇಠ್

ಕಲ್ಯಾಣಗಿರಿ ಪದವಿ ಪೂರ್ವ ಕಾಲೇಜು ನೂತನ ಕಟ್ಟಡ ಲೋಕಾರ್ಪಣೆ



ಮೈಸೂರು,ಮಾ.12– ನರಸಿಂಹರಾಜ ಕ್ಷೇತ್ರದ ಬಡ ಮತ್ತು ಮಧ್ಯಮವರ್ಗದವರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿವಿಧ ಕಡೆಗಳಲ್ಲಿ ಸರ್ಕಾರಿ ಕಾಲೇಜುಗಳು ಮತ್ತು ಪ್ರೌಢಶಾಲೆಗಳನ್ನು ನಿರ್ಮಿಸುವ ಮೂಲಕ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಕಲ್ಯಾಣಗಿರಿ ಬಡಾವಣೆಯಲ್ಲಿ ಕಲ್ಯಾಣಗಿರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿ, ಕ್ಷೇತ್ರದಲ್ಲಿ ಅಗತ್ಯವಿರುವ ಕಡೆ ಸರ್ಕಾರಿ ಶಾಲಾ ಕಾಲೇಜುಗಳನ್ನು ತರುವ ಜವಾಬ್ದಾರಿ ನಮ್ಮದು, ಆದರೇ, ಶಾಲಾ ಕಾಲೇಜುಗಳಲ್ಲಿ ದಾಖಲಾತಿ ಸಂಖ್ಯೆಯನ್ನು ಹೆಚ್ಚಿಸುವ ಜವಾಬ್ದಾರಿ ಇಲ್ಲಿನ ಉಪನ್ಯಾಸಕರು ಮತ್ತು ಶಿಕ್ಷಕರದು. ಈ ನಿಟ್ಟಿನಲ್ಲಿ ಅವರು, ಹೆಚ್ಚು ಶ್ರಮ ಹಾಕುವ ಮೂಲಕ ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಬಹುದು ಎಂದರು.

> ಪ್ರಸ್ತುತ ಈ ಕಾಲೇಜಿನಲ್ಲಿ ವಾಣಿಜ್ಯ ಮತ್ತು ಕಲಾ ವಿಭಾಗ ನಡೆಯುತ್ತಿದ್ದು, ಮುಂದಿನ ಅವಧಿಯಲ್ಲಿ ವಿದ್ಯಾರ್ಥಿಗಳ ಬೇಡಿಕೆಯ ಅನುಸಾರ ಅಗತ್ಯ ವಿಭಾಗಗಳನ್ನು ಪ್ರಾರಂಭಿಸಲಾಗುವುದು. ಇದಕ್ಕಾಗಿ ಸ್ಥಳೀಯ ಸಂಘ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳ ಸಲಹೆ ಪಡೆಯುವುದು ಅಗತ್ಯ. ಹಣ ಕೊಟ್ಟು ಶಿಕ್ಷಣ ಪಡೆಯುವುದಕ್ಕಿಂತ ಹಣ ಇಲ್ಲದೇ ಸರ್ಕಾರಿ ಸೌಲಭ್ಯಗಳನ್ನು ಬಳಸಿಕೊಂಡು ಬಡ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. **–ತನ್ವೀರ್ ಸೇಠ್, ಶಾಸಕ**

ಈ ಹಿಂದೆ ಇದೇ ಕಾಲೇಜು ಸಮೀಪದ ಸರ್ಕಾರಿ ಪ್ರೌಢಶಾಲಾ ಕಟ್ಟಡದಲ್ಲಿ ನಡೆಯುತ್ತಿತ್ತು, ಅದನ್ನು ನೂತನ ಕಟ್ಟಡಕ್ಕೆ ಈಗ ಸ್ಥಳಾಂತರಿಸಲಾಗಿದೆ. ಒಂದು ಮಗು ಸರ್ಕಾರಿ ಶಾಲೆಗೆ ದಾಖಲಾದರೆ, ಆ ಮಗು ತನ್ನ ಸಂಪೂರ್ಣ ಶಿಕ್ಷಣವನ್ನು ತನ್ನ ಸುತ್ತಲಿನ ಪರಿಸರದಲ್ಲೇ ಸರ್ಕಾರಿ ಶಾಲೆಗಳಲ್ಲಿ ಮುಗಿಸಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ 5 ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದರು.

ಕಲ್ಯಾಣಗಿರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಈಗ 496 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರಲ್ಲಿ 134 ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದಾರೆ. ಇವರೆಲ್ಲರೂ ನಮ್ಮದೇ ಸರ್ಕಾರಿ ಕಾಲೇಜಿಗೆ ದಾಖಲಾಗುವಂತೆ ಶಿಕ್ಷಕರು ಮತ್ತು ಪೋಷಕರು ಪ್ರೋತ್ಸಾಹ ನೀಡಬೇಕು ಎಂದರು. ಮಾಜಿ ಕಾರ್ಪೊರೇಟರ್ ಕೆ.ಸಿ.ಶೌಕತ್ ಪಾಷ, ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಮಾಧು ಸ್ವಾಮಿ, ಕಾಲೇಜು ಪ್ರಾಂಶುಪಾಲ ಶ್ರೀನಿವಾಸ ಮೂರ್ತಿ, ಉಪನ್ಯಾಸಕರಾದ ಮಹದೇವ ಸ್ವಾಮಿ, ಗೌರಮ್ಮ ಮತ್ತಿತರರು ಇದ್ದರು.

ಕಾಲೇಜು ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ತಿ.ನರಸೀಪುರ, ಮಾ.12– ಶೋಷಿತ ಹಾಗೂ ಹಿಂದುಳಿದ ವರ್ಗಗಳ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದೆಂದು ಪಟ್ಟಣದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕಾಲೇಜು ಪ್ರಾರಂಭಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿಮಹದೇವಪ್ಪ ತಿಳಿಸಿದರು.

ಎಸ್‌ಇಪಿ/ಟಿಎಸ್‌ಪಿ ಯೋಜನೆಯಡಿ 5 ಕೋಟಿ ರೂ. ವೆಚ್ಚದಲ್ಲಿ ಪಟ್ಟಣದ ತಲಕಾಡು ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 13 ಕೊಠಡಿಗಳ ನಿರ್ಮಾಣ ಹಾಗೂ 5.5 ಕೋಟಿ ರೂ. ವೆಚ್ಚದಲ್ಲಿ ತಲಕಾಡಿನ ಪ್ರಥಮ ದರ್ಜೆ ಕಾಲೇಜು ಕೊಠಡಿ ನಿರ್ಮಾಣ ಸೇರಿದಂತೆ ಒಟ್ಟು 10.5 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕಾಲೇಜು ಪ್ರಾರಂಭವಾದ ಬಳಿಕ ಇಲ್ಲಿ ಸಾವಿರಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಾಲೇಜಿಗೆ ಎಲ್ಲಾ ರೀತಿಯ ಮೂಲ ಸೌಕರ್ಯ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಇಲ್ಲಿನ ಎಲ್ಲಾ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪಗೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಕಟ್ಟಡ ನಿರ್ಮಾಣ ಕಾಮಗಾರಿ 9 ತಿಂಗಳ ಒಳಗೆ ಮುಗಿಯಬೇಕು. ಅಲ್ಲದೇ ಗುಣಮಟ್ಟದಿಂದ ಕೂಡಿರಬೇಕು ಎಂದು ಗುತ್ತಿಗೆದಾರರಿಗೆ ತಾಕೀತು ಮಾಡಿದ ಸಚಿವರು ಮುಂದಿನ ದಿನಗಳಲ್ಲಿ ಕಾಲೇಜಿಗೆ ಬೇಕಾದ ಎಲ್ಲಾ ರೀತಿಯ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಕೊಡಲು ಬದ್ಧನಾಗಿದ್ದೇನೆ ಎಂದರು.



ಕಾಲೇಜು ಕೊಠಡಿ ನಿರ್ಮಾಣ ಕಾಮಗಾರಿಗೆ ಸಚಿವ ಮಹದೇವಪ್ಪ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಕೆಡಿಪಿ ಸದಸ್ಯ ಹಾಗೂ ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್, ತಾಪಂ ಮಾಜಿ ಅಧ್ಯಕ್ಷ ಉಮೇಶ್, ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್, ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ, ಕುಕ್ಕೂರು ಗಣೇಶ್, ರಾಮಲಿಂಗಯ್ಯ ಮುಖಂಡರಾದ ಬಸವಣ್ಣ, ಲಕ್ಷ್ಮಣ, ಬಸವರಾಜು, ರಾಘು, ಶಿವರಾಂ, ಪರಶಿವಮೂರ್ತಿ, ಕಾಲೇಜಿನ ಪ್ರಾಂಶುಪಾಲ ಉದಯ ಕುಮಾರ್, ಡಾ.ವಸಂತರಾಜು, ಪುಟ್ಟಸ್ವಾಮಿ, ಡಾ.ಮಾದೇವಿ, ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ, ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ವಿಜಯಲಕ್ಷ್ಮಿ, ತಹಸೀಲ್ದಾರ್ ಸುರೇಶ್‌ಚಾರ್, ಇಓ ಚಂದ್ರು, ಪ್ರೊ.ದೇವರಾಜೇಗೌಡ, ಡಾ.ಪುಟ್ಟಸ್ವಾಮಿ, ಡಾ.ಕವಿತಾ, ಡಾ.ರೇಷ್ಮಾ ಚಂಗಪ್ಪ, ಪ್ರೊ.ಕೆಂಪರಾಜು, ಡಾ.ಡಿ.ಹರೀಶ್, ಎಂ.ಎಸ್.ನಾಗಣ್ಣ, ಡಾ.ಗಂಗಾಧರ್, ಡಾ.ಅಮಿತ್, ಪ್ರೊಫೆಸರ್‌ಗಳಾದ ಕಿರಣ್ ಕುಮಾರ್, ಅನಂತ ಪದ್ಮನಾಭ, ಸವಿತಾ, ಮಹೇಶ್, ಕಾಲೇಜು ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ, ಕಾಲೇಜಿನ ಅಧೀಕ್ಷಕ ಅಶೋಕ್ ಕುಮಾರ್, ಇಮ್ರಾನ್ ಪಾಷಾ, ಕೆಎಚ್‌ಬಿ ಇಲಾಖೆ ಕಾರ್ಯಪಾಲಕ ಅಭಿಯಂತರ ಎಂ.ಬಿ.ಸೋಮಶೇಖರ್, ಗುತ್ತಿಗೆದಾರ ರಿಷಬ್ ಗೌಡ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಭೀಮ (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಕರಟಕ ದಮನಕ (ಕ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	2 ಪ್ರದರ್ಶನಗಳು
ಸೈತಾನ್ (ಹಿಂ)	2 ಪ್ರದರ್ಶನಗಳು
ಲಿಡೋ	
ಭೀಮ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮ (ತೆ)	4 ಪ್ರದರ್ಶನಗಳು
ಪ್ರಭಾ	
ಕಾಟೇರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಗಾಮಿ (ತೆ):** ಬೆ10.40ಕ್ಕೆ, ರಾ.10.10ಕ್ಕೆ, **ಜೋಗ್ 101 (ಕ):** ಮ.1.40ಕ್ಕೆ, **ಆರ್ಟಿಕಲ್ 370 (ಹಿಂ):** ಸಂ.4ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 2	**ಕರಟಕ ದಮನಕ (ಕ):** ಬೆ.10.20ಕ್ಕೆ, **ಸೈತಾನ್ (ಹಿಂ):** ಮ.1.25ಕ್ಕೆ, ರಾ.7.10ಕ್ಕೆ, **ಡ್ಯೂನ್ ಪಾರ್ಟ್2 (ಇಂ):** ಸಂ.4ಕ್ಕೆ, **ರಂಗನಾಯಕ (ಕ):** ರಾ.9.50ಕ್ಕೆ.
ಸ್ಕ್ರೀನ್ 3	**ಬ್ಲಿಂಕ್ (ಕ):** ಬೆ.10.25ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ಮ.1.15ಕ್ಕೆ, **ಭೀಮ (ತೆ):** ಸಂ.4.10ಕ್ಕೆ, **ಮಂಜುಮಲೆ (ಮ):** ರಾ.7.10ಕ್ಕೆ, **ತಂಕಮಣಿ (ಮ):** ರಾ.9.55ಕ್ಕೆ.
ಸ್ಕ್ರೀನ್ 4	**ರಂಗನಾಯಕ (ಕ):** ಬೆ.10.35ಕ್ಕೆ, **ಕರಟಕ ದಮನಕ (ಕ):** ಮ.1ಕ್ಕೆ,, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಆಪರೇಷನ್ ವ್ಯಾಲೆಂಟೈನ್ (ತೆ):** ಬೆ.9.55ಕ್ಕೆ, **ಲಾಪತಾ ಲೇಡಿಸ್ (ಹಿಂ):** ಮ.12.45ಕ್ಕೆ, **ಡ್ಯೂನ್ ಪಾರ್ಟ್2 (ಇಂ):** ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಡ್ಯೂನ್ ಪಾರ್ಟ್2 (ಇಂ):** ಬೆ.9.50ಕ್ಕೆ, ಮ.1.20ಕ್ಕೆ, **ಕ್ರೀಂ (ಕ):** ಸಂ.4.50ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ):** ರಾ.7.25ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ರಾ.10.20ಕ್ಕೆ.
ಸ್ಕ್ರೀನ್ 3	**ಲಾಪತಾ ಲೇಡಿಸ್ (ಹಿಂ):** ಬೆ.10ಕ್ಕೆ, ರಾ.7.25ಕ್ಕೆ, **ಆರ್ಟಿಕಲ್ 370 (ಹಿಂ):** ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	**ಆಪರೇಷನ್ ವ್ಯಾಲೆಂಟೈನ್ (ತೆ):** ಮ.12ಕ್ಕೆ, **ಉಪಾಧ್ಯಕ್ಷ (ಕ):** ಮ.3.05ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ಡ್ಯೂನ್ ಪಾರ್ಟ್ 2 (ಇಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ಡೆಮೋನ್ ಸ್ಲೇಯರ್ (ಜ):** ಸಂ.4.30ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ):** ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, **ಲಾಪತಾ ಲೇಡಿಸ್ (ಹಿಂ):** ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, **ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ):** ಬೆ.11.55ಕ್ಕೆ, **ಕ್ರೀಂ (ಕ):** ಸಂ.6.55ಕ್ಕೆ, **ಪ್ರೇಮಲು (ಮ):** ರಾ.10.20ಕ್ಕೆ, **ಜೋಶುವಾ (ತ):** ಮ.1.20ಕ್ಕೆ, ಸಂ.6.55ಕ್ಕೆ, **ಭ್ರಮಯುಗಂ (ಮ):** ರಾ.9.45ಕ್ಕೆ, **ವಾರನಂ ಆಯಿರಂ (ತ):** ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೈಕೊಟ್ಟ ಪ್ರಿಯಕರ: ಯುವತಿ ಆತ್ಮಹತ್ಯೆ

ಹುಣಸೂರು, ಮಾ.12– ಪ್ರಿಯಕರ ಕೈಕೊಟ್ಟ ಪರಿಣಾಮ ಯುವತಿಯೊಬ್ಬಳು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಶ್ಯಾನಭೋಗನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮಹೇಶ್ ಹಾಗೂ ಶಾಂತಮ್ಮ ಅವರ ಪುತ್ರಿ ರಂಜಿತಾ(19) ಆತ್ಮಹತ್ಯೆ ಮಾಡಿಕೊಂಡ ಯುವತಿ.



ವಿವರ: ರಂಜಿತಾಗೆ ಕೆ.ಆರ್.ನಗರ ತಾಲೂಕಿನ ಗೌಡನಹಳ್ಳಿ ಗ್ರಾಮದ ಯುವಕನೊಂದಿಗೆ ಮದುವೆ ನಿಶ್ಚಯವಾಗಿತ್ತು. ಅದರಂತೆ ಫೆ.18ರಂದು ತಾಲೂಕಿನ ಬಿಳಿಕೆರೆ ಗ್ರಾಮದ ಮಹದೇಶ್ವರ ದೇವಸ್ಥಾನದಲ್ಲಿ ಮದುವೆ ನಡೆಯಬೇಕಿತ್ತು. ಆದರೆ ಮದುವೆಗೆ ಒಂದು ತಿಂಗಳು ಇರುವಾಗ ರಂಜಿತಾ ಪ್ರಿಯಕರ ಹಾಗೂ ಗ್ರಾಮದ ಯೋಗೇಗೌಡರ ಪುತ್ರ ವೇಣುಗೋಪಾಲ್‌ನೊಂದಿಗೆ ಓಡಿ ಹೋಗಿ ಮತ್ತೆ ಮನೆಗೆ ಬಂದಾಗ ವರನ ಕಡೆಯವರನ್ನು ಕರೆಸಿ ನ್ಯಾಯ ಪಂಚಾಯಿತಿ ನಡೆಸಿ ಮದುವೆಗೆ ಒಪ್ಪಿಸಲಾಗಿತ್ತು.

ಆದರೆ ಮತ್ತೆ ಮದುವೆಗೆ ನಾಲ್ಕು ದಿನಕ್ಕೂ ಮುನ್ನಾ(ಫೆ.14 ರಂದು) ರಂಜಿತಾ ತನ್ನ ಪ್ರಿಯಕರ ವೇಣುಗೋಪಾಲ್‌ನೊಂದಿಗೆ ಓಡಿ ಹೋಗಿದ್ದಳು. ಇದರಿಂದ ನಡೆಯಬೇಕಿದ್ದ ಮದುವೆ ನಿಂತು ಹೋಗಿತ್ತು. ಆ ಬಳಿಕ ಆಸೆ ತೋರಿಸಿ ರಂಜಿತಾಳನ್ನು ಕರೆದೊಯ್ದಿದ್ದ ವೇಣುಗೋಪಾಲ್ ಆಕೆಗೆ ಕೈ ಕೊಟ್ಟಿದ್ದ. ಈ ಸಂಬಂಧ ರಂಜಿತಾ ನನ್ನನ್ನು ಮದುವೆಯಾಗುವು ದಾಗಿ ನಂಬಿಸಿ ಕರೆದೊಯ್ದು ನನ್ನ ಮೇಲೆ ಅತ್ಯಾಚಾರವೆಸಗಿ ಆನಂತರ ಮದುವೆಯಾಗದೇ ನನಗೆ ಮೋಸ ಮಾಡಿದ್ದಾನೆ ಎಂದು ವೇಣುಗೋಪಾಲ್ ಹಾಗೂ ಇದಕ್ಕೆ ಸಹಕಾರ ನೀಡಿದ ಗ್ರಾಮದ ವೆಂಕಟೇಶಗೌಡರ ಪುತ್ರ ಮಹೇಶ ವಿರುದ್ಧ ಫೆ21 ರಂದು ಬಿಳಿಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದರು. ಬಳಿಕ ವೇಣುಗೋಪಾಲ್, ಮಹೇಶ್ ನಾಪತ್ತೆಯಾಗಿದ್ದರು. ಆದರೆ ಇದುವರೆಗೆ ಆರೋಪಿಗಳನ್ನು ಬಂಧಿಸಿಲ್ಲ ಹಾಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ನನಗೆ ನ್ಯಾಯ ಸಿಗುವುದಿಲ್ಲ ಎಂದು ಮನನೊಂದ ರಂಜಿತಾ ಇಂದು ಮನೆಯ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ನಂ.ಗೂಡಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ನಂಜನಗೂಡು, ಮಾ.12– ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಬಾಲ ಏಸು ದೇವಾಲಯದ ಧರ್ಮಗುರು ಫಾದರ್ ಅಂತಪ್ಪ ಮರಿಯಪ್ಪ ತಿಳಿಸಿದರು.

ನಗರದ ಶ್ರೀಕಂಠೇಶ್ವರ ಮಂಗಳ ಮಂಟಪದಲ್ಲಿ ಸ್ಪಂದನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮೇಲುಗೈ ಸಾಧಿಸುವ ಮೂಲಕ ತಮ್ಮ ಸಾಮರ್ಥ್ಯ ಸಾಬೀತು ಪಡಿಸಿದ್ದು, ಸಮಾಜದ ಅಭಿವೃದ್ಧಿಗೆ ಮಹಿಳೆಯರ ಪಾತ್ರ ಅಪಾರ ಎಂದರು.

ಮೈಂಡ್ ಮಿರಾಕಲ್ಸ್ ಸಂಸ್ಥೆ ಮುಖ್ಯಸ್ಥೆ ಕಾವ್ಯ ಮಾತನಾಡಿ, ಗ್ರಾಮೀಣ ಮಹಿಳೆಯರು ಸಣ್ಣ ಉದ್ದಿಮೆಗಳು ಅಥವಾ ಸ್ವಉದ್ಯೋಗದಲ್ಲಿ ತೊಡಗುವ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಬಹುದಾಗಿದೆ. ಇನ್ನು ಮಹಿಳೆಯರ ಪ್ರಗತಿಗೆ ನೆರವಾಗುವ ಯೋಜನೆಗಳ ಜಾರಿ ಜೊತೆಗೆ ಅಗತ್ಯ ಮಾರ್ಗದರ್ಶನ ಹಾಗೂ ಸಹಕಾರ ನೀಡುವ ಮೂಲಕ ಸ್ಪಂದನಾ ಸಂಸ್ಥೆ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.



ನಂಜನಗೂಡಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಗಣ್ಯರು

ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಎಸ್.ಅನಿತಾ ಮಾತನಾಡಿ, ಬದಲಾದ ಜೀವನ ಶೈಲಿಯಲ್ಲಿ ಒತ್ತಡದ ನಡುವೆ ಜೀವನ ನಡೆಸುವ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಬಹುತೇಕ ಮಹಿಳೆಯರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ರಕ್ತಹೀನತೆ ಹಾಗೂ ಕ್ಯಾನ್ಸರ್‌ನಂತಹ ರೋಗಗಳು ಮಹಿಳೆಯರನ್ನೇ ಹೆಚ್ಚಾಗಿ ಬಾಧಿಸುತ್ತಿದ್ದು, ಮಹಿಳೆಯರು ಶಿಕ್ಷಣ ಹಾಗೂ ಸ್ವಾವಲಂಬನೆ ಜೊತೆಗೆ ವೈಯಕ್ತಿಕ ಆರೋಗ್ಯ ರಕ್ಷಣೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸ್ಪಂದನಾ ಸಂಸ್ಥೆ ನೆರವಿನೊಂದಿಗೆ ಹೈನುಗಾರಿಕೆ ಕೈಗೊಂಡು ಸ್ವಾವಲಂಬನೆ ಸಾಧಿಸಿರುವ ಐದು ಮಹಿಳೆಯರ ಪೈಕಿ ಅತ್ಯುತ್ತಮ ಸಾಧನೆ ತೋರಿದ ಹೊಸಹಳ್ಳಿ ಗ್ರಾಮದ ರೈತ ಮಹಿಳೆ ಜಯಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಮಹಿಳೆಯರು ಗೀತ ಗಾಯನ ಹಾಗೂ ಸಾಮೂಹಿಕ ನೃತ್ಯ ಪ್ರದರ್ಶನಗಳ ಮೂಲಕ ರಂಜಿಸಿದರು.

ಸಮಾರಂಭದಲ್ಲಿ ಕರುಣಾಲಯ ಸಂಸ್ಥೆ ಮುಖ್ಯಸ್ಥೆ ಸಿಸ್ಟರ್ ಸೂಸೈ ಮೇರಿ, ಸಿಸ್ಟರ್ ಕಮಿಲ, ಸ್ಪಂದನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ ಮುಖ್ಯಸ್ಥೆ ಸಿಸ್ಟರ್ ಮೇಬಲ್, ಸಿಬ್ಬಂದಿ ವರ್ಗ ಸೇರಿದಂತೆ ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

ಪಕ್ಷ ಸಂಘಟನೆಗೆ ಶ್ರಮಿಸುತ್ತೇನೆ

ತಾಲೂಕು ಬಿಜೆಪಿ ನೂತನ ಅಧ್ಯಕ್ಷ ರಾಜೇಂದ್ರ



ನೂತನ ಅಧ್ಯಕ್ಷ ರಾಜೇಂದ್ರ ಅಧಿಕಾರ ಸ್ವೀಕರಿಸಿದರು.

ಪಿರಿಯಾಪಟ್ಟಣ, ಮಾ.12– ಭಾರತೀಯ ಜನತಾ ಪಕ್ಷ ನನ್ನನ್ನು ಗುರುತಿಸಿ ಬಹುದೊಡ್ಡ ಜವಾಬ್ದಾರಿ ನೀಡಿದ್ದು, ಅದನ್ನು ಶಕ್ತಿ ಮೀರಿ ನಿರ್ವಹಿಸುವ ಮೂಲಕ ಪಕ್ಷ ಸಂಘಟನೆ ಮಾಡುತ್ತೇನೆ ಎಂದು ತಾಲೂಕು ಬಿಜೆಪಿ ನೂತನ ಅಧ್ಯಕ್ಷ ರಾಜೇಂದ್ರ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ರಾಜೇಗೌಡರಿಂದ ಪಕ್ಷದ ಬಾವುಟ ಪಡೆಯುವ ಮೂಲಕ ಅಧಿಕಾರ ಸ್ವೀಕರಿಸಿ ಮಾತ ನಾಡಿದ ಅವರು, ಕೆಲವೇ ದಿನಗಳಲ್ಲಿ ದೇಶದಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಇಂತಹ ಸಂದರ್ಭ ರಾಜ್ಯ ಹಾಗೂ ಜಿಲ್ಲಾ ಮಟ್ಟದ ನಾಯಕರು ನನ್ನ ಮೇಲೆ ಭರವಸೆ ಇಟ್ಟು ತಾಲೂಕು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ನನ್ನ ಎದುರಿಗೆ ಬೆಟ್ಟದಷ್ಟು ಸವಾಲುಗಳಿದ್ದು, ಪಕ್ಷದ ಹಿರಿಯರು, ಕಿರಿಯರ ನಡುವೆ ಸಾಮರಸ್ಯ ಸಾಧಿಸಿ ಎಲ್ಲರನ್ನು ಒಟ್ಟಾಗಿ ಕರೆದೊಯ್ಯುವ ಜೊತೆಗೆ ಪಕ್ಷ ಸಂಘಟನೆ ಮಾಡಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಅಭ್ಯರ್ಥಿ ಗೆಲುವಿಗೆ ಶ್ರಮಿಸಲಾಗುವುದು. ಇದಕ್ಕೆ ತಾಲೂಕಿನ ಮುಖಂಡರ ಸಹಕಾರ ಅಗತ್ಯ ಎಂದರು.

ಈ ವೇಳೆ ಪದ ನಿಮಿತ್ತ ಅಧ್ಯಕ್ಷ ರಾಜೇಗೌಡ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಚುನಾವಣಾ ಉಸ್ತುವಾರಿ ಮೈ.ವಿ.ರವಿಶಂಕರ್, ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್, ಜಯರಾಮೇಗೌಡ, ಜಿಲ್ಲಾ ಉಪಾಧ್ಯಕ್ಷ ಸೋಮಶೇಖರ್ ಮಾತನಾಡಿದರು.

ಸಮಾರಂಭದಲ್ಲಿ ಮುಖಂಡರಾದ ಪಿ.ಪ್ರಶಾಂತಗೌಡ, ಪಿ.ವಿ.ಬಸವರಾಜಪ್ಪ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷ ನಳಿನಿಗೌಡ, ತಾಲೂಕು ಪ್ರಧಾನ ಕಾರ್ಯದರ್ಶಿ ಚನ್ನಬಸವರಾಜು, ರವಿ, ಮಾಜಿ ಅಧ್ಯಕ್ಷ ಪಿ.ಜೆ.ರವಿ, ಶಶಿ, ಚಂದ್ರು ಲೋಕಪಾಲಯ್ಯ, ಕೃಷ್ಣ, ಶುಭಗೌಡ ಸೇರಿದಂತೆ ಇತರರಿದ್ದರು.

ತಿ.ನರಸೀಪುರದಲ್ಲಿ ಧ್ರುವನಾರಾಯಣ್ ಸ್ಮರಣೆ



ತಿ.ನರಸೀಪುರ, ಮಾ.12– ಸರಳ ಸಜ್ಜನಿಕೆಯ ಪಕ್ಷಾತೀತ ನಾಯಕ ದಿ.ಆರ್.ಧ್ರುವನಾರಾಯಣ್ ಎಂದು ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಅಮ್ಜದ್ ಖಾನ್ ತಿಳಿಸಿದರು.

ಪಟ್ಟಣದ ಕಾರು ಮಾಲೀಕರು ಮತ್ತು ಚಾಲಕರ ಸಂಘದ ಮುಂಭಾಗ ಆಯೋಜಿಸಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಬಡವರ ಪಾಲಿಗೆ ದೇವರಾಗಿದ್ದ ಧ್ರುವನಾರಾಯಣ್ ಅವರು ಇಂದು ನಮ್ಮೊಂದಿಗೆ ಇಲ್ಲದಿರುವುದು ತುಂಬಲಾರದ ನಷ್ಟ, ಅವರ ಅಭಿವೃದ್ಧಿ ಕಾರ್ಯಗಳು ಎಂದಿಗೂ ಅಜರಾಮರ ಎಂದರು.

ಕ್ಷೇತ್ರದ ಅಭಿವೃದ್ಧಿ ಹಾಗೂ ಚಾಮರಾಜನಗರ ಜಿಲ್ಲೆ ಪ್ರಗತಿಗೆ ಶ್ರಮಿಸಿದ್ದ ಧ್ರುವನಾರಾಯಣ್ ಅವರು ಜನರ ಮಧ್ಯ ಓಡಾಡದ ದಿನವೇ ಇಲ್ಲ. ಅವರದು ಜನಪರ ರಾಜಕಾರಣಕ್ಕೆ ಮಾದರಿ ವ್ಯಕ್ತಿತ್ವ ಎಂದರು.

ಕಾಂಗ್ರೆಸ್ ಪಕ್ಷದ ಆಸ್ತಿಯಾಗಿದ್ದ ಧ್ರುವನಾರಾಯಣ್ ಅವರು ಶಾಸಕ, ಸಂಸದರಾಗಿ ಕ್ಷೇತ್ರದ ಅಭಿವೃದ್ಧಿಗೆ ನಿರಂತರ ಶ್ರಮಿಸಿದವರು. ಹೀಗಾಗಿ ಅವರ ಅಗಲಿಕೆ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ ಕನ್ನಡ ನಾಡಿಗೆ ತುಂಬಲಾರದ ನಷ್ಟ ಎಂದರು.

ಗ್ರಾಪಂ ಸದಸ್ಯ ಕಾರ್ ಮಲ್ಲಪ್ಪ, ದಸಂಸ ಜಿಲ್ಲಾ ಸಂಚಾಲಕ ಡಾ.ಚಂದ್ರಶೇಖರ್, ನಾಗ, ಶ್ರೀನಿವಾಸಗೌಡ, ದಿನೇಶ್, ಪ್ರಕಾಶ್, ಮಂಜು, ರಾಜಣ್ಣ, ರವಿ, ಪುಟ್ಟರಾಜು ಸೇರಿದಂತೆ ಇನ್ನಿತರರಿದ್ದರು.

ಹ್ಯಾಂಡ್‌ಪೋಸ್ಟ್‌ನಲ್ಲಿ ನಂದಿನಿ ಕ್ಷೀರ ಕೇಂದ್ರ ಉದ್ಘಾಟನೆ



ಹೆಚ್.ಡಿ.ಕೋಟೆ, ಮಾ.12– ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿ ನಂದಿನಿ ಕ್ಷೀರ ಕೇಂದ್ರವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.


ನಂತರ ಮಾತನಾಡಿದ ಅವರು, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ಹೆಚ್ಚು ಬಡ ಕುಟುಂಬಗಳೇ ಇರುವ ಹಿನ್ನೆಲೆಯಲ್ಲಿ ಮೈಮುಲ್ ನಿರ್ದೇಶಕ ಈರೇಗೌಡ ಅವರು ಬಡ ಕುಟುಂಬದ ಯುವಕ–ಯುವತಿಯರ ಅನುಕೂಲಕ್ಕಾಗಿ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ನಂದಿನಿ ಕ್ಷೀರ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅವರು ಸ್ವಾಲಂಬಿ ಜೀವನ ನಡೆಸಲು ಸಹಕಾರಿಯಾಗಿದ್ದಾರೆ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕರಾದ ಈರೇಗೌಡ, ದಾಕ್ಷಾಯಿಣಿ, ಪುರಸಭಾ ಸದಸ್ಯ ಪ್ರೇಮ್ ಸಾಗರ್, ನಂದಿನಿ ಕ್ಷೀರ ಕೇಂದ್ರ ಮಾಲೀಕ ಮೂರ್ತಿ, ಮಾರುಕಟ್ಟೆ ವ್ಯವಸ್ಥಾಪಕ ಜೈಶಂಕರ್, ಹಿರಿಯ ವಿಸ್ತರಣಾಧಿಕಾರಿ ಆರಿಫ್ ಇಕ್ಬಾಲ್, ಅಧಿಕಾರಿಗಳಾದ ಜಯಂತ್ ಕುಮಾರ್, ರಾಮಪ್ಪ ಬಾರ್ಕಿ, ಜಗದಾಂಬ, ಚಾಲಕ ಮೂರ್ತಿ ಇನ್ನಿತರರಿದ್ದರು.

ಬನ್ನಿಕುಪ್ಪೆ ಪಿಎಸಿಎಸ್ ನೂತನ ಕಚೇರಿ ಉದ್ಘಾಟನೆ

ಹುಣಸೂರು, ಮಾ.12– ತಾಲೂಕಿನ ಬನ್ನಿಕುಪ್ಪೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಚೇರಿಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರೈತರು ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದ ಅವರು ಸಂಘದ ಪ್ರತಿ ಹಂತದಲ್ಲೂ ನಾನು ನಿಮ್ಮ ಜೊತೆ ನಿಲ್ಲುತ್ತೇನೆ ನೀವು ಧೃತಿಗೆಡಬೇಡಿ ಎಂದರು.



ಕಾರ್ಯಕ್ರಮದಲ್ಲಿ ರಾಜ್ಯ ಹಾಲು ಒಕ್ಕೂಟದ ನಿರ್ದೇಶಕ ಕುಮಾರ್, ಪಿಎಸಿಎಸ್ ಅಧ್ಯಕ್ಷ ಜ್ಯೋತಿಕುಮಾರ್, ಗ್ರಾಪಂ ಅಧ್ಯಕ್ಷ ಗೋವಿಂದನಾಯಕ, ಉದ್ಯಮಿ ಶ್ರೀಧರ್, ಯಜಮಾನ ಕೂಸಪ್ಪ ಪಿಡಿಓ ರಾಘವೇಂದ್ರ ಪ್ರಸನ್ನ, ಸಿಇಓ ಮಂಜುನಾಥ್.ಜಿ, ಗುತ್ತಿಗೆದಾರ ಸೋಮಶೇಖರ್, ಉಪಾಧ್ಯಕ್ಷ ವಿ.ಅಶೋಕ್ ಹಾಗೂ ನಿರ್ದೇಶಕರಾದ ಗೋವಿಂದೇಗೌಡ, ಜಯರಾಮ, ಚೆಲುವರಾಜು, ಪುಟ್ಟನಾಯ್ಕ, ನಾಗಯ್ಯ, ಅಣ್ಣಯ್ಯ ನಾಯಕ, ಚೌಡ ನಾಯಕ, ಈಶ್ವರಗೌಡ, ಲಲಿತಮ್ಮ, ಚಿಕ್ಕತಾಯಮ್ಮ ಇತರರಿದ್ದರು.

ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್‌ಗೆ ಸಿದ್ದಶೆಟ್ಟಿ ಅಧ್ಯಕ್ಷ



ತಿ.ನರಸೀಪುರ, ಮಾ.12– ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ತಾಲೂಕು ನೂತನ ಅಧ್ಯಕ್ಷರಾಗಿ ಕೇತಹಳ್ಳಿ ಸಿದ್ದಶೆಟ್ಟಿ ಆಯ್ಕೆಯಾದರು. ಪಟ್ಟಣದ ಕಬಿನಿ ಅಥಿತಿ ಗೃಹದಲ್ಲಿ ನೂತನ ಅಧ್ಯಕ್ಷ ಕೇತಹಳ್ಳಿ ಸಿದ್ದಶೆಟ್ಟಿ ಮಾತನಾಡಿ, ಸಮಾಜದ ಯಜಮಾನರು, ಮುಖಂಡರು ನನ್ನ ಮೇಲೆ ವಿಶ್ವಾಸವಿಟ್ಟು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಸಮಾಜಕ್ಕೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ತಲುಪಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ದುಡಿಯುತ್ತೇನೆ ಎಂದರು.

ಇದೇ ವೇಳೆ ಉಪಾಧ್ಯಕ್ಷ ದೊಡ್ಡೆಬಾಗಿಲು ಮೊಳೆ ರಮೇಶ್, ವೆಂಕಟರಾಮು, ಪ್ರಧಾನ ಕಾರ್ಯದರ್ಶಿ ಎಂ.ಸಿ.ರಾಜಣ್ಣ, ಹಾಗೂ ಮುಖಂಡರಾದ ಕೇತಹಳ್ಳಿ ನಿಂಗಶೆಟ್ಟಿ, ಕೊತ್ತೇಗಾಲ ಮಹದೇವ, ಬುಲ್ಲುಶೆಟ್ಟಿ, ನಾಗಣ್ಣ ತೊಟ್ಟವಾಡಿ, ಸೋಮಣ್ಣ, ಶ್ರೀನಿವಾಸ, ಮಹದೇವ, ಜಯಣ್ಣ ಮುಂತಾದವರು ಹಾಜರಿದ್ದರು.

ಪುಟ್ಟಮ್ಮ ನಿಧನ



ಹಿರಿಕ್ಯಾತನಹಳ್ಳಿ, ಮಾ.12– ಹುಣಸೂರು ತಾಲೂಕಿನ ಹಿರಿಕ್ಯಾತನಹಳ್ಳಿ ಗ್ರಾಮದ ಹೈಸ್ಕೂಲ್ ಬಡಾವಣೆ ನಿವಾಸಿ ಪುಟ್ಟಮ್ಮ (95) ಮಂಗಳವಾರ ಮುಂಜಾನೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಂಬಾಕು ಬೆಳೆಗಾರರಿಗೆ ಎಫ್‌ಸಿಎಚ್ 248 ತಳಿ ವಿತರಣೆಗೆ ನಿರ್ಧಾರ

ಹುಣಸೂರು, ಮಾ.12– ತಂಬಾಕು ಬೆಳೆಗಾರರಿಗೆ ಎಫ್‌ಸಿಎಚ್ 248 ತಳಿ ವಿತರಿಸಲು ಕೇಂದ್ರಿಯ ತಂಬಾಕು ಸಂಶೋಧನಾ ಕೇಂದ್ರ ನಿರ್ಧರಿಸಿದೆ ಎಂದು ಆಂಧ್ರ ಪ್ರದೇಶದ ರಾಜಮುಂಡ್ರಿ ಕೇಂದ್ರಿಯ ತಂಬಾಕು ಸಂಶೋಧನಾ ಕೇಂದ್ರದ ನಿರ್ದೇಶಕ ಡಿ.ಎಂ.ಶೇಷು ಮಾಧವ್ ತಿಳಿಸಿದರು.

ನಗರದ ಸಿಟಿಆರ್‌ಐ ಶಾಖೆಯಲ್ಲಿ ನಡೆದ ತಂಬಾಕು ಕೃಷಿಯಲ್ಲಿ ಅನುಸರಿಸಬೇಕಾದ ಉತ್ತಮ ಪದ್ಧತಿಗಳು ಕುರಿತ 2 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ರಾಜಮುಂಡ್ರಿಯಿಂದ ಆನ್‌ಲೈನ್(ವಿಸಿ) ಮೂಲಕ ಮಾತನಾಡಿದ ಅವರು, ಮೈಸೂರು ಮೈಸೂರು ಜಿಲ್ಲೆ ವ್ಯಾಪ್ತಿಯ ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ರೈತರು ಸಿಟಿಆರ್‌ಐ ವಿಜ್ಞಾನಿಗಳು ನೀಡಿದ ಸಲಹೆ ಸೂಚನೆ ಅಳವಡಿಸಿಕೊಂಡ ಕಾರಣ ಈ ಬಾರಿ ಭೀಕರ ಬರಗಾಲದಲ್ಲೂ 87 ಮಿಲಿಯನ್ ಕೆಜಿ ಹೊಗೆಸೊಪ್ಪು ಬೆಳೆದಿರುವುದು ಶ್ಲಾಘನೀಯ. ಈವರೆಗೆ ಎಫ್‌ಸಿಹೆಚ್ 222 ತಳಿಯನ್ನು ರೈತರು ಬಳಸುತ್ತಿದ್ದರು. ಹುಣಸೂರು ಕೇಂದ್ರದಿಂದ ಇದೀಗ ಇನ್ನಷ್ಟು ಸುಧಾರಿತ ತಳಿಯಾದ ಎಫ್‌ಸಿಎಚ್ 248 ತಳಿ ಬಳಕೆಗೆ ಸಿದ್ಧವಾಗಿದ್ದು, ಈ ಸಾಲಿನಿಂದಲೇ (2024–25) ವಿತರಿಸಲು ನಿರ್ಧರಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಮತ್ತೊಂದು ಸುಧಾರಿತ ತಳಿಯಾದ ಎಫ್‌ಸಿಎಚ್ 1(ಹೈಬ್ರಿಡ್) ಅನ್ನು ರೈತರಿಗೆ ಒದಗಿಸಲಾಗುವುದು ಎಂದರು.



ತರಬೇತಿ ಕಾರ್ಯಕ್ರಮವನ್ನು ಡಾ.ಎಸ್.ರಾಮಕೃಷ್ಣನ್ ಉದ್ಘಾಟಿಸಿದರು.

ವಿಜ್ಞಾನಿಗಳ ಸಲಹೆ ಸೂಚನೆ ಪಾಲಿಸಿ: ತಂಬಾಕು ಕೃಷಿಯಲ್ಲಿ ಮುಖ್ಯವಾಗಿ ಸಮಯಕ್ಕೆ ಸರಿಯಾಗಿ ನರ್ಸರಿ ಆರಂಭಿಸುವುದು ಅಗತ್ಯ. ಹೀಗಾಗಿ ಈ ಭಾಗದ ರೈತರು ಮೇ ಮೊದಲ ವಾರ ನರ್ಸರಿ ಆರಂಭಿಸಬೇಕು. ರಸಗೊಬ್ಬರಗಳನ್ನು ಎರಡು ಹಂತದಲ್ಲಿ ಬಳಸುವುದು, ಕ್ಯಾಲ್ಸಿಯಂ ನೈಟ್ರೇಟ್ ಬಳಕೆ(ಎಕರೆಗೆ ಒಂದು ಬ್ಯಾಗ್), ಅಗತ್ಯವಾಗಿರುವ ಕುಡಿ ಮತ್ತು ಕಂಕುಳು ಕುಡಿ ನಿರ್ವಹಣೆ ಮುಂತಾದ ಉಪಕ್ರಮಗಳನ್ನು ವಿಜ್ಞಾನಗಳು ತಿಳಿಸಿದ್ದು, ಅದನ್ನು ಅನುಸರಿಸುವ ಮೂಲಕ ರೈತರು ಉತ್ತಮ ಇಳುವರಿ ಮತ್ತು ಗುಣಮಟ್ಟ ಪಡೆಯಬಹುದಾಗಿದೆ ಎಂದರು.

ನಂತರ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹುಣಸೂರು ಶಾಖೆ ಮುಖ್ಯಸ್ಥ ಡಾ.ಎಸ್.ರಾಮಕೃಷ್ಣನ್, ರೈತರು ನರ್ಸರಿ ಹಂತದಲ್ಲಿ ರೆಡೋಮಿಲ್ ಗೋಲ್ಡ್ ಅಥವಾ ಮಕ್ಕೋ ಗೋಲ್ಡ್ ಔಷಧವನ್ನು 20 ಗ್ರಾಂ. ಪುಡಿಯನ್ನು 10 ಲೀಟರ್ ನೀರಿನ ಕ್ಯಾನ್‌ಗೆ ಮಿಶ್ರಣಮಾಡಿ ಬಳಸುವುದು ಮತ್ತು 10 ಎಂಎಲ್ ಗ್ಲೋ ಇಟ್ ಔಷಧವನ್ನು 15ಲೀ. ನೀರಿಗೆ ಮಿಶ್ರಣ ಮಾಡಿ ಸಿಂಪರಣೆ ಮಾಡುವ ಮೂಲಕ ನರ್ಸರಿಯಲ್ಲಿನ ಕಾಂಡ ಕೊಳೆತ ತಡೆಗಟ್ಟಲು ಸಾಧ್ಯವಿದೆ ಎಂದರು.

ತಂಬಾಕು ಮಂಡಳಿ ಪ್ರಾದೇಶಿಕ ವ್ಯವಸ್ಥಾಪಕ ಅಧಿಕಾರಿ ಪಿ.ಸುಬ್ಬರಾವ್, ಐಟಿಸಿ ಕಂಪನಿ ವ್ಯವಸ್ಥಾಪಕ ಚನ್ನವೀರೇಶ್, ಹರಾಜು ಅಧೀಕ್ಷಕ ರಾಮ್‌ಮೋಹನ್ ಸೂರಿ, ಹಿರಿಯ ವಿಜ್ಞಾನಿ ಎಂ.ಮಹದೇವಸ್ವಾಮಿ ಹಾಗೂ ಪ್ರಗತಿಪರ ರೈತರು ಹಾಜರಿದ್ದರು.

ಮಾಜಿ ಶಾಸಕ ವಾಸು ಅವರಿಗೆ ಶ್ರದ್ಧಾಂಜಲಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಮಾಜಿ ಶಾಸಕ ದಿ.ವಾಸು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ಮಾ.12(ಜಿಎ)–ಇತ್ತೀಚೆಗೆ ನಿಧನರಾದ ಪತ್ರಿಕೋದ್ಯಮಿಯೂ ಆದ ಮಾಜಿ ಶಾಸಕ ವಾಸು ಅವರಿಗೆ ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತರು ಶ್ರದ್ಧಾಂಜಲಿ ಸಲ್ಲಿಸಿದರು.

ಈ ವೇಳೆ ಹಿರಿಯ ಪತ್ರಕರ್ತ ಕೆ.ದೀಪಕ್ ಮಾತನಾಡಿ, ವಾಸು ಅವರು ಕೇವಲ ರಾಜಕಾರಣಿ ಮಾತ್ರವಾಗಿರಲಿಲ್ಲ. ಅವರ 'ಪ್ರಜಾನುಡಿ' ಪತ್ರಿಕೆಯಿಂದ ಅನೇಕ ಪತ್ರಕರ್ತರು ಸೃಷ್ಟಿಯಾದರು. ಅದು ಉದ್ಯಮವಾಗದೇ ಪತ್ರಕರ್ತರನ್ನು ತಯಾರು ಮಾಡುವ ಸಂಸ್ಥೆಯಾಗಿದೆ ಎಂದರು.

ವಾಸು ಅವರಂತಹ ದೊಡ್ಡ ವ್ಯಕ್ತಿಗಳು ಮರೆಯಾದಾಗಲಷ್ಟೇ ತುಂಬಲಾರದ ನಷ್ಟ ಎಂಬ ಪದದ ಮಹತ್ವ ಅರಿವಾಗುತ್ತದೆ. ಅವರು ಮೃದು ಸ್ವಭಾವದವರಾಗಿದ್ದರೂ, ಮಹಾನ್ ಛಲವಾದಿ. ಅವರು ಇರುವಷ್ಟು ದಿನ ಎಲ್ಲವನ್ನು ಸಾಧಿಸಬೇಕು ಎಂಬ ಮನಸ್ಥಿತಿ ಹೊಂದಿದ್ದರು. ಅವರು ಸಾಧಿಸಿಯೂ ಇದ್ದಾರೆ ಎಂದರು.

ವಾಸು ಅವರ ಪುತ್ರರಾದ ಕವೀಶ್ ಗೌಡ ಮಾತನಾಡಿ, ತಂದೆ ಅವರು ತಮ್ಮ ಜೀವನದ ಉದ್ದಕ್ಕೂ ಛಲದಿಂದಲೇ ಬದುಕಿದ್ದರು. ಹಾಗೇ ಜನರನ್ನು ತಮ್ಮ ಕುಟುಂಬಸ್ಥರು ಎಂಬಂತೆ ನೋಡಬೇಕೆಂದು ನಮಗೂ ತಿಳಿಸಿಕೊಟ್ಟಿದ್ದಾರೆ. ಅವರ ಶ್ರಮ, ತ್ಯಾಗ ಇಲ್ಲದಿದ್ದರೆ ನಮಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ದೊರೆಯುತ್ತಿರಲಿಲ್ಲ. ಅವರು ಸ್ಥಾಪಿಸಿರುವ ಶಿಕ್ಷಣ ಸಂಸ್ಥೆ ಮೊದಲಾದವನ್ನು ಸಮರ್ಥವಾಗಿ ಮುನ್ನಡೆಸುತ್ತೇವೆ. ಅವರ ಕನಸನ್ನು ಸಾಕಾರಗೊಳಿಸಲು ಶ್ರಮಿಸುವುದಾಗಿ ತಿಳಿಸಿದರು.

ಈ ವೇಳೆ ಅನೇಕ ಹಿರಿಯ ಪತ್ರಕರ್ತರು ವಾಸು ಅವರೊಂದಿಗಿನ ತಮ್ಮ ಸಂಬಂಧ ಸ್ಮರಿಸಿದರು. ಹಿರಿಯ ಪತ್ರಕರ್ತ ಪ್ರಭುರಾಜನ್, ವಾಸು ಪುತ್ರರಾದ ಅವೀಶ್‌ಗೌಡ, ರಿತೇಶ್‌ಗೌಡ ಇತರರು ಉಪಸ್ಥಿತರಿದ್ದರು.

ಹರಿಯಾಣ ನೂತನ ಮುಖ್ಯಮಂತ್ರಿಯಾಗಿ ನಯಾಬ್ ಸಿಂಗ್ ಸೈನಿ ಪ್ರಮಾಣವಚನ




ಚಂಡೀಗಢ: ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಕುರುಕ್ಷೇತ್ರದ ಸಂಸದ ನಯಾಬ್ ಸಿಂಗ್ ಸೈನಿ ಅವರು ಮಂಗಳವಾರ ಹರಿಯಾಣದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಸೈನಿ ಅವರು ಇಂದು ಬೆಳಗ್ಗೆ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾದ ನಂತರ ಮಧ್ಯಾಹ್ನ ರಾಜಭವನಕ್ಕೆ ತೆರಳಿ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರನ್ನು ಭೇಟಿ ಮಾಡಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಕೇಂದ್ರ ಸಚಿವ ಅರ್ಜುನ್ ಮುಂಡಾ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಮತ್ತು ಹರಿಯಾಣ ಬಿಜೆಪಿ ಉಸ್ತುವಾರಿ ಬಿಪ್ಲಬ್ ದೇಬ್ ಅವರು ಸೈನಿ ಸಾಥ್ ನೀಡಿದರು. ಇಂದು ಸಂಜೆ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ನಯಾಬ್ ಸಿಂಗ್ ಸೈನಿ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಸೈನಿ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಲೋಕಸಭೆ ಚುನಾವಣೆಗೆ ಕೆಲವೇ ವಾರಗಳು ಬಾಕಿ ಇರುವಾಗ ಆಡಳಿತಾರೂಢ ಭಾರತೀಯ ಜನತಾ ಪಕ್ಷ ಹರಿಯಾಣ ಮುಖ್ಯಮಂತ್ರಿಯನ್ನು ಬದಲಾಯಿಸಿರುವುದು ಅಚ್ಚರಿ ಮೂಡಿಸಿದೆ. ಅಕ್ಟೋಬರ್‌ನಲ್ಲಿ ಹರಿಯಾಣ ವಿಧಾನಸಭೆ ಚುನಾವಣೆ ನಡೆಯಲಿದೆ.

ಅನಂತಕುಮಾರ ಹೆಗಡೆ ಬಂಧಿಸಲು ಆಗ್ರಹ



ಅನಂತಕುಮಾರ್ ಹೆಗಡೆ

ಮೈಸೂರು,ಮಾ.12–ಸಂವಿಧಾನ ಬದಲಾವಣೆ ಮಾಡಬೇಕೆಂದು ಪದೇ ಪದೆ ಹೇಳುತ್ತಿರುವ ಸಂಸದ ಅನಂತಕುಮಾರ್ ಹೆಗಡೆ ಅವರ ಮೇಲೆ ದೇಶದ್ರೋಹ ಪ್ರಕರಣ ದಾಖಲಿಸಿ ಬಂಧಿಸಬೇಕು ಎಂದು ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ರಾಜ್ಯದ ಬಿಜೆಪಿ ನಾಯಕರಿಗೆ ಸಂವಿಧಾನದ ಬಗ್ಗೆ ಗೌರವವಿದ್ದರೆ ಕೂಡಲೇ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಒತ್ತಾಯಿಸಿದೆ. ಅನಂತಕುಮಾರ್ ಹೆಗಡೆ ಹೇಳಿಕೆ ದೇಶದ ಕೋಟ್ಯಾಂತರ ಅಂಬೇಡ್ಕರ್ ಅನುಯಾಯಿಗಳಿಗೆ, ಭಾರತ ಮಾತೆಗೆ ಮಾಡಿದ ಅವಮಾನವೆಂದು ಸಮಿತಿ ಭಾವಿಸುತ್ತದೆ. ಈ ದೇಶದ ಚುಕ್ಕಾಣಿ ಹಿಡಿದಿರುವ ಪ್ರಧಾನಿ ಮೋದಿ ಅವರಿಗೆ ಸಂವಿಧಾನ ಮೇಲೆ ಗೌರವಿದ್ದರೆ ಅವರನ್ನು ಪಕ್ಷ ದಿಂದ ಉಚ್ಚಾಟಿಸಬೇಕು. ಒಂದು ವೇಳೆ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತೆ ಅವಕಾಶ ಮಾಡಿಕೊಟ್ಟರೆ ಪರೋಕ್ಷವಾಗಿ ತಾವೂ ಹೇಳಿಕೆಯನ್ನು ಸಮರ್ಥಿಸಿಕೊಂಡ ಹಾಗೆ ಎಂದು ಭಾವಿಸ ಬೇಕಾಗುತ್ತದೆ. ಇದೇ ಬಿಜೆಪಿಯ ಆಂತರಿಕ ಕಾರ್ಯಸೂಚಿ ಎಂದೇ ಭಾವಿಸಬೇಕಾ ಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14ನೇ ವರ್ಷದ ಸವಿನೆನಪು



ನೀವು ನಮ್ಮಿಂದ ದೂರವಾಗಿ 14 ವಸಂತಗಳೇ ಕಳೆಯಿತು ಆದರೆ ನಮ್ಮಲ್ಲಿ ನಿಮ್ಮ ನೆನಪುಗಳು ಮಾತ್ರ ಶಾಶ್ವತವಾಗಿ ಉಳಿಯಿತು. ನಿಮ್ಮ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುವೆವು

ಬಿ.ಸುನಂದ

ದುಃಖತಪ್ತರು: ಪತಿ: ನಂಜೇಗೌಡ, ಮಕ್ಕಳಾದ: ಎನ್.ವಿಕಾಸ್, ಎನ್.ಮನೋಜ್, ಸೊಸೆ ಮಾನಸ ಹೆಚ್.ಎನ್

11ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು

R.P. ನಂಜುಂಡಸ್ವಾಮಿ, S. ರವಿಕುಮಾರ್ ಮತ್ತು ಸ್ನೇಹಿತರು

R. ಶ್ರೀನಿವಾಸ್
ಬನ್ನೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಐಟಂ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಅವರ ಮಾಲೀಕರಾದ, ಕೊಡಗು–571201, ಮಡಿಕೇರಿ, ಇಬ್ನಿವಳವಾಡಿ, ಬೋಯಿಕೆರಿ, ಬಿ.ಎಂ. ರಸ್ತೆ ಅಲೆಯಾಸ್ ಎಸ್ಟೇಟ್ ರ ನಿವಾಸಿಯಾದ ಶ್ರೀ. ಜೇಬಾಯ್ ಮ್ಯಾಥ್ಯೂಸ್ ಬಿನ್. ಲೇ. ಕೆ. ಒ. ಮ್ಯಾಥ್ಯೂಸ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಐಟಂ ಸ್ವತ್ತುಗಳ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಐಟಂ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಐಟಂ ಸ್ವತ್ತುಗಳನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ ನಂ.1– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂಬರ್. 15/2 ರಲ್ಲಿನ ಮೂರು ಎಕರೆ ತೊಂಬತ್ತೇಳು ಸೆಂಟ್ (3.97.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚೆಕ್ಕುಬಂದಿ ಪೂರ್ವಕ್ಕೆ:– ಸರ್ವೆ ನಂಬರ್: 21/1, 21/2, 21/11 ಮತ್ತು ಹಳ್ಳ, ಪಶ್ಚಿಮಕ್ಕೆ: ಸರ್ವೆ ನಂಬರ್: 13/1, 13/5, ಮತ್ತು 14, ಉತ್ತರಕ್ಕೆ: – ಸರ್ವೆ ನಂಬರ್: 15/1, ದಕ್ಷಿಣಕ್ಕೆ:– ಸರ್ವೆ ನಂಬರ್: 40/1 ರ ಖಾಸಗಿ ಜಮೀನು ಮತ್ತು ರಸ್ತೆ.

ಐಟಂ ನಂ.–2: ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂಬರ್. 21/12 ರಲ್ಲಿನ ಐದು ಎಕರೆ ಐವತ್ತು ಸೆಂಟ್ (5.50.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚೆಕ್ಕುಬಂದಿ, ಪೂರ್ವಕ್ಕೆ:– ಸರ್ವೆ ನಂಬರ್: 21/11 ಮತ್ತು ರಸ್ತೆ, ಪಶ್ಚಿಮಕ್ಕೆ:– ಸರ್ವೆ ನಂಬರ್: 21/11 ಮತ್ತು ನಾಲೆ, ಉತ್ತರಕ್ಕೆ: ಸರ್ವೆ ನಂಬರ್: 21/11, ದಕ್ಷಿಣಕ್ಕೆ:– ಸರ್ವೆ ನಂಬರ್: 21/1 ಮತ್ತು ರಸ್ತೆ.

11–3–2024
ಮೈಸೂರು

Sd/- M.N.Prakash Kalappa,
Advocate, KAR 1996-2000
2-3, First Floor, PRI Complex, 67/7A,
New Sayyaji Rao Road, Fort Mohalla,
Mysore-570004. Mob: 9343112535
Email: mnprakashkalappa@gmail.com

WANTED

Civil Engineer (BE) Male
2 years Experience - 1 No.
Accounts Executive (B.Com)
Female 2 years Experience - 1 No

9902878039



ಸ್ನೇಹ ಜೀವಿ ಶಂಕರ್ ಟೀ ಸ್ಟಾಲ್ ಮಾಲೀಕರಾದ ಆರ್.ಶಂಕರ್ (ಶ್ಯಾಮ್) ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು



ಶುಭಕೋರುವವರು: ನಂಜುಂಡಸ್ವಾಮಿ, ಅಧ್ಯಕ್ಷರು, ಸಿಂಹದಮರಿ ಸೇವಾ ಟ್ರಸ್ಟ್ (ರಿ) ಶಿವರಾಜ್‌ಕುಮಾರ್ ಮತ್ತು ಅಪ್ಪು ಅಭಿಮಾನಿಗಳ ಸಂಘ, ಶಿವರಾಂಪೇಟೆ, ಮೈಸೂರು

ಬೇಕಾಗಿದ್ದಾರೆ

Office Boy / Collection Executive
ಮೈಸೂರು ನಿವಾಸಿ ಆಗಿರಬೇಕು
Two ವೀಲರ್ ಹೊಂದಿರಬೇಕು

7349672310

WANTED

DRIVER WITH 5+ years experience for a silks store.
Driving + store work.
Salary 16k, Contact

99723 45090

ಮೈಸೂರು ಮಿತ್ರ 44 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ರಮಾಣ ಪತ್ರ

ಪಿ ಬಿ ಆಯಿಷ W/o ಸಯಾಜ್ ಅಹ್ಮದ್, 39 ವರ್ಷ ಆದ ನಾನು ರಹಾತ್ ನಗರ, ಹುಣಸೂರು ಟೌನ್, ಮೈಸೂರು ಜಿಲ್ಲೆಯಲ್ಲಿ ವಾಸವಿದ್ದು, ನನ್ನ ಹೆಸರು ಆಧಾರ್ ಕಾರ್ಡ್, ಪಾನ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಚುನಾವಣೆ ಗುರುತಿನ ಚೀಟಿ, ರೇಷನ್ ಕಾರ್ಡ್‌ನಲ್ಲಿ ಪಿ ಬಿ ಆಯಿಷ ಎಂದು ನಮೂದಾಗಿದೆ. ಆದರೆ ನನ್ನ ಪಾಸ್‌ಪೋರ್ಟ್‌ನಲ್ಲಿ ಆಯಿಷ (ಸರ್ ನೇಮ್ ಆಯಿಷ ಬೆಂಗಳೂರು ಬಾಬು) ಎಂದು ತಪ್ಪಾಗಿ ನಮೂದಾಗಿದೆ. ನನ್ನ ಸರಿಯಾದ ಹೆಸರು ಪಿ ಬಿ ಆಯಿಷ ಎಂದು ನೋಟರಿ ಹೆಚ್.ದಿನೇಶ್ ರವರ ಸಮುಖದಲ್ಲಿ ದಿನಾಂಕ 12–3–2024ರಂದು ಪ್ರಮಾಣೀಕರಿಸುತ್ತೇನೆ.

ಸಹಿ/– ಪಿ ಬಿ ಆಯಿಷ

ಜಮೀನು & ಸೈಟು ಮಾರಾಟಕ್ಕಿದೆ

ಮೈಸೂರು ತಾ||, ಜಯಪುರ ಹೋ||, ಮಾವಿನಹಳ್ಳಿಯಲ್ಲಿ 3 ಎಕರೆ 7 ಗುಂಟೆ ತಳೂರು ಸರ್ಕಲ್ ಮುಂದೆ 1 ಎಕರೆ 4 ಗುಂಟೆ, ಮಹಾಲಕ್ಷ್ಮಿ ಲೇಔಟ್ ಪಕ್ಕ ಮುಕ್ಕೂರು 20 ಗುಂಟೆ, ಗೋಪಾಲಪುರ 25 ಗುಂಟೆ ಮತ್ತು ದಟ್ಟಗಳ್ಳಿ ಕನಕದಾಸನಗರ 3ನೇ ಹಂತ, ಮೈಸೂರು 40X60 ಸೈಟು ಮತ್ತು ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:

9945661696, 9663793666

COMPLETED CBSE BOARD EXAMS?

Interested in obtaining the best training for PUC Science with NEET / CET / JEE OR Commerce with CA / CPT?
Experts will talk to you.
Contact : **91410 54735 / 37**

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194, 9606783264

GRANITE

20M.M. Granites Available @
Rs. 50 to 65
in all colours

CALL: 8296743479

ಬೇಕಾಗಿದ್ದಾರೆ

ಜಯಲಕ್ಷ್ಮಿಪುರಂನಲ್ಲಿ ವಾಸವಾಗಿರುವ ನಿವೃತ್ತ ಅಧಿಕಾರಿಯ ಮನೆಗೆ ಕೆಲಸಕ್ಕಾಗಿ ಬೇಕಾಗಿದ್ದಾರೆ.

9606222435

TO-LET

Independent 2 BHK readily available on rent with all the facilities at Martikyathanalli gate on Gaddige Main Road (Near new petrol bunk)
Genuine persons may contact:

9731769347/ 9902934365

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಚಾಮುಂಡೇಶ್ವರಿ ಅಮ್ಮನವರ ದೇವಾಲಯ ಕಾರ್ಯನಿರ್ವಾಹಕಾಧಿಕಾರಿಗಳ ಕಾರ್ಯಾಲಯ
ಚಾಮುಂಡಿಬೆಟ್ಟ, ಮೈಸೂರು– 570 011.
ದೂರವಾಣಿ: 0821–2590027 ಇಮೇಲ್: cochamunditemple@gmail.com

ಎಸ್.ಸಿ.ಟಿ./4/ಸಿಆರ್/02/ಗೋಶಾಲೆ/ಹಸಿ/ಒಣಹುಲ್ಲು/2023–24 ದಿನಾಂಕ: 12–03–2024

ಟೆಂಡರ್ ಪ್ರಕಟಣೆ

ವಿಷಯ:–ಚಾಮುಂಡಿಬೆಟ್ಟ, ಶ್ರೀ ಚಾಮುಂಡೇಶ್ವರಿದೇವಸ್ಥಾನದ ಗೋಶಾಲೆಯ ಹಸು ಮತ್ತು ಕರುಗಳಿಗೆ ದಿನನಿತ್ಯದ ಉಪಯೋಗಕ್ಕಾಗಿ ಹಸಿಹುಲ್ಲು ಮತ್ತು ಒಣಹುಲ್ಲು ಸರಬರಾಜು ಮಾಡಲು ಟೆಂಡರ್‌ಮೂಲಕ ದರಪಟ್ಟಿಯನ್ನು ಕರೆಯುವ ಬಗ್ಗೆ

ಚಾಮುಂಡಿಬೆಟ್ಟ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಗೋಶಾಲೆಯ ಹಸು ಮತ್ತು ಕರುಗಳಿಗೆ ದಿನನಿತ್ಯದ ಉಪಯೋಗಕ್ಕಾಗಿ ಹಸಿಹುಲ್ಲು ಮತ್ತು ಒಣಹುಲ್ಲನ್ನು ದಿನಾಂಕ: 01–04–2024 ರಿಂದ ದಿನಾಂಕ: 31–03–2025 ರವರೆಗೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಟೆಂಡರ್‌ಮೂಲಕ ದರಪಟ್ಟಿಯನ್ನು ಕರೆಯಲಾಗಿದೆ. ಆಸಕ್ತರು ಹಸಿಹುಲ್ಲು ಮತ್ತು ಒಣಹುಲ್ಲನ್ನು ಸರಬರಾಜು ಮಾಡಲು ಪ್ರತ್ಯೇಕವಾಗಿ ರೂ 5,000–00 (ಐದು ಸಾವಿರ ಮಾತ್ರ) ಗಳ ಭದ್ರತಾ ಠೇವಣಿಯ ಡಿ.ಡಿ.ಯೊಂದಿಗೆ ಸೀಲು ಮಾಡಿದ ಲಕೋಟೆಯ ದರಪಟ್ಟಿಗಳನ್ನು ದಿನಾಂಕ: 19–03–2023 ರ ಸಂಜೆ 5–00 ಗಂಟೆಯ ಒಳಗಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಈ ಕಛೇರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ದರಪಟ್ಟಿಗಳನ್ನು ಅಂಗೀಕರಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ.

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
(An Autonomous Institute of Govt. Of
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599
No:HIMS/CLIB//E-Tender/05/2023-24. Date: 12.03.2024

ಇ–ಟೆಂಡರ್ ಪ್ರಕಟಣೆ

ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ 2024 ನೇ ವರ್ಷಕ್ಕೆ ಅವಶ್ಯಕತೆ ಇರುವ ನಿಯತಕಾಲಿಕಗಳನ್ನು ಖರೀದಿ ಮಾಡುವ ಸಂಬಂಧ ಇ–ಟೆಂಡರ್ ಆಹ್ವಾನಿಸಿದ್ದು, ನೊಂದಾಯಿಸಲ್ಪಟ್ಟ ಅಧಿಕೃತ ನಿರ್ವಹಣೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಕ್ರ.ಸಂ.01)ವಿವರ: ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ 2024 ನೇ ವರ್ಷಕ್ಕೆ ಅವಶ್ಯಕತೆ ಇರುವ ನಿಯತಕಾಲಿಕಗಳನ್ನು ಇ–ಟೆಂಡರ್ ಮೂಲಕ ಖರೀದಿ ಮಾಡುವ ಸಂಬಂಧ ಇ–ಟೆಂಡರ್ ಆಹ್ವಾನಿಸಿರುವ ಬಗ್ಗೆ, ಅಂದಾಜು ಮೊತ್ತ: 50,00,000/– ಇ.ಎಂ.ಡಿ: 1,25,000/– ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಡನೆ ಇ–ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ:13.03.2024 ರಿಂದ ಪ್ರಾರಂಭವಾಗುವುದು, ಭರ್ತಿ ಮಾಡಿದ ಇ–ಟೆಂಡರ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ:28.03.2024 ರ ಸಂಜೆ 5.00 ಗಂಟೆ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು, ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ ಮುಖ್ಯ ಆಡಳಿತಾಧಿಕಾರಿಗಳು, ಹಿಮ್ಸ್, ಹಾಸನ ಇವರ ಕಛೇರಿಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಜಿಸಹಿ/ಹಾಸನ/913/ಆರ್‌ಒಸಿ/917/2023–24

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(E-mail:-khsdrp.divmys@gmail.com)
ಸಂ: ಆಕುಕ/ಇಂ.ವಿ./ಕಾ.ಅ/ಮೈ/ಸಅ–3/ಟೆಂಡರ್–28–2ನೇ ಕರೆ/2023–24
ದಿನಾಂಕ: 06.03.2024

ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಕೊಡಗು ಜಿಲ್ಲೆಯ, ಮಡಿಕೇರಿಯಲ್ಲಿರುವ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರವೇಶ ದ್ವಾರಕ್ಕೆ ಸ್ವಾಗತ ಕಮಾನು ಹಾಗೂ ಭದ್ರತಾ ಕೊಠಡಿ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ & ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ನ 2ನೇ ಕರೆಯನ್ನು ಆಹ್ವಾನಿಸಲಾಗಿದೆ. **ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:** 1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 15.03.2024 ಸಂಜೆ 16.00 ಘಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 16.03.2024 ಸಂಜೆ 16.10 ಘಂಟೆಯವರೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ಸೂಚನೆ:** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು

DIPR/DDMYS/KSMCA/1283/2023-24

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ / कर्मचारी भविष्य निधि संगठन
EMPLOYEES' PROVIDENT FUND ORGANISATION
(ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ/श्रम एवं रोजगार मंत्रालय भारत सरकार)
(Ministry of Labour & Employment, Govt. of India)
ಪ್ರಾದೇಶಿಕ ಕಚೇರಿ, ಭವಿಷ್ಯ ನಿಧಿ ಭವನ, ಗಾಯತ್ರಿಪುರಂ, ಮೈಸೂರು -19
क्षेत्रीय कार्यालय, भविष्य निधि भवन, गायत्रीपुरम, मैसूरू - 19
Regional Office, Bhavishyanidhi Bhavan, Gayathripuram, Mysuru-19
Tele: 0821-2599200/222 Email: ro.mysore@epfindia.gov.in Website: www.epfindia.gov.in

सं.No.कर्नाKN/भनिPF/क्षेकाRO/मैसूरूMYS/1812508/810/673/23-24 Dt:11.03.2024

ನೋಟೀಸ್

ಕಾರ್ಮಿಕ ಭವಿಷ್ಯ ನಿಧಿ ಮತ್ತು ವಿವಿಧ ನಿಬಂಧನೆಗಳ ಕಾಯಿದೆ, 1952 ರ ಸೆಕ್ಷನ್ 7A ಅಡಿಯಲ್ಲಿ ನೋಟಿಸ್ ನೀಡಲಾಗಿದೆ.

ಸೆಕ್ಷನ್ 7A ಅಡಿಯಲ್ಲಿ ಈ ಕೆಳಗಿನ ಸಂಸ್ಥೆಗಳ ವಿರುದ್ಧ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿದೆ. ಸಮನ್ಸ್ ಅನ್ನು ಉದ್ಯೋಗದಾತ/ಸಂಸ್ಥೆಯ ಲಭ್ಯವಿರುವ ಎಲ್ಲಾ ವಿಳಾಸಗಳಿಗೆ ಕಳುಹಿಸಲಾಗಿದೆ, ತಲುಪಿಸದೆ ಹಿಂತಿರುಗಿಸಲಾಗಿದೆ. ಆದ್ದರಿಂದ, ಈ ಸಂಸ್ಥೆಗಳ ಉದ್ಯೋಗದಾತರು / ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳು ತಮ್ಮ ಪ್ರಕರಣವನ್ನು ಪ್ರತಿನಿಧಿಸಲು 20.03.2024 ರಿಂದ 22.03.2024 ರ ನಡುವೆ ಕಛೇರಿ ಸಮಯದಲ್ಲಿ ಮೌಲ್ಯಮಾಪನ ಅಧಿಕಾರಿಯ ಕಚೇರಿಗೆ ಹಾಜರಾಗಲು / ಸಂಪರ್ಕಿಸಲು ನಿರ್ದೇಶಿಸಲಾಗಿದೆ. ಹೇಳಲಾದ ದಿನಾಂಕಗಳಲ್ಲಿ ಪ್ರಾಧಿಕಾರದ ಮುಂದೆ ಹಾಜರಾಗಲು ವಿಫಲವಾದರೆ, ಯಾವುದೇ ಹೆಚ್ಚಿನ ಅವಕಾಶವನ್ನು ನೀಡದೆ ಮತ್ತು ಈ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳೊಂದಿಗೆ ಪ್ರಾಧಿಕಾರವು 7A ವಿಚಾರಣೆಯನ್ನು ಮುಕ್ತಾಯಗೊಳಸುತ್ತದೆ.

ಕ್ರ.ಸಂ	ಸ್ಥಾಪನೆ ಕೋಡ್	ಸಂಸ್ಥೆಯ ಹೆಸರು ಮತ್ತು ವಿಳಾಸ	7ಎ ವಿಚಾರಣೆಯ ಅವಧಿ
1.	KNMYS1812508000	M/S.CHARM SOFT VALLEY No.270, 3rd Floor, Janatha Nagar, Mysore – 570009	11/2018 to 03/2019

ಮಾರ್ಚ್, 2024 ರ 11 ನೇ ಈ ದಿನದಂದು ಮೈಸೂರಿನಲ್ಲಿ ನೀಡಲಾಗಿದೆ.

ಸ್ಥಳ: ಮೈಸೂರು
ದಿನಾಂಕ:11.03.2024

Sd/-
ಪ್ರಾದೇಶಿಕ ಭ.ನಿ .ಆಯುಕ್ತರು– II
ಪ್ರಾದೇಶಿಕ ಕಛೇರಿ, ಮೈಸೂರು

PM SHRI

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರು
पी एम श्री केन्द्रीय विद्यालय मैसूर,
(शिक्षा मंत्रालय, भारत सरकार के अधीन एक स्वायत्त निकाय)
PM SHRI KENDRIYA VIDYALAYA, MYSURU,
GITB, PRESS CAMPUS, SIDDHARTHNAGAR, MYSURU - 570011
(An Autonomous Body Under MOE, Government of India)
0821-2473515, Web site: https://mysore.kvs.ac.in
Email-kvmysore@gmail.com

आज़ादी का अमृत महोत्सव · G20 भारत 2023 INDIA

F.84/PM ShriKVMysuru/2023-24/ Date:07.03.2024

अनुपयोगी वस्तुओं की सार्वजनिक नीलामी हेतु सूचना
NOTICE FOR PUBLIC AUCTION OF CONDEMNED ARTICLES

निम्नलिखित अप्रचलित वस्तुएं (जैसी है उसी आधार पर) 28.03.2024 को सुबह 11.00 बजे से दोपहर 12.00 बजे के बीच पीएम श्री केंद्रीय विद्यालय मैसूर के परिसर में नीलामी में बेची जानी हैं। इच्छुक पार्टियां नीलामी शुरू होने से एक दिन पहले या उसी तारीख को नकद के रूप में 1000/-रुपये की राशि जमा करके नीलामी में भाग ले सकती हैं।

The following obsolete articles (As is where is basis) are to be sold on auction in the premises of PM SHRI Kendriya Vidyalaya Mysuru on 28.03.2024 between 11.00 AM to 12.00 Noon.

Interested parties may participate in the auction by depositing caution money of Rs.1000/- in form of cash one day before or on the same date before commencement of the auction.

1) Furniture/ फर्नीचर
2) Library/ पुस्तकालय
3) IT Equipment's/ आईटी उपकरण
4) Work Education/ कार्य शिक्षा
5) Misc. Assets(Other Assets)/ अन्य संपत्तियां
6) Music/ संगीत
7) CMP & A V Aids/ सीएमपी और एवी एड्स
8) IT Products and UPS Systems/ आईटी उत्पाद और यूपीएस सिस्टम

सफल बोली लगाने वाले को वस्तुओं की कुल लागत जमा करने के बाद उसी दिन शाम 5.00 बजे तक नीलामी सामग्री उठानी होगी। यदि सफल बोलीदाता बोली को अंतिम रूप देने के बाद स्वयं वापस ले लेता है, तो राशि जब्त कर ली जाएगी। अप्रचलित लेखों की विस्तृत सूची के लिए, आप हमारी वेबसाइट पर जा सकते हैं: https://mysore.kvs.ac.in/

The Successful bidder has to lift the auction articles by 5.00 PM positively on the same day after depositing the Total Cost of articles. If the successful bidder withdraws himself/herself after finalization of the bid, the caution money shall be forfeited. For detailed list of obsolete articles, you may visit our Website: https://mysore.kvs.ac.in/

Sd/- Principal